ಮಂಗಳವಾರ, ಅಕ್ಟೋಬರ್ 18, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani
ಪ್ರಜಾ ವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ನಾವೆಲ್ಲರೂ ತಪ್ಪುಗಳನ್ನು ಮಾಡುವವರೇ. ಆದರೆ, ತಪ್ಪೊಪ್ಪಿಗೆಯಿಂದ ನೆಮ್ಮದಿ ಸಾಧ್ಯ.

ಗುಂಡಿ ಗಂಡಾಂತರ

ಲುಲು ಗ್ಲೋಬಲ್ ಮಾಲ್ ಬಳಿ ಕೆಎಸ್‌ಆರ್‌ಟಿಸಿ ಬಸ್ ಹರಿದು ಮಹಿಳೆ ಗಂಭೀರ

ಮೃತ್ಯುಕೂಪವಾದ ರಸ್ತೆಗುಂಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿ ತಪ್ಪಿಸಲು ಹೋಗಿ ವನಿತಾ (22) ಎಂಬುವವರ ಬೈಕ್ ಸೋಮವಾರ ಬೆಳಿಗ್ಗೆ ಅಪಘಾತಕ್ಕೀಡಾಗಿದೆ. ವನಿತಾ ಗಾಯಗೊಂಡಿದ್ದು, ಹಿಂಬದಿ ಸವಾರರಾಗಿದ್ದ ಅವರ ತಾಯಿ ಉಮಾದೇವಿ (42) ಸ್ಥಿತಿ ಗಂಭೀರವಾಗಿದೆ.

ಸ್ಕೂಟಿಯಲ್ಲಿ ಸಾಗುತ್ತಿದ್ದಾಗ ರಾಜಾಜಿನಗರದ ಲುಲು ಗ್ಲೋಬಲ್ ಮಾಲ್ ಬಳಿ ಗುಂಡಿ ತಪ್ಪಿಸಲು ವನಿತಾ ಸ್ಕೂಟಿಯನ್ನು ಬಲಭಾಗಕ್ಕೆ ಚಲಾಯಿಸಿದರು. ಆಗ ಹಿಂದಿಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಸ್ಕೂಟಿಗೆ ಡಿಕ್ಕಿ ಹೊಡೆಯಿತು. ಕೆಳಕ್ಕೆ ಬಿದ್ದ ಉಮಾದೇವಿ ಮೇಲೆ ಬಸ್ ಹರಿಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಉಮಾದೇವಿ ಅವರು ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಸ್ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಸಂತನಗರದ ಉಮಾದೇವಿ ಹೋಂ ಕೇರ್ ಟೇಕರ್ ಆಗಿ ಕೆಲಸ ಮಾಡುತ್ತಿದ್ದರು. ಭಾನುವಾರ ಶ್ರೀನಗರದ ಪುತ್ರಿಯ ಮನೆಗೆ ತೆರಳಿದ್ದರು. ಸೋಮವಾರ ಬೆಳಿಗ್ಗೆ ಪುತ್ರಿಯ ಮನೆಯಿಂದ ಸ್ಕೂಟಿಯಲ್ಲಿ ಬರುತ್ತಿರುವಾಗ ಈ ಘಟನೆ ನಡೆದಿದೆ’ ಎಂದು ಕುಟುಂಬದ ಸದಸ್ಯರು ತಿಳಿಸಿದರು.



ಉಮಾದೇವಿ ಹಾಗೂ ವನಿತಾ

ಪ್ರತಿಭಟನೆ, ಆಕ್ರೋಶ: ಬಿಬಿಎಂಪಿ ನಿರ್ಲಕ್ಷ್ಯ ಖಂಡಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ರಸ್ತೆಯಲ್ಲಿ ಬಿದ್ದ ಗುಂಡಿಗಳಲ್ಲಿ ಉರುಳು ಸೇವೆ ನಡೆಸಿ ಪ್ರತಿಭಟಿಸಿದರು. ಸ್ಥಳೀಯರೂ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದರು.

ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಕ್ಷೇತ್ರದ ಶಾಸಕ ದಿನೇಶ್ ಗುಂಡೂರಾವ್ ಸ್ಥಳಕ್ಕೆ ಬರಬೇಕೆಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ರಸ್ತೆತಡೆ ನಡೆಸಲು ಮುಂದಾದ ವೇಳೆ ಪೊಲೀಸರು ಪ್ರತಿಭಟನಕಾರರನ್ನು ಬಂಧಿಸಿದರು.

ನಗರ ಅಧ್ಯಕ್ಷ ಮೋಹನ್ ದಾಸರಿ, ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ, ರಮೇಶ್, ದಿನೇಶ್, ವೇಣುಗೋಪಾಲ್ ಹಾಜರಿದ್ದರು.

ಕಾರ್ಪೊರೇಷನ್ ರಸ್ತೆಯಲ್ಲೂ ಗುಂಡಿಗಳು ಬಿದ್ದಿದ್ದು, ಭಾನುವಾರ ರಾತ್ರಿ ಬೈಕ್‌ನಲ್ಲಿ ತೆರಳುವಾಗ ವ್ಯಕ್ತಿ ಆಯತಪ್ಪಿ ಬಿದ್ದು ಅವರ ಕಾಲಿಗೂ ಗಾಯವಾಗಿದೆ.

ವಾಟಾಳ್ ನಾಗರಾಜ್ ರಸ್ತೆಯಲ್ಲಿ ಸಂಭವಿಸಿದ ರಸ್ತೆ ಅಪಘಾತ ದುರದೃಷ್ಟಕರ ಎಂದು ಶಾಸಕ ಎಸ್.ಸುರೇಶ್‌ಕುಮಾರ್ ಪ್ರತಿಕ್ರಿಯಿಸಿದ್ದಾರೆ.

‘ವರದಿ ಆಧರಿಸಿ ಕ್ರಮ’

‘ಲುಲು ಮಾಲ್ ಬಳಿ ಸಂಭವಿಸಿರುವ ಅಪಘಾತದಲ್ಲಿ ಪೊಲೀಸರಿಂದ ಬರುವ ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುತ್ತದೆ. ನಮ್ಮಿಂದ ತೊಂದರೆಯಾಗಿ ಅಪಘಾತವಾಗಿದ್ದರೆ ಪರಿಹಾರ ನೀಡಲಾಗುತ್ತದೆ. ನಂತರ ಶಿಸ್ತುಕ್ರಮದ ಬಗ್ಗೆಯೂ ತನಿಖೆ ನಡೆಸಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

> ಈ ಘಟನೆ ದುರಾದೃಷ್ಟಕರ. ಅಪಘಾತ ಕುರಿತ ವರದಿ ನೀಡುವಂತೆ ಕೇಳಿದ್ದೇನೆ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

‘ಶಿಲ್ಪಶ್ರೀ ಚೇತರಿಕೆಗೆ ಸಮಯ ಬೇಕು’

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಈಚೆಗೆ ಬಿಎಂಟಿಸಿ ಬಸ್ ಮೈ ಮೇಲೆ ಹರಿದ ಪರಿಣಾಮ ತೀವ್ರ ಗಾಯಗೊಂಡಿದ್ದ ವಿದ್ಯಾರ್ಥಿನಿ ಶಿಲ್ಪಶ್ರೀ (22) ಅವರು ಚೇತರಿಸಿಕೊಳ್ಳಲು ಇನ್ನೂ ಕಾಲಾವಕಾಶ ಬೇಕಿದೆ ಎಂದು ಫೋರ್ಟಿಸ್ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ಕೋಲಾರ ಜಿಲ್ಲೆ ಬಂಗಾರಪೇಟೆಯ ಡಿ.ಕೆ.ಹಳ್ಳಿ ಬಳಿಯ ದಾಸರಹಳ್ಳಿ ನಿವಾಸಿ ಶಿಲ್ಪಶ್ರೀ, ಬೆಂಗಳೂರು ವಿವಿ ಗಣಿತ ವಿಭಾಗದಲ್ಲಿ ಎಂ.ಎಸ್ಸಿ ವ್ಯಾಸಂಗ ಮಾಡುತ್ತಿದ್ದರು. ಬಸ್ ಹತ್ತುವುದಕ್ಕೂ ಮುನ್ನವೇ ಬಸ್ ಮುಂದಕ್ಕೆ ಚಲಿಸಿತ್ತು. ಶಿಲ್ಪಶ್ರೀ ಆಯತಪ್ಪಿ ಬಿದ್ದಿದ್ದರು.



ಅಪಘಾತ ಸಂಭವಿಸಿದ ರಾಜಾಜಿನಗರ ರಸ್ತೆಯಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು



ಅಪಘಾತದ ಬಳಿಕ ಬಿಬಿಎಂಪಿ ಸಿಬ್ಬಂದಿ ಗುಂಡಿ ಮುಚ್ಚಿದರು – ಪ್ರಜಾವಾಣಿ ಚಿತ್ರ

ಇನ್ನೆಷ್ಟು ಬಲಿ ಬೇಕು: ಎಚ್‌ಡಿಕೆ ಆಕ್ರೋಶ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ ಬಹುತೇಕ ರಸ್ತೆಗಳು ಗುಂಡಿಗಳಿಂದ ಕೂಡಿವೆ. ದುರಸ್ತಿಗೂ ಮೊದಲು ಇನ್ನೆಷ್ಟು ಬಲಿ ಪಡೆಯಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಸ್ತೆ ಗುಂಡಿಯ ಕಾರಣಕ್ಕೆ ಲುಲು ಮಾಲ್ ಸಮೀಪ ಮಹಿಳೆಯೊಬ್ಬರು ಬಿದ್ದು ತೀವ್ರವಾಗಿ ಗಾಯಗೊಂಡಿದ್ದಾರೆ. ಗುಂಡಿ ಬಿದ್ದ ರಸ್ತೆಗಳು ರಾಜ್ಯದ ಗೌರವವನ್ನು ಮೂರಾಬಟ್ಟೆ ಮಾಡುತ್ತಿವೆ. ಇಂತಹ ಘಟನೆಗಳು ನಡೆದಾಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧಿಕಾರಿಗಳ ಜತೆ ವಿಡಿಯೊ ಸಂವಾದ ಮಾಡುತ್ತಾರೆ. ಇಂತಹ ಸಂವಾದಗಳು ಎಷ್ಟೋ ಆಗಿವೆ. ಆದರೆ, ಗುಂಡಿಗಳು ಮಾತ್ರ ಹಾಗೆಯೇ ಇವೆ ಎಂದು ಕುಟುಕಿದ್ದಾರೆ.

ಸರ್ಕಾರ ಜನರ ಜೀವಗಳನ್ನು ಕಾಪಾಡುವ ಕೆಲಸ ಮಾಡುತ್ತಿಲ್ಲ. ಮಳೆಯ ನೆಪ ಹೇಳುತ್ತಿದೆ. ಕರ್ನಾಟಕದಲ್ಲಿ ಮಾತ್ರ ಮಳೆ ಆಗಿದೆಯೇ? ಮಳೆಗೆ ಅಗತ್ಯವಾದ ಸಿದ್ಧತೆಗಳನ್ನೂ ಈ ಸರ್ಕಾರ ಮಾಡಿಕೊಂಡಿಲ್ಲ. ಒಡಿಶಾ ಸೇರಿದಂತೆ ಹಲವು ರಾಜ್ಯಗಳಲ್ಲಿ ಅಧಿಕ ಮಳೆ ಸುರಿದರೂ, ರಸ್ತೆಗಳ ಗುಣಮಟ್ಟ ಹಾಳಾಗಿಲ್ಲ. ಗುಂಡಿ ಬಿದ್ದರೆ ತಕ್ಷಣ ದುರಸ್ತಿ ಮಾಡುತ್ತಾರೆ. ನಮ್ಮಲ್ಲಿ ಅಂತಹ ಕೆಲಸ ಆಗುತ್ತಿಲ್ಲ. ಬದಲಿಗೆ ಗುಂಡಿಗಳ ಹೆಸರಲ್ಲಿ ಹಣ ಕೊಳ್ಳೆ ಹೊಡೆಯುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ವಸೂಲಿ ಮಾಡುವುದೇ ಸರ್ಕಾರದ ಕೆಲಸ: ಅರಸೀಕೆರೆ ಸಮೀಪ ನಡೆದ ರಸ್ತೆ ಅಪಘಾತ ರಾಜ್ಯವನ್ನೇ ತಲ್ಲಣಗೊಳಿಸಿದೆ. ಸರ್ಕಾರ ರಸ್ತೆಯ ಸ್ಥಿತಿಗತಿಯ ಸಮೀಕ್ಷೆ ನಡೆಸಬೇಕು. ಇಂತಹ ಕೆಲಸ ಮಾಡದೇ ಸರ್ಕಾರ ವಸೂಲಿಗೆ ನಿಂತಿದೆ. ಪೊಲೀಸರು ರಸ್ತೆಗಳಲ್ಲಿ ನಿಂತು ಜನರ ವಾಹನಗಳನ್ನು ನಿಲ್ಲಿಸಿ, ವಸೂಲಿ ಮಾಡುತ್ತಾರೆ. ರಾತ್ರಿ ಎಲ್ಲರೂ ಹಂಚಿಕೊಳ್ಳುತ್ತಾರೆ ಎಂದು ಆರೋಪಿಸಿದರು.

ಪಂಚರತ್ನ ನ.1ರಿಂದ ಆರಂಭ: ಪಂಚರತ್ನ ಯಾತ್ರೆ ನ.1ರಿಂದ ಆರಂಭವಾಗುತ್ತದೆ. ಮೂರು ಹಂತಗಳಲ್ಲಿ ನಡೆಯುವ ಈ ರಥಯಾತ್ರೆ ಫೆಬ್ರುವರಿವರೆಗೂ ನಡೆಯಲಿದೆ ಎಂದರು.

ಮನೆಗಳ ಮೇಲೆ ಕನ್ನಡ ಬಾವುಟ: ನ.1ರಂದು ಪ್ರತಿ ಮನೆಯ ಮೇಲೂ ಕನ್ನಡ ಬಾವುಟ ಹಾರಿಸಲು ಜೆಡಿಎಸ್ ಸಂಕಲ್ಪ ಮಾಡಿದೆ. ರಾಜ್ಯದ ಎಲ್ಲ ಜನರು ಸ್ವ ಇಚ್ಛೆಯಿಂದ ತಮ್ಮ ಮನೆಗಳ ಮೇಲೆ ಕನ್ನಡ ಬಾವುಟ ಹಾರಿಸಬೇಕು. ಈ ಕುರಿತು ಶಾಸಕರ ಸಭೆಯಲ್ಲಿ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದರು.

ರಸ್ತೆಗುಂಡಿ ದುರಸ್ತಿ: ಮಳೆಯಿಂದ ಕುಂಠಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲು ನಾವು ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದೇವೆ. ಆದರೆ ಮಳೆಯಿಂದ ಪ್ರಗತಿ ಕುಂಠಿತವಾಗಿದೆ. ಪ್ರಮುಖ ರಸ್ತೆಗಳಲ್ಲೇ ಇನ್ನೂ ಎರಡು ಸಾವಿರ ಗುಂಡಿಗಳಿವೆ. ಶೀಘ್ರವೇ ಎಲ್ಲವನ್ನೂ ಮುಚ್ಚಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ನಗರದಲ್ಲಿ ರಸ್ತೆಗುಂಡಿಗಳ ಸಂಖ್ಯೆ ದಿನವೂ ಬದಲಾಗುತ್ತದೆ. ಮಳೆಯಿಂದ ಗುಂಡಿಗಳು ಹೆಚ್ಚಾಗುತ್ತಲೇ ಇವೆ. ಈವರೆಗೆ ನಾವು ಸುಮಾರು 23 ಸಾವಿರ ರಸ್ತೆ ಗುಂಡಿಗಳನ್ನು ಮುಚ್ಚಿದ್ದೇವೆ. ಪ್ರಮುಖ ರಸ್ತೆಗಳಲ್ಲಿ 500ಕ್ಕೂ ಹೆಚ್ಚು ಗುಂಡಿಗಳಿವೆ ಎಂದು ಹೈಕೋರ್ಟ್‌ಗೆ ಮಾಹಿತಿ ಕೊಟ್ಟಿದ್ದೇವೆ. ಇದೀಗ ವಾಸ್ತವದಲ್ಲಿ ಒಂದೂವರೆ ಸಾವಿರದಿಂದ ಎರಡು ಸಾವಿರ ಗುಂಡಿಗಳಿರಬಹುದು’ ಎಂದು ಸುದ್ದಿಗಾರರಿಗೆ ವಿವರ ನೀಡಿದರು.

‘ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸ ಆಗಿಲ್ಲ ಅಥವಾ ಎಂಜಿನಿಯರ್‌ಗಳು ಮಾಡುತ್ತಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಮಳೆಯಿಂದಾಗಿ ಹಾಟ್ ಮಿಕ್ಸ್ ಮಾಡಲು ಸಾಧ್ಯವಾಗುತ್ತಿಲ್ಲ. ಕೋಲ್ಡ್ ಮಿಕ್ಸ್ ಘಟಕಕ್ಕೆ ಬೇಕಾಗಿರುವ ಸಾಮಗ್ರಿಗಳು ಪೂರೈಕೆಯಾಗುತ್ತಿಲ್ಲ. ಮಳೆಯಿಂದ ಅವೂ ತೇವಾಂಶದಿಂದ ಕೂಡಿವೆ. ಹೀಗಾಗಿ, ಸದ್ಯಕ್ಕೆ ಕಲ್ಲು ಹಾಗೂ ವೆಟ್ ಮಿಕ್ಸ್ ಹಾಕಲು ತುರ್ತು ಕ್ರಮ ಕೈಗೊಳ್ಳುತ್ತಿದ್ದೇವೆ. ಮುಂದೆ ಮಳೆ ನಿಂತಮೇಲೆ ಎಲ್ಲ ರೀತಿಯ ದುರಸ್ತಿ ಕಾಮಗಾರಿ ನಡೆಸುತ್ತೇವೆ’ ಎಂದರು.

ಪೈಥಾನ್ ಯಂತ್ರದಿಂದ ರಸ್ತೆ ಗುಂಡಿಗಳನ್ನು ಮುಚ್ಚುವ ಪ್ರಕ್ರಿಯೆ ಗುತ್ತಿಗೆ ಆಧಾರದಲ್ಲಿದೆ. ಅದರಂತೆ ಅವರು ಕಾರ್ಯ ನಿರ್ವಹಿಸಬೇಕು. ಪೈಥಾನ್ ಯಂತ್ರದಿಂದ ಗುತ್ತಿಗೆದಾರರು ಗುಂಡಿ ಮುಚ್ಚಬೇಕು. ಅದನ್ನು ಅವರು ಮಾಡದಿದ್ದರೆ ಕೆಲಸ ಮಾಡಿಸಬೇಕು. ಅವರು ಮಾಡದಿದ್ದರೆ ಅವರನ್ನು ಕೆಲಸದಿಂದ ತೆಗೆದುಹಾಕಬೇಕು. ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

₹ 6,000 ಕೋಟಿ ಅನುದಾನ: ಅಶೋಕ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಗುಂಡಿ ಮುಚ್ಚುವುದು, ಡಾಂಬರೀಕರಣ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ₹ 6,000 ಕೋಟಿ ಅನುದಾನ ಒದಗಿಸಿದ್ದರೂ, ಮಳೆಯಿಂದ ಕೆಲಸ ಮಾಡಲು ಆಗುತ್ತಿಲ್ಲ’ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ರಸ್ತೆ ಗುಂಡಿ ತಪ್ಪಿಸಲು ಹೋಗಿ ಅಪಘಾತದಲ್ಲಿ ಮಹಿಳೆಯೊಬ್ಬರು ಗಾಯಗೊಂಡಿರುವ ಕುರಿತು ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ಸಮಸ್ಯೆ ನಮಗೂ ಅರ್ಥ ಆಗಿದೆ. ರಸ್ತೆ ಗುಂಡಿ ಮುಚ್ಚುವ ಕುರಿತು ಬಿಬಿಎಂಪಿ ಆಯುಕ್ತರ ಜತೆ ನಾನು ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚರ್ಚೆ ನಡೆಸಿದ್ದೇವೆ. ಆದರೆ, ಮಳೆಯಿಂದ ಕಾಮಗಾರಿಗೆ ಅಡ್ಡಿಯಾಗುತ್ತಿದೆ’ ಎಂದು ಹೇಳಿದರು.

ಒತ್ತುವರಿ ತೆರವು ನಿಲ್ಲದು: ‘ಒತ್ತುವರಿ ತೆರವು ಕಾರ್ಯಾಚರಣೆ ನಿಲ್ಲುವುದಿಲ್ಲ. ಬಡವ, ಶ್ರೀಮಂತ ಯಾರೇ ಒತ್ತುವರಿ ಮಾಡಿದ್ದರೂ ತೆರವು ಮಾಡಲಾಗುವುದು. ನಿಷ್ಪಕ್ಷಪಾತವಾಗಿ ಕಾರ್ಯಾಚರಣೆ ನಡೆಸುವಂತೆ ಆಯುಕ್ತರಿಗೆ ನಿರ್ದೇಶನ ನೀಡಲಾಗಿದೆ’ ಎಂದರು.

ರಾಜಕಾಲುವೆಯಲ್ಲಿ ಕೊಚ್ಚಿ ಹೋದ ಮಗು

ಬೆಂಗಳೂರು: ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಬೆಳಗೆರೆ ರಸ್ತೆಯಲ್ಲಿರುವ ರಾಜಕಾಲುವೆಯಲ್ಲಿ ವಿನೋದ್ ಎಂಬುವವರ ಪುತ್ರ ಕಬೀರ್ (3) ಕೊಚ್ಚಿಹೋಗಿದ್ದಾನೆ.

ಶೋಭಾ ಗ್ರೀನ್ ಅಪಾರ್ಟ್‌ಮೆಂಟ್ ಬಳಿಯ ಶೆಡ್‌ವೊಂದರಲ್ಲಿ ವಿನೋದ್, ಪತ್ನಿ ಮತ್ತು ಇಬ್ಬರು ಮಕ್ಕಳ ಜತೆಗೆ ವಾಸವಾಗಿದ್ದರು. ವಿನೋದ್ ಫುಡ್ ಡೆಲಿವರಿ ಬಾಯ್ ಆಗಿದ್ದರು. ಭಾನುವಾರ ಸಂಜೆ ಕಬೀರ್ ತನ್ನ ಸ್ನೇಹಿತರ ಜತೆಗೆ ಆಟವಾಡಲು ರಾಜಕಾಲುವೆ ಬಳಿಗೆ ತೆರಳಿದ್ದಾನೆ. ಆಗ ಆಯತಪ್ಪಿ ಬಿದ್ದಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಲಾಗಿತ್ತು. ಸ್ಥಳಕ್ಕೆ ಬಂದ ಸಿಬ್ಬಂದಿ ಭಾನುವಾರವೇ ಶೋಧ ಕಾರ್ಯ ನಡೆಸಿದರೂ ಪತ್ತೆಯಾಗಿರಲಿಲ್ಲ. ಸೋಮವಾರವೂ ಕಾರ್ಯಾಚರಣೆ ನಡೆಸಿದರೂ ಸುಳಿವು ಸಿಕ್ಕಿಲ್ಲ.

ಪೂರ್ವ ವಲಯದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್‌ರಿಂದ 9 ಕಿ.ಮೀ ನಡಿಗೆ

ಪರಿಶೀಲನೆ; ಪರಿಹಾರಕ್ಕೆ ಸೂಚನೆ



ಲಿಂಗರಾಜಪುರದಲ್ಲಿ ಪರಿಶೀಲನೆ ನಡೆಸಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ರಸ್ತೆ ಹಾಗೂ ಪಾದಚಾರಿ ಮಾರ್ಗವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಸೂಚಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಪೂರ್ವ ವಲಯದಲ್ಲಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸೋಮವಾರ ಬೆಳಿಗ್ಗೆ 6.30ರಿಂದ ಕಾಲ್ನಡಿಗೆಯಲ್ಲಿ ಸುಮಾರು 9 ಕಿ.ಮೀ. ಸ್ಥಳ ಪರಿಶೀಲನೆ ನಡೆಸಿದರು. ರಸ್ತೆ, ಗುಂಡಿ, ಬೀದಿದೀಪ, ಕೆರೆ ಒತ್ತುವರಿ ಸೇರಿದಂತೆ ಹಲವು ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹೊರ ವರ್ತುಲ ರಸ್ತೆ ಹೆಣ್ಣೂರು ಮೇಲ್ಸೇತುವೆಯಿಂದ ಪರಿಶೀಲನೆ ಪ್ರಾರಂಭಿಸಿ, ಕಾಚರಕನಹಳ್ಳಿ ಕೆರೆ, ಲಿಂಗರಾಜಪುರ ಮೇಲ್ಸೇತುವೆ, ಲಿಂಗರಾಜಪುರ ವಾರ್ಡ್‌ನ ಮಯೂರ ರಸ್ತೆ, ಗುಂಡಪ್ಪ ಮಠ ರಸ್ತೆ, ಜಾನಕಿರಾಮ್ ಲೌಔಟ್ ಮೂಲಕ ಕಮ್ಮನಹಳ್ಳಿ ಮೇಲ್ಸೇತುವೆವರೆಗೆ ಪರಿಶೀಲನೆ ನಡೆಸಿದರು.

ರಸ್ತೆ ಗುಂಡಿಗಳನ್ನು ಮುಚ್ಚುವ, ನೇತಾಡುವ ಒಎಫ್‌ಸಿ ಕೇಬಲ್ ತೆರವು, ರಸ್ತೆ ಬದಿಯ ತ್ಯಾಜ್ಯ ಹಾಗೂ ಕಟ್ಟಡ ಭಗ್ನಾವಶೇಷಗಳ ತೆರವು, ಪಾದಚಾರಿ ಮಾರ್ಗಗಳ ಒತ್ತುವರಿ, ವಾಹನಗಳ ತೆರವು, ಮರದ ಕೊಂಬೆಗಳ ಕಟಾವು, ಬೀದಿ ದೀಪ ಅಳವಡಿಕೆ, ಚರಂಡಿಗಳ ಸ್ಲ್ಯಾಬ್ ದುರಸ್ತಿ, ಶೋಲ್ಡರ್ ಡ್ರೈನ್‌ಗಳಲ್ಲಿ ಶುಚಿತ್ವ ಸೇರಿದಂತೆ ಸಮಸ್ಯೆಗಳನ್ನು ಪರಿಶೀಲಿಸಿ ತ್ವರಿತವಾಗಿ ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹೆಣ್ಣೂರು ಮೇಲ್ಸೇತುವೆ, ಹೊರ ವರ್ತುಲ ರಸ್ತೆಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಲು ವಾರ್ಷಿಕ ನಿರ್ವಹಣೆ ಗುತ್ತಿಗೆ ನೀಡಬೇಕು. ಲಿಂಗರಾಜಪುರ ಕಡೆಗೆ ಹೋಗುವ ಮುಖ್ಯರಸ್ತೆಯ ಗುಂಡಿಗಳನ್ನು ಮುಚ್ಚಬೇಕು. ಎಚ್.ಬಿ.ಆರ್ ಲೇಔಟ್ ಕೆ. ಕಾರ್ ಕೋಲ್ ಗ್ಯಾರೇಜ್ ಹಾಗೂ ನ್ಯೂ ಸ್ಟ್ರೀಟ್ ಕಾರ್ಸ್‌ನಿಂದ ಪಾದಚಾರಿ ಮಾರ್ಗದಲ್ಲಿ ಕಾರ್‌ಗಳನ್ನು ನಿಲ್ಲಿಸಿದ್ದು, ಸಂಬಂಧಪಟ್ಟವರಿಗೆ ನೋಟಿಸ್ ಕೊಡಿ ಎಂದು ಆದೇಶಿಸಿದರು.

ಕಮ್ಮನಹಳ್ಳಿ ಮುಖ್ಯರಸ್ತೆ ಮೇಲ್ಸೇತುವೆ ಕೆಳಭಾಗದಲ್ಲಿ ಮಳೆ ನೀರು ನಿಲ್ಲುತ್ತಿದ್ದು, ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಯೋಜನೆ ರೂಪಿಸಿ ರಸ್ತೆ ಮೇಲೆ ನೀರು ನಿಲ್ಲದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಬಾಣಸವಾಡಿ ಕಡೆಯಿಂದ ನಗರದೊಳಗೆ ಬರುವ ಮೇಲ್ಸೇತುವೆ ರ‍್ಯಾಂಪ್ ಬಳಿ ಹೆಚ್ಚು ಸಂಚಾರ ದಟ್ಟಣೆಯಾಗುತ್ತಿದ್ದು, ರಸ್ತೆ ವಿಸ್ತರಣೆ ಮಾಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪರಿಶೀಲನೆ ನಡೆಸಿರುವ ಎಲ್ಲಾ ಕಡೆ ವಲಯ ಹಿರಿಯ ಅಧಿಕಾರಿಗಳು ಮರು ಪರಿಶೀಲನೆ ನಡೆಸಿ ಕೆಲಸ ಆಗಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು ಎಂದು ತುಷಾರ್ ಗಿರಿನಾಥ್ ಸೂಚಿಸಿದರು.

ಪೂರ್ವ ವಲಯ ಆಯುಕ್ತ ಪಿ.ಎನ್.ರವೀಂದ್ರ, ವಲಯ ಜಂಟಿ ಆಯುಕ್ತರಾದ ಶಿಲ್ಪಾ, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್, ವಲಯ ಮುಖ್ಯ ಎಂಜಿನಿಯರ್ ಸುಗುಣಾ ಇದ್ದರು.

ಬಾಣಸವಾಡಿ ಕೆರೆ ಒತ್ತುವರಿ: ತನಿಖೆಗೆ ಸೂಚನೆ

ಬಾಣಸವಾಡಿ ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ತನಿಖೆ ನಡೆಸಲಾಗುತ್ತದೆ. ಸೂಕ್ತ ಕ್ರಮ ಕೈಗೊಂಡು ಕೆರೆ ರಕ್ಷಿಸಲಾಗುತ್ತದೆ. ಈ ಬಗ್ಗೆ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್‌ಗೆ ಸೂಚಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಪ್ರಜಾವಾಣಿ’ಯಲ್ಲಿ ಸೋಮವಾರ ಪ್ರಕಟವಾದ **‘ಬಾಣಸವಾಡಿ ಕೆರೆ: ತೆರವಾದ ಸ್ಥಳದಲ್ಲೇ ಒತ್ತುವರಿ’** ಲೇಖನಕ್ಕೆ ಅವರು ಪ್ರತಿಕ್ರಿಯಿಸಿದರು. ಬಾಣಸವಾಡಿ ಕೆರೆಯ ಸುತ್ತಮುತ್ತಲಿನ ಸಾಯಿಬಾಬಾ ದೇವಸ್ಥಾನದ ಬಳಿ ರಾಜಕಾಲುವೆ ಪರಿಶೀಲನೆ ನಡೆಸಿ, ಖಾಲಿ ಜಾಗದಲ್ಲಿ ನರ್ಸರಿಯಿದ್ದು, ಅದನ್ನು ತೆರವುಗೊಳಿಸಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕಾಚರಕನಹಳ್ಳಿಯ ಸುಮಾರು 16 ಎಕರೆ 8 ಗುಂಟೆ ಕೆರೆ ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಿಬಿಎಂಪಿಗೆ ಹಸ್ತಾಂತರಿಸಿದೆ. ಕೆರೆಯ ಅಂಗಳದಲ್ಲಿ ಕೊಳೆಗೇರಿ ಪ್ರದೇಶವಿದ್ದು, 250ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿವೆ. ಅವರನ್ನು ಬೇರೆಡೆ ಸ್ಥಳಾಂತರಿಸಲು ಸ್ಲಂ ಬೋರ್ಡ್‌ನಿಂದ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಅಭಿವೃದ್ಧಿಗೆ ₹7.5 ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಸರಿಯಾಗಿ ಸರ್ವೆ ಮಾಡಿ ಮಾರ್ಕ್ ಮಾಡಿ ಕೆರೆಯ ಜಾಗಕ್ಕೆ ಮೊದಲು ಫೆನ್ಸಿಂಗ್ ಅಳವಡಿಸಬೇಕು. ಬಳಿಕ ಕೆರೆಯ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಕೆರೆ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದರು.


ಬಿಬಿಎಂಪಿ: ನಾಲ್ಕು ಗ್ರೇಡ್ ಸೆಪರೇಟರ್‌ಗೆ ಟೆಂಡರ್

ಡಿಪಿಆರ್ ಸಲ್ಲಿಸಲು ಸೂಚನೆ • ₹266 ಕೋಟಿ ವೆಚ್ಚ • 4 ಜಂಕ್ಷನ್‌ಗಳಲ್ಲಿ ದಟ್ಟಣೆ ನಿಯಂತ್ರಣಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಖ್ರಿ ವೃತ್ತದಿಂದ ಚಾಲುಕ್ಯ ವೃತ್ತದವರೆಗೆ ನಾಲ್ಕು ಗ್ರೇಡ್ ಸೆಪರೇಟರ್ ನಿರ್ಮಿಸಲು ಸಾಧ್ಯಾಸಾಧ್ಯತೆ ವರದಿ ಹಾಗೂ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಸಲು ಬಿಬಿಎಂಪಿ ಅ.17ರಂದು ಟೆಂಡರ್ ಕರೆದಿದೆ. ಇದಕ್ಕಾಗಿ ₹266 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ.

ಮೇಖ್ರಿ ವೃತ್ತದಿಂದ ಕಾವೇರಿ ಚಿತ್ರಮಂದಿರದ ಜಂಕ್ಷನ್‌ವರೆಗೆ ರಸ್ತೆ ವಿಸ್ತರಣೆಗಾಗಿ 58 ಮರಗಳನ್ನು ಕಡಿದು ಹಾಕಲಾಗುತ್ತಿದ್ದು, ಇದಕ್ಕಾಗಿ ಸಾರ್ವಜನಿಕರ ಆಕ್ಷೇಪಣೆಯನ್ನು ಬಿಬಿಎಂಪಿ ಕರೆದಿತ್ತು. ಇದಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಯಿತು. ಈ ನಡುವೆಯೇ ಚಾಲುಕ್ಯ, ವಿಂಡ್ಸರ್, ಕಾವೇರಿ, ಮೇಖ್ರಿ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲು ಉದ್ದೇಶಿಸಲಾಗಿದೆ.



‘ನಾಲ್ಕು ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದೆ. ಇದನ್ನು ಸುಗಮಗೊಳಿಸಬೇಕಿದೆ. ಪ್ರತಿ ಸಮಯದಲ್ಲೂ ಈ ಜಂಕ್ಷನ್‌ಗಳಲ್ಲಿ ವಾಹನಗಳು ನಿಂತಿರುತ್ತವೆ. ಹೀಗಾಗಿ ನಾವು ಸಂಚಾರ ದಟ್ಟಣೆಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಬಿಬಿಎಂಪಿ ಗ್ರೇಡ್ ಸೆಪರೇಟರ್ ಯೋಜನೆಯನ್ನು ಅಂತಿಮಗೊಳಿಸಿಲ್ಲ. ಯೋಜನೆ ಸಿದ್ಧಗೊಂಡ ಮೇಲೆ ಸರ್ಕಾರದ ಅನುಮೋದನೆಯನ್ನು ಕೇಳುತ್ತೇವೆ. ಈ ಟೆಂಡರ್‌ನಲ್ಲಿ ಉದ್ದ ಮೇಲ್ಸೇತುವೆ ಬಗ್ಗೆಯೂ ಸಾಧ್ಯಾಸಾಧ್ಯತೆ ವರದಿಯನ್ನು ನಿರೀಕ್ಷಿಸಲಾಗಿದೆ. ಎಲ್ಲರ ಅಭಿಪ್ರಾಯ ಪಡೆದು ವರದಿ ನೀಡಲು ಹೇಳಲಾಗಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

‘ಕಾಂಗ್ರೆಸ್ ಸರ್ಕಾರವಿದ್ದಾಗ ಚಾಲುಕ್ಯ ವೃತ್ತದಿಂದ ಮೇಖ್ರಿ ವೃತ್ತದವರೆಗಿನ ಸ್ಟೀಲ್ ಬ್ರಿಡ್ಜ್ ನಿರ್ಮಿಸಲು ಬಿಜೆಪಿ ಮುಖಂಡರು ವಿರೋಧಿಸಿದ್ದರು. ಇದೀಗ ಅವರದ್ದೇ ಸರ್ಕಾರವಿದ್ದಾಗ ಗ್ರೇಡ್ ಸೆಪರೇಟರ್ ನಿರ್ಮಿಸಲು ಟೆಂಡರ್ ಕರೆದಿದ್ದಾರೆ. ಅವರು ಏನು ನಿರ್ಮಿಸುತ್ತಿದ್ದಾರೆ ಎಂಬುದನ್ನು ಬಹಿರಂಗಪಡಿಸಲಿ’ ಎಂದು ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ಪ್ರಶ್ನಿಸಿದರು.

ಚಾಲುಕ್ಯ ವೃತ್ತದಿಂದ ಮೇಖ್ರಿ ವೃತ್ತದವರೆಗೆ ಸ್ಟೀಲ್ ಮೇಲ್ಸೇತುವೆ ಬೇಡ ಎಂದು ಬಿಬಿಎಂಪಿಯನ್ನು ಆಗ್ರಹಿಸುವ ಸಹಿ ಸಂಗ್ರಹ ಅಭಿಯಾನವನ್ನೂ ಪರಿಸರಸ್ನೇಹಿ ಸಂಘಗಳು ಆರಂಭಿಸಿವೆ. ನೂರಾರು ಮರಗಳನ್ನು ಕಡಿದು ಹಾಕುವುದು ಬೇಡ ಎಂದು ಒತ್ತಾಯಿಸಿವೆ.



ರಸ್ತೆ–ಅವ್ಯವಸ್ಥೆ ಸದಾಶಿವನಗರ ಜಂಕ್ಷನ್‌ನಿಂದ ಮಲ್ಲೇಶ್ವರ 18ನೇ ಅಡ್ಡರಸ್ತೆಗೆ ಸಂಪರ್ಕಿಸುವ ಸ್ಯಾಂಕಿ ರಸ್ತೆ ಭಾನುವಾರ ಕುಸಿದಿದ್ದು, ಬಿಬಿಎಂಪಿಯು ತಾತ್ಕಾಲಿಕ ದುರಸ್ತಿ ಕಾರ್ಯ ಮಾಡಿದೆ. ಸಂಚಾರಕ್ಕೆ ಯೋಗ್ಯವಲ್ಲದ ಕಾರಣ ಸಂಚಾರ ಪೊಲೀಸರು ವಾಹನ ಸಂಚಾರವನ್ನು ನಿಷೇಧಿಸಿದ್ದಾರೆ. – ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಕೆಂಪೇಗೌಡ ಪ್ರತಿಮೆ ಲೋಕಾರ್ಪಣೆ: 21ಕ್ಕೆ ರಥಗಳಿಗೆ ಚಾಲನೆ

ಬೆಂಗಳೂರು: ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ನ.11ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.

ಈ ಕಾರ್ಯಕ್ರಮದ ಅಂಗವಾಗಿ ನಾಡಿನೆಲ್ಲೆಡೆಯಿಂದ ಪವಿತ್ರ ಮೃತ್ತಿಕೆ ಸಂಗ್ರಹಣಾ ಅಭಿಯಾನ ನಡೆಯಲಿದೆ. ಇದಕ್ಕೆ ಸಿದ್ಧವಾಗಿರುವ ವಿಶೇಷ ರಥಗಳಿಗೆ ಅ.21ರಂದು ವಿಧಾನಸೌಧದ ಮುಂಭಾಗದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ ಎಂದು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ ಮತ್ತು ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಈ ಕಾರ್ಯಕ್ರಮದ ರೂಪುರೇಷೆ ಕುರಿತು ಸೋಮವಾರ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಡಾ.ಸಿ ಎನ್ ಅಶ್ವತ್ಥನಾರಾಯಣ ಭೇಟಿಯಾಗಿ ಸಮಾಲೋಚನೆ ನಡೆಸಿದರು.

ಶ್ರೀಗಳ ಜತೆ ಸುಮಾರು ಎರಡು ತಾಸು ವಿಚಾರ ವಿನಿಮಯ ನಡೆಸಿದ ಸಚಿವರು, ಕಾರ್ಯಕ್ರಮದ ಯಶಸ್ಸಿಗೆ ಮಾರ್ಗದರ್ಶನ ಕೋರಿದರು.

ಕಾರ್ಯಕ್ರಮದ ಯಶಸ್ಸಿಗೆ ಮಠ ಮತ್ತು ಸಮಾಜದ ವತಿಯಿಂದ ಸಕಲ ಸಹಕಾರ ನೀಡುವುದಾಗಿ ಶ್ರೀಗಳು ಭರವಸೆ ನೀಡಿದರು.

ಇದಕ್ಕೂ ಮೊದಲು ಸಚಿವರು 20ಕ್ಕೂ ಹೆಚ್ಚು ಪ್ರಮುಖ ಒಕ್ಕಲಿಗ ಸಂಘಟನೆಗಳ ಪ್ರಮುಖರ ಜೊತೆಯೂ ಕಾರ್ಯಕ್ರಮ ಕುರಿತು ಸಭೆ ನಡೆಸಿದರು.

ನಾಳೆಯಿಂದ ಮೂರು ದಿನ ಚಲನಚಿತ್ರೋತ್ಸವ



ಬೆಂಗಳೂರು: ಬೆಂಗಳೂರು ಫಿಲ್ಮ್ ಸೊಸೈಟಿ ವತಿಯಿಂದ ಇದೇ 19ರಿಂದ 21ರವರೆಗೆ ಮೂರು ದಿನಗಳ ಕಾಲ ಚಲನಚಿತ್ರೋತ್ಸವವನ್ನು ಶಾಂತಿನಗರದಲ್ಲಿನ ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಈ ಚಲನಚಿತ್ರೋತ್ಸವದಲ್ಲಿ 14 ಚಲನಚಿತ್ರಗಳು, ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಇದು ಉಚಿತ ಕಾರ್ಯಕ್ರಮವಾಗಿದ್ದು, ಸ್ಥಳೀಯ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ಮಹಿಳೆಯರು, ಯುವಕರು ಮತ್ತು ರೈತರು ಭಾಗವಹಿಸಬಹುದು. ಕಾರ್ಯಕ್ರಮವನ್ನು ನಟ ಪ್ರಕಾಶ್ ರಾಜ್ ಮತ್ತು ಹರಿಂದರ್ ಕೌರ್ ಉದ್ಘಾಟನೆ ಮಾಡಲಿದ್ದಾರೆ.

ಆಸಕ್ತರು https://www.cognitoforms.com/BangaloreFilmSociety/RegistrationFormForAaneMatthuIruveStoryOfARepublicTheElephantAndTheAntStoryOfARepublic ಲಿಂಕ್ ಬಳಸಿ ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಪಾಕಿಸ್ತಾನದ ಮತ್ತೊಂದು ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ನವದೆಹಲಿ, ಅಮೃತಸರ: ಪಂಜಾಬ್‌ನ ಭಾರತ– ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿಯಲ್ಲಿ ಸೋಮವಾರ ಭಾರತದ ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಪಾಕಿಸ್ತಾನದ ಡ್ರೋನ್ ಅನ್ನು ಹೊಡೆದುರುಳಿಸಿದೆ.

‘ಸೋಮವಾರ ರಾತ್ರಿ 8.30ರ ವೇಳೆಗೆ 183ನೇ ಬೆಟಾಲಿಯನ್‌ನ ಬಿಎಸ್‌ಎಫ್ ಪಡೆಗಳು ಪಂಜಾಬ್‌ನ ಅಮೃತಸರ ಸೆಕ್ಟರ್‌ನ ಗಡಿ ಪೋಸ್ಟ್ ಕಲಾಂ ಡೋಗರ್‌ನ ಪ್ರದೇಶದಲ್ಲಿ ಪಾಕಿಸ್ತಾನದ ಡ್ರೋನ್ ಅನ್ನು ಹೊಡೆದುರುಳಿಸಿದವು’ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ. ಗಡಿಭಾಗದಲ್ಲಿ ಸತತ ನಾಲ್ಕನೇ ದಿನ ಮೂರನೇ ಬಾರಿ ಪಾಕಿಸ್ತಾನ ಡ್ರೋನ್ ಹೊಡೆದುರುಳಿಸಿದ ಪ್ರಕರಣ ಇದಾಗಿದೆ.

ಪರಿಶಿಷ್ಟ ಯುವಕ ಸಾವು: ದೂರು

ಕೊಡಿಗೇನಹಳ್ಳಿ: ಮಧುಗಿರಿ ತಾಲ್ಲೂಕಿನ ಐಡಿಹಳ್ಳಿ ಗ್ರಾಮದ ಪುರುಷೋತ್ತಮ ಪ್ರಸಾದ್ (35) ಎಂಬ ಪರಿಶಿಷ್ಟ ಜಾತಿಯ ಯುವಕ ಸೋಮವಾರ ಮೃತಪಟ್ಟಿದ್ದಾರೆ.

‘ಐಡಿಹಳ್ಳಿ ಗ್ರಾಮದ ಬಾಲಾಜಿ ರೆಡ್ಡಿ ಮತ್ತು ಇತರರು ನನ್ನ ಮಗನ ಸಾವಿಗೆ ಕಾರಣ’ ಎಂದು ಮೃತನ ತಂದೆ ಬಸ್ತಪ್ಪ ಸೋಮವಾರ ಕೊಡಿಗೇನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘ತೋಟದಲ್ಲಿ ಬಾಳೆಗೊನೆ ಕದ್ದಿದ್ದಾನೆ ಎಂದು ಆರೋಪಿಸಿ ಸೆ.29 ರಂದು ತೋಟದ ಮಾಲೀಕ ಬಾಲಾಜಿ ರೆಡ್ಡಿ ಮತ್ತು ಇತರರು ಸೇರಿ ನನ್ನ ಮಗನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಕೊಡಿಗೇನಹಳ್ಳಿ ಪೊಲೀಸ್ ಠಾಣೆಗೆ ಒಪ್ಪಿಸಿದ್ದರು. ಇದರಿಂದ ಚೇತರಿಸಿಕೊಳ್ಳಲಾಗದೆ ಆತ ಮೃತಪಟ್ಟಿದ್ದಾನೆ’ ಎಂದಿದ್ದಾರೆ.

‘ನನ್ನ ಮಗನ ಸಾವಿಗೆ ಕಾರಣರಾದ ಬಾಲಾಜಿ ರೆಡ್ಡಿ ಮತ್ತು ಇತರರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು’ ಎಂದು ಬಸ್ತಪ್ಪ ಕೋರಿದ್ದಾರೆ.

ಮಂಗಳವಾರ, ಅಕ್ಟೋಬರ್ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 288 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,411 ▲	17,311 ▲	₹51,850 (ಬೆಂಗಳೂರು)	₹56,900 (ಬೆಂಗಳೂರು)	82.30 ▼

9 ತಾಸು ನಿರಂತರ ಸಭೆ • ಕೆಲಸ ಮಾಡದಿದ್ದರೆ ಎತ್ತಂಗಡಿ – ಅಧಿಕಾರಿಗಳಿಗೆ ಎಚ್ಚರಿಕೆ

ಡಿ.ಸಿಗಳಿಗೆ ಬೊಮ್ಮಾಯಿ 'ಬಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ನಿರೀಕ್ಷಿತ ಮಟ್ಟದಲ್ಲಿ ಕಾರ್ಯ ನಿರ್ವಹಿಸದೇ ಇರುವುದರಿಂದ ಸರ್ಕಾರದ ಕಾರ್ಯಕ್ರಮಗಳು ಜನರಿಗೆ ಸಕಾಲದಲ್ಲಿ ತಲುಪುತ್ತಿಲ್ಲ. ಈ ಲೋಪಗಳಿಗೆ ನೀವೇ ಹೊಣೆಗಾರರಾಗಬೇಕಾಗುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತುಸು ಗಡುಸಾಗಿಯೇ ಬಿಸಿ ಮುಟ್ಟಿಸಿದರು.

ವಿಧಾನಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ನಡೆಸುತ್ತಿರುವ 'ಜನಸಂಕಲ್ಪ ಯಾತ್ರೆ' ಮಧ್ಯೆಯೇ, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಅವರು, ಅಧಿಕಾರಿಗಳ ಕಾರ್ಯವೈಖರಿಯನ್ನು ಒರೆಗೆ ಹಚ್ಚಿದರು. ಅಧಿಕಾರಿಗಳು ಅಪೇಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸದೇ ಇರುವ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ್ದೂ ಅಲ್ಲದೇ, ಕೆಲಸ ಮಾಡದಿದ್ದರೆ ಎತ್ತಂಗಡಿಯ ಎಚ್ಚರಿಕೆಯನ್ನೂ ನೀಡಿದರು.

ಸುಮಾರು 9 ತಾಸು ನಿರಂತರ ಸಭೆ ನಡೆಸಿದ ಬೊಮ್ಮಾಯಿ, ಯಾವ ಯಾವ ಇಲಾಖೆಗಳಲ್ಲಿ ಯಾವ ಕಾರ್ಯಕ್ರಮಗಳನ್ನು ಜಾರಿ ಮಾಡುವಲ್ಲಿ ಹಿನ್ನಡೆಯಾಗಿದೆ ಎಂಬುದನ್ನು ಪಟ್ಟಿ ಮಾಡಿದ್ದೂ ಅಲ್ಲದೆ, ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕೆಂದು ತಾಕೀತು ಮಾಡಿದರು.

'ಕೆಲಸ ಮಾಡಿ, ಇಲ್ಲವಾದರೆ ನಿಮ್ಮ ಬದಲು ಬೇರೊಬ್ಬರನ್ನು ತಂದು ಕೂರಿಸುವುದೂ ನನಗೆ ಗೊತ್ತು. ಮಳೆ ಮತ್ತು ಪ್ರವಾಹದಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಜನ ಸಂಕಷ್ಟದಲ್ಲಿದ್ದಾರೆ. ಆದರೆ, ಪರಿಹಾರ ವಿತರಣೆಯಲ್ಲಿ ತಡವಾಗಿದೆ. ಹಲವು ಕಡೆಗಳಲ್ಲಿ ಲೋಪಗಳು ಎದ್ದು ಕಾಣುತ್ತಿವೆ. ಈ ವಿಳಂಬಕ್ಕೆ ನೀವೇ ಕಾರಣರಾಗುತ್ತೀರಿ. ಡಿ.ಸಿ ಕಚೇರಿಯಲ್ಲಿ ಕುಳಿತು ಕೆಲಸ ಮಾಡಿದರೆ ಆಗುವುದಿಲ್ಲ. ತಾಲ್ಲೂಕು ಕೇಂದ್ರಕ್ಕೆ ಹೋಗಿ ಕೆಲಸ ಮಾಡಿ. ಬಹುತೇಕ ಜಿಲ್ಲಾಧಿಕಾರಿಗಳು ತಾಲ್ಲೂಕು ಕೇಂದ್ರಗಳಿಗೇ ಹೋಗುತ್ತಿಲ್ಲ' ಎಂದೂ ಅವರು ಹರಿಹಾಯ್ದರು.

'ಜಾನುವಾರುಗಳಿಗೆ ಚರ್ಮಗಂಟು ರೋಗ ಹಬ್ಬುತ್ತಿದೆ. ಅದನ್ನು ತಡೆಯಲು ಯಾವ ಕ್ರಮ ಕೈಗೊಂಡಿದ್ದೀರಿ? ಲಸಿಕೆ ಹಾಕುವುದು, ಪರಿಹಾರ ವಿತರಿಸುವ ಕೆಲಸಕ್ಕೆ ಚುರುಕು ಸಿಕ್ಕಿಲ್ಲ. ನಿಮ್ಮ ಅಧಿಕಾರ, ಜವಾಬ್ದಾರಿಯನ್ನು ಅರಿತುಕೊಂಡು ಕೆಲಸ ಮಾಡಬೇಕು. ಕಾರ್ಯಶೈಲಿಯನ್ನೂ ಬದಲಿಸಿಕೊಳ್ಳಬೇಕು. ಉದಾಸೀನತೆಯನ್ನು ಸಹಿಸಲು ಸಾಧ್ಯವಿಲ್ಲ' ಎಂದೂ ಅವರು ತರಾಟೆಗೆ ತೆಗೆದುಕೊಂಡರು.

5ನೇ ಪುಟ ನೋಡಿ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯದ ವಿವಿಧ ಜಿಲ್ಲೆಯ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿದರು. (ಎಡದಿಂದ) ಸಚಿವ ವಿ.ಸೋಮಣ್ಣ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಸಚಿವರಾದ ಆರ್. ಅಶೋಕ, ಜೆ.ಸಿ. ಮಾಧುಸ್ವಾಮಿ ಮತ್ತು ವಿ. ಸುನಿಲ್ ಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

'ಶಿಶು–ಬಾಣಂತಿಯರ ಸಾವಿನ ಪ್ರಮಾಣಕ್ಕೆ ಕಡಿವಾಣ ಹಾಕಿ'

ರಾಜ್ಯದಲ್ಲಿ ಶಿಶು ಮತ್ತು ಬಾಣಂತಿಯರ ಸಾವಿನ ಪ್ರಮಾಣ ನೆರೆಯ ರಾಜ್ಯಗಳಿಗಿಂತಲೂ ನಮ್ಮ ರಾಜ್ಯದಲ್ಲಿ ಹೆಚ್ಚಾಗಿದ್ದು, ಆ ಪ್ರಮಾಣವನ್ನು ನಿಯಂತ್ರಣಕ್ಕೆ ತರಲು ತಕ್ಷಣವೇ ಅಗತ್ಯ ಕ್ರಮ ಕೈಗೊಳ್ಳಲು ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು ಎಂದು ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಶಿಶು ಮತ್ತು ಬಾಣಂತಿಯರ ಸಾವಿನ ಪ್ರಮಾಣದ ಮಾಹಿತಿ ನನ್ನ ಬಳಿ ಇಲ್ಲ. ಆದರೆ, ನೆರೆಯ ರಾಜ್ಯಕ್ಕಿಂತಲೂ ಹೆಚ್ಚು ಇದೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಯಾವ ಆಸ್ಪತ್ರೆಗಳಲ್ಲಿ ಹೆಚ್ಚಿನ ಹೊರೆ ಆಗುತ್ತಿದೆ. ಎಲ್ಲೆಲ್ಲಿ ಸೌಲಭ್ಯವಿದ್ದರೂ ಜನ ಬರುತ್ತಿಲ್ಲ ಎಂಬುದರ ವಿಸ್ತೃತ ಸಮೀಕ್ಷೆ ನಡೆಸಿ, ಕಾರಣಗಳನ್ನು ಪತ್ತೆ ಮಾಡಿ ವರದಿ ಸಲ್ಲಿಸಬೇಕು ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಶಿಕ್ಷಣ ಮತ್ತು ಆರೋಗ್ಯ ಜಿಲ್ಲಾ ಪಂಚಾಯಿತಿಯ ಪ್ರಾಥಮಿಕ ವಲಯವಾಗಿದ್ದು, ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ' ಎಂದು ಮಾಧುಸ್ವಾಮಿ ಹೇಳಿದರು.

ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಶೇ 96ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ನಡೆದ ಮತದಾನದಲ್ಲಿ ಪಕ್ಷದ 9,915 ಪ್ರತಿನಿಧಿಗಳ ಪೈಕಿ ಶೇ 96 ರಷ್ಟು ಅಥವಾ 9,500 ಪ್ರತಿನಿಧಿಗಳು ತಮ್ಮ ಹಕ್ಕು ಚಲಾಯಿಸಿದ್ದಾರೆ. ನೆಹರೂ–ಗಾಂಧಿ ಕುಟುಂಬದ ಹೊರಗಿನವರೊಬ್ಬರು 22 ವರ್ಷದ ಬಳಿಕ ಈ ಹುದ್ದೆಗೆ ಏರಲಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಮತ್ತು ಶಶಿ ತರೂರ್ ಅವರು ಅಭ್ಯರ್ಥಿಗಳಾಗಿದ್ದಾರೆ. ಖರ್ಗೆ ಅವರು ಗೆಲ್ಲುವ ಸಾಧ್ಯತೆ ಹೆಚ್ಚು ಎಂದು ಹೇಳಲಾಗುತ್ತಿದೆ.

ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಸಂವಹನ ವಿಭಾಗದ ಮುಖ್ಯಸ್ಥ ಜೈರಾಮ್ ರಮೇಶ್, ಸಲ್ಮಾನ್ ಖುರ್ಷಿದ್ ಮುಂತಾದವರು ಮತ ಹಾಕಿದವರಲ್ಲಿ ಸೇರಿದ್ದಾರೆ.

ಸೋನಿಯಾ ಮತ್ತು ಪ್ರಿಯಾಂಕಾ ಅವರು ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಮತ ಚಲಾಯಿಸಿದರು. ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಮತ ಚಲಾಯಿಸಿದವರಲ್ಲಿ ಪಿ.ಚಿದಂಬರಂ ಮೊದಲಿಗರು. ತರೂರ್ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ತಿರುವನಂತಪುರದಲ್ಲಿ ಮತ ಹಾಕಿದರು.

ಇಬ್ಬರೂ ಅಭ್ಯರ್ಥಿಗಳು ಬೆಳಿಗ್ಗೆಯೇ ಕರೆ ಮಾಡಿ ಪರಸ್ಪರರಿಗೆ ಶುಭ ಹಾರೈಸಿದ್ದಾರೆ.

ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಬುಧವಾರ ಮತ ಎಣಿಕೆ ನಡೆಯಲಿದೆ. ಮತದಾನದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಅಂತಹ ಯಾವುದೇ ದೂರು ಕೂಡ ಬಂದಿಲ್ಲ ಎಂದು ಕಾಂಗ್ರೆಸ್ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಧುಸೂದನ ಮಿಸ್ತ್ರಿ ಹೇಳಿದ್ದಾರೆ.

ರಾಜ್ಯದಲ್ಲಿ 501 ಮತ ಚಲಾವಣೆ

ಬೆಂಗಳೂರು: ಎಐಸಿಸಿ ನೂತನ ಅಧ್ಯಕ್ಷರ ಆಯ್ಕೆಗಾಗಿ ಸೋಮವಾರ ನಡೆದ ಮತದಾನದಲ್ಲಿ ರಾಜ್ಯದ 503 ಅರ್ಹ ಮತದಾರರ ಪೈಕಿ 501 ಮಂದಿ ಮತ ಚಲಾಯಿಸಿದರು.

'ಒಟ್ಟು 503 ಮತದಾರರ ಪೈಕಿ ಇಬ್ಬರು ಮಾತ್ರ ಮತ ಚಲಾಯಿಸಿಲ್ಲ. ಹಿರಿಯ ಮುಖಂಡ ಕೆ. ರೆಹಮಾನ್ ಖಾನ್ ಅವರಿಗೆ ಕೋವಿಡ್ ಇರುವುದರಿಂದ ಮತಗಟ್ಟೆಗೆ ಬರಲು ಸಾಧ್ಯವಾಗಿಲ್ಲ. ಅವರ ಪರವಾಗಿ, ಒಪ್ಪಿಗೆ ಮೇರೆಗೆ ಮತಗಟ್ಟೆ ಅಧಿಕಾರಿ ಮತ ಚಲಾಯಿಸಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

6ನೇ ಪುಟ ನೋಡಿ

'ಭಾರತ್' ಬ್ರ್ಯಾಂಡ್ ಯೂರಿಯಾ ಬಿಡುಗಡೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು 'ಒಂದು ದೇಶ ಒಂದು ರಸಗೊಬ್ಬರ ಯೋಜನೆ'ಯ ಅಡಿಯಲ್ಲಿ ಸೋಮವಾರ, ಸಬ್ಸಿಡಿ ಸಹಿತ ಯೂರಿಯಾದ 'ಭಾರತ್' ಬ್ರ್ಯಾಂಡ್ ಬಿಡುಗಡೆ ಮಾಡಿದರು. 10

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆ

ರಾಜ್ಯಕ್ಕೆ ₹1,007.26 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 12ನೇ ಕಂತಿನ ನೆರವು ಬಿಡುಗಡೆ ಮಾಡಿದ್ದು, ಇದರಡಿ ರಾಜ್ಯದ 50.36 ಲಕ್ಷ ರೈತರಿಗೆ ₹1,007.26 ಕೋಟಿ ವರ್ಗಾವಣೆ ಆಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪ್ರಧಾನಿ ಮೋದಿ ಅವರು ದೆಹಲಿಯಿಂದ ನಡೆಸಿದ ವರ್ಚುವಲ್ ಕಾರ್ಯಕ್ರಮದಲ್ಲಿ ಬೊಮ್ಮಾಯಿ, ಸಚಿವ ಸಂಪುಟದ ಸಹೋದ್ಯೋಗಿಗಳು ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದರು.

ಈ ಯೋಜನೆಯಡಿ ಮಾರ್ಚ್ 2019 ರಿಂದ ಜುಲೈ 2022 ರವರೆಗೆ ರಾಜ್ಯದ 58.83 ಲಕ್ಷ ರೈತ ಕುಟುಂಬಗಳು ಕೇಂದ್ರ ಸರ್ಕಾರದಿಂದ ಒಟ್ಟು ₹9,968.57 ಕೋಟಿ ಸಹಾಯ ಧನ ಪಡೆದಿವೆ. 2022–23ನೇ ಸಾಲಿನಲ್ಲಿ ₹1,251.98 ಕೋಟಿ ಆರ್ಥಿಕ ಸಹಾಯಧನ ವರ್ಗಾವಣೆಯಾಗಿದೆ.

ರಾಜ್ಯ ಸರ್ಕಾರದಿಂದ ಪಿ.ಎಂ ಕಿಸಾನ್– ಕರ್ನಾಟಕ ಯೋಜನೆಯಡಿ ರೈತ ಕುಟುಂಬಗಳಿಗೆ 2019 ರಿಂದ ಇಲ್ಲಿಯವರೆಗೆ ₹4,821.37 ಕೋಟಿ ಆರ್ಥಿಕ ಸಹಾಯಧನವನ್ನು ನೀಡಲಾಗಿದೆ. 2022–23ನೇ ಸಾಲಿನಲ್ಲಿ ₹956.71 ಕೋಟಿ ಆರ್ಥಿಕ ನೆರವನ್ನು ರೈತರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆಗೆ ಮಂಜೂರಾತಿ ನೀಡಲಾಗಿದೆ ಎಂದು ಬೊಮ್ಮಾಯಿ ತಿಳಿಸಿದ್ದಾರೆ.

ಪಿಎಂ ಕಿಸಾನ್ ನಿಧಿ

ವರ್ಷ	ಪಾವತಿ ಮೊತ್ತ (₹ ಕೋಟಿ)	
	ಕೇಂದ್ರ ಸರ್ಕಾರ	ಕರ್ನಾಟಕ ಸರ್ಕಾರ
2018-19	3.96	0.00
2019-20	2,769.50	905.75
2020-21	3,113.86	983.80
2021-22	2,829.27	1975.12
2022-23	1,251.98	956.71
ಒಟ್ಟು	9,968.57	4,821.37

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಅಭಿಮತ

'ನ್ಯಾಯದಾನಕ್ಕೆ ಸಂವಿಧಾನವೇ ತಳಹದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯದಾನಕ್ಕೆ ಸಂವಿಧಾನ ತಳಹದಿಯಾಗಬೇಕೇ ಹೊರತು ಧರ್ಮವಲ್ಲ' ಎಂದು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ ಅಭಿಪ್ರಾಯಪಟ್ಟರು.

ರಾಜ್ಯ ಹೈಕೋರ್ಟ್‌ಗೆ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡ ಪಿ.ಬಿ. ವರಾಳೆ ಅವರಿಗೆ ಸೋಮವಾರ ಹೈಕೋರ್ಟ್ ವಕೀಲರ ಸಭಾಂಗಣದಲ್ಲಿ ಬೆಂಗಳೂರು ವಕೀಲರ ಸಂಘದ ವತಿಯಿಂದ ಸ್ವಾಗತಿಸಲಾಯಿತು. ಈ ಸಮಾರಂಭದಲ್ಲಿ ಗೌರವ ಸ್ವೀಕರಿಸಿ ಅವರು ಮಾತನಾಡಿದರು.

'ಯಾರ ಹುಟ್ಟೂ ಅವರ ಕೈಯಲ್ಲಿ ಇರುವುದಿಲ್ಲ. ಔರಂಗಾಬಾದ್ ನನ್ನ ಜೀವನದ ದಿಕ್ಕು ಬದಲಿಸಿದ ಊರು. ನಾನು ವೃತ್ತಿಯಲ್ಲಿ ನಡೆದು ಬಂದ ಹಾದಿಯನ್ನು ಅವಲೋಕಿಸಿಕೊಂಡಾಗ ಆಶ್ಚರ್ಯವಾಗುತ್ತದೆ. ಸಮಾನತೆಯ ಸಂವಿಧಾನ ಕರ್ತೃ ಅಂಬೇಡ್ಕರ್ ಅವರ ಕಾರಣದಿಂದ ನಾನಿಂದು ಈ ಸ್ಥಾನದಲ್ಲಿ ನಿಂತಿದ್ದೇನೆ' ಎಂದು ಬಿ.ಆರ್. ಅಂಬೇಡ್ಕರ್ ಅವರ ಜೊತೆ ನಿಕಟವಾಗಿದ್ದ ತಮ್ಮ ಅಜ್ಜ ಮತ್ತು ತಂದೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡರು.

'ಭಾಷೆ ಮತ್ತು ನೆಲದ ದೃಷ್ಟಿಯಿಂದ ನಾನು ಮಹಾರಾಷ್ಟ್ರದ ಮೂಲ ಹೊಂದಿದ್ದರೂ ಕನ್ನಡವನ್ನು ತಕ್ಕಮಟ್ಟಿಗೆ ಬಲ್ಲೆ. ಎರಡೂ ರಾಜ್ಯಗಳ ಬಾಂಧವ್ಯ ಅನನ್ಯವಾದುದು. ಇದಕ್ಕೆ ತನ್ನದೇ ಆದ ಇತಿಹಾಸವಿದೆ. ಬೆಂಗಳೂರು ವಕೀಲರ ಸಂಘ ಪುಷ್ಪವನವಿದ್ದಂತೆ. ಈ ಸಂಘದ ಪರಿಮಳದಲ್ಲಿ ನ್ಯಾಯ ತತ್ವಗಳ ಆಧಾರದಲ್ಲಿ ನಾನು ಕೆಲಸ ಮಾಡುತ್ತೇನೆ' ಎಂದರು.

'ಕಿರಿಯ ವಕೀಲರು ಇಂದು ತಂತ್ರಜ್ಞಾನ ಆಧಾರಿತ ವೃತ್ತಿಪರರಾಗಿದ್ದಾರೆ. ಹಿರಿಯ ವಕೀಲರಿಂದ ಮಾರ್ಗದರ್ಶನ ಪಡೆಯುವ ಮೂಲಕ ಅವರು ಹೆಚ್ಚಿನ ಸಾಧನೆ ಮಾಡಬೇಕು' ಎಂದು ವರಾಳೆ ಆಶಿಸಿದರು.

ವರಾಳೆ ಅವರನ್ನು ಸನ್ಮಾನಿಸಿ ಮಾತನಾಡಿದ ಸಂಘದ ಅಧ್ಯಕ್ಷ, ಹಿರಿಯ ವಕೀಲ ವಿವೇಕ ಸುಬ್ಬಾರೆಡ್ಡಿ, 'ಕರ್ನಾಟಕ–ಮಹಾರಾಷ್ಟ್ರ ನಡುವೆ ಗಡಿ ಎಂಬುದಿಲ್ಲ. ಅಷ್ಟೊಂದು ಸೌಹಾರ್ದ ಸಂಬಂಧ ಎರಡೂ ರಾಜ್ಯಗಳ ಜೊತೆ ಇದೆ. ಈ ಹಿಂದಿನ ಅತ್ಯುತ್ತಮ ಮುಖ್ಯ ನ್ಯಾಯಮೂರ್ತಿಗಳಂತೆಯೇ ವರಾಳೆ ಅವರೂ ತಮ್ಮದೇ ಆದ ಛಾಪು ಮೂಡಿಸಲಿ ಎಂದು ಸಂಘ ಬಯಸುತ್ತದೆ' ಎಂದರು.

ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, 'ನೀವೂ ನಮ್ಮೊಳಗೊಬ್ಬರಿದ್ದಂತೆ' ಎಂದರು. ಈ ಕಾರ್ಯಕ್ರಮಕ್ಕೂ ಮೊದಲಿಗೆ ಕೋರ್ಟ್ ಹಾಲ್ ಸಂಖ್ಯೆ 1ರಲ್ಲಿ ರಾಜ್ಯ ವಕೀಲರ ಪರಿಷತ್ ವತಿಯಿಂದ ಅಧ್ಯಕ್ಷ ಮೋತಕಪಲ್ಲಿ ಕಾಶಿನಾಥ್ ಸ್ವಾಗತಿಸಿದರು.



ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ ಅವರನ್ನು 'ಬೆಂಗಳೂರು ವಕೀಲರ ಸಂಘ'ದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ (ಎಡದಿಂದ ಮೊದಲನೆಯವರು) ಸನ್ಮಾನಿಸಿದರು. ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ಇದ್ದಾರೆ –ಪ್ರಜಾವಾಣಿ ಚಿತ್ರ

ಆ್ಯಪ್ ಆಧಾರಿತ ಆಟೊ ಸೇವೆ ಅಧಿಕೃತ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆಯಲ್ಲಿ ಆಟೋರಿಕ್ಷಾಗಳ ಸೇವೆಯನ್ನು ಅಧಿಕೃತಗೊಳಿಸಲು ಸಿದ್ಧತೆ ನಡೆಸಿರುವ ಸಾರಿಗೆ ಇಲಾಖೆ, ಮಂಗಳವಾರ ಅಂತಿಮ ನಿರ್ಧಾರ ಕೈಗೊಳ್ಳಲು ಮುಂದಾಗಿದೆ.

ಕರ್ನಾಟಕ ರಾಜ್ಯ ಬೇಡಿಕೆ ಆಧಾರಿತ ಸಾರಿಗೆ ತಂತ್ರಜ್ಞಾನ ನಿಯಮಕ್ಕೆ ಕೆಲ ಅಂಶಗಳನ್ನು ಸೇರ್ಪಡೆ ಮಾಡುವ ಮೂಲಕ ಆಟೋರಿಕ್ಷಾ ಸೇವೆಗಳನ್ನು ಅಧಿಕೃತಗೊಳಿಸಲು ಉದ್ದೇಶಿಸಲಾಗಿದೆ. ಮಂಗಳವಾರದ ಸಭೆಯಲ್ಲಿ ಈ ಪ್ರಸ್ತಾವಕ್ಕೆ ಮುದ್ರೆ ಬಿದ್ದರೆ, ಕೆಲವೇ ದಿನಗಳಲ್ಲಿ ಸರ್ಕಾರಿ ಆದೇಶ ಹೊರಬೀಳಲಿದೆ.

ಮೋಟಾರು ವಾಹನ ಅಗ್ರಿಗೇಟರ್ ಮಾರ್ಗಸೂಚಿ-2020ರ ಪ್ರಕಾರ ಆ್ಯಪ್ ಆಧಾರಿತ ಸೇವೆಗಳ ಕನಿಷ್ಠ ದರ ₹25ರಿಂದ ₹30 ನಿಗದಿಪಡಿಸಬಹುದಾಗಿದೆ. ಅದೇ ಮಾದರಿಯ ದರವನ್ನು ಇತರೆ ವಾಹನಗಳಿಗೂ ಈ ಕಂಪನಿಗಳು ಅನುಸರಿಸಬಹುದು. ಅಲ್ಲದೇ ಕನಿಷ್ಠ ದರಕ್ಕಿಂತ ಶೇ 50ರಷ್ಟು ಕಡಿಮೆ ಅಥವಾ ಸೇವಾ ಶುಲ್ಕದ ರೂಪದಲ್ಲಿ ಗರಿಷ್ಠ ಒಂದೂವರೆ ಪಟ್ಟು ಹೆಚ್ಚಿಸಲು ಅವಕಾಶ ಇದೆ.

ವಿಮಾನ ಪ್ರಯಾಣದ ಟಿಕೆಟ್ ದರ ಕಾಲಕ್ಕೆ ತಕ್ಕಂತೆ ಏರಿಳಿತ ಇರುತ್ತದೆ. ಬೆಲೆ ಏರಿಕೆ ಮತ್ತು ಇಳಿಕೆ ಮಾಡಲು ಅಗ್ರಿಗೇಟರ್ ನಿಯಮಗಳಲ್ಲಿಯೇ ಅವಕಾಶ ಇರುವುದು ಇದಕ್ಕೆ ಕಾರಣ. ಇದೇ ಮಾದರಿಯಲ್ಲಿ ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ನೀಡುವ ಅಗ್ರಿಗೇಟರ್‌ಗಳು ದರ ವ್ಯತ್ಯಾಸಗಳನ್ನು ಮಾಡುತ್ತಾರೆ. ಒಮ್ಮೆ ಒಪ್ಪಿಗೆ ನೀಡಿದರೆ ಅವುಗಳನ್ನು ನಿಯಂತ್ರಣ ಮಾಡುವುದು ಕಷ್ಟ ಎನ್ನುತ್ತಾರೆ ಸಾರಿಗೆ ತಜ್ಞರು.

ಈ ಅಂಶವನ್ನು ಸೇರ್ಪಡೆ ಮಾಡುವ ಬಗ್ಗೆ ಸಾರಿಗೆ ಇಲಾಖೆ ಇನ್ನೂ ಖಚಿತಪಡಿಸಿಲ್ಲ. ಒಂದು ವೇಳೆ ಸೇರ್ಪಡೆ ಮಾಡಿದರೆ ಅದು ಗ್ರಾಹಕರಿಗೆ ಹೊರೆಯಾಗುವ ಸಾಧ್ಯತೆಯೂ ಇದೆ ಎನ್ನುವುದು ಅವರ ಆತಂಕ.

ಈ ಸಂಬಂಧ ಸೋಮವಾರ ನಡೆಯಬೇಕಿದ್ದ ಸಭೆಯನ್ನು ಮಂಗಳವಾರಕ್ಕೆ ಮುಂದೂಡಲಾಗಿದೆ. ಹೈಕೋರ್ಟ್ ಆದೇಶದಂತೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ.ಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ನಮ್ಮ ಯಾತ್ರಿ: 10 ಸಾವಿರ ಡೌನ್‌ಲೋಡ್

ಆಟೋರಿಕ್ಷಾ ಚಾಲಕರೇ ಆರಂಭಿಸಿರುವ 'ನಮ್ಮ ಯಾತ್ರಿ' ಆ್ಯಪ್ ಆಧಾರಿತ ಸೇವೆ ಆರಂಭವಾಗಿದ್ದು, 10 ಸಾವಿರಕ್ಕೂ ಹೆಚ್ಚು ಮಂದಿ ಈ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

'2,000 ಪ್ರಯಾಣಿಕರು ನೋಂದಣಿ ಮಾಡಿಕೊಂಡಿದ್ದಾರೆ. ಈ ಆ್ಯಪ್ ಅಗ್ರಿಗೇಟರ್ ನಿಯಮಗಳಿಗೆ ಒಳಪಡುವುದಿಲ್ಲ. ಡಿಜಿಟಲ್ ವಾಣಿಜ್ಯಕ್ಕಾಗಿ ಮುಕ್ತ ವ್ಯವಸ್ಥೆ(ಒಎನ್‌ಡಿಸಿ) ಅಡಿಯಲ್ಲಿ ಸರ್ಕಾರ ನಿಗದಿ ಮಾಡಿರುವ ದರದಲ್ಲೇ ಆಟೋರಿಕ್ಷಾ ಸೇವೆ ನೀಡುತ್ತೇವೆ. ಆದ್ದರಿಂದ ಸಾರಿಗೆ ಇಲಾಖೆಯಿಂದ ಇದಕ್ಕೆ ಪ್ರತ್ಯೇಕ ಪರವಾನಗಿ ಪಡೆಯುವ ಅಗತ್ಯವೂ ಇಲ್ಲ' ಎಂದು ಆಟೋರಿಕ್ಷಾ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ ತಿಳಿಸಿದರು.

ಬಿಬಿಎಂಪಿ ಪೌರಕಾರ್ಮಿಕರ ಟ್ರೇಡ್ ಯೂನಿಯನ್‌ಗಳ ಜಂಟಿ ಕ್ರಿಯಾ ಸಮಿತಿ ಒತ್ತಾಯ

28,329 ಪೌರಕಾರ್ಮಿಕರ ಕಾಯಂಗೊಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 28,329 ಪೌರಕಾರ್ಮಿಕರನ್ನು ಐಪಿಡಿ ಸಾಲಪ್ಪ ವರದಿಯಂತೆ ಕಾಯಂಗೊಳಿಸಬೇಕು ಎಂದು ಬಿಬಿಎಂಪಿ ಪೌರಕಾರ್ಮಿಕರ ಟ್ರೇಡ್ ಯೂನಿಯನ್ ಜಂಟಿ ಕ್ರಿಯಾ ಸಮಿತಿ ಆಗ್ರಹಿಸಿದೆ.

'ಇತ್ತೀಚಿಗೆ ನಗರಾಭಿವೃದ್ಧಿ ಇಲಾಖೆ 11,133 ಪೌರಕಾರ್ಮಿಕರನ್ನು ನೇರ ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿದೆ. ಇದರಲ್ಲಿ ಬಿಬಿಎಂಪಿಯ ನೇರ ನೇಮಕಾತಿ ಹಾಗೂ ಕ್ಷೇಮಾಭಿವೃದ್ಧಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 3,763 ಹುದ್ದೆಗಳ ನೇರ ನೇಮಕಾತಿ ಆದೇಶವನ್ನು ಹಿಂಪಡೆಯಬೇಕು. ಬಿಬಿಎಂಪಿಯ 16,665 ನೇರ ವೇತನ ಪೌರಕಾರ್ಮಿಕರು, 4,646 ಆಟೋ ಟಿಪ್ಪರ್ ಚಾಲಕರು, 4,646 ಸಹಾಯಕರು, 593 ಕಾಂಪ್ಯಾಕ್ಟ್ ಚಾಲಕರು, 1,779 ಲೋಡರ್‌ಗಳು ಸೇರಿ ಒಟ್ಟು 28,329 ಕಾರ್ಮಿಕರನ್ನು ಕಾಯಂಗೊಳಿಸಬೇಕು. ಈ ಕುರಿತು ಈಗಾಗಲೇ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಗಿದೆ' ಎಂದು ಸಮಿತಿಯ ಅಧ್ಯಕ್ಷ ಬಾಬು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'2016ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ಸರ್ಕಾರ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ಐಪಿಡಿ ಸಾಲಪ್ಪ ವರದಿಯಂತೆ ನೇರ ವೇತನ ಪಾವತಿ ಮಾಡುವಂತೆ ಆದೇಶ ಹೊರಡಿಸಿದ್ದರು. ಈಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೆಲವೇ ಕಾರ್ಮಿಕರನ್ನು ಕಾಯಂಗೊಳಿಸಿರುವುದು ಶ್ಲಾಘನೀಯ. ಇದರಿಂದ ಉಳಿದ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ. ಎಲ್ಲರನ್ನು ಕಾಯಂಗೊಳಿಸಬೇಕು' ಎಂದು ಒತ್ತಾಯಿಸಿದರು.

'ಲೋಡರ್ಸ್, ವಾಹನ ಚಾಲಕರು, ಸಹಾಯಕರು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ನೇರ ವೇತನದ ಅಡಿಯಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು. ಐಪಿಡಿ ಸಾಲಪ್ಪ ಅಧ್ಯಕ್ಷತೆಯಲ್ಲಿ ರಚನೆಯಾದ 'ಸ್ವೀಪರ್ಸ್ ಮತ್ತು ಸ್ಕ್ಯಾವೆಂಜರ್‌ಗಳ ಜೀವನ ಹಾಗೂ ಸೇವಾ ಸುಧಾರಣಾ ಸಮಿತಿ' ನೀಡಿದ್ದ 310 ಪುಟ 17 ಅಂಶಗಳ 96 ಶಿಫಾರಸುಗಳಲ್ಲಿ ಸರ್ಕಾರ ಅಂಗೀಕರಿಸಿರುವ 36 ಅಂಶಗಳನ್ನು ಕೂಡಲೇ ಜಾರಿಗೊಳಿಸಬೇಕು' ಎಂದು ಆಗ್ರಹಿಸಿದರು.



ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರನ್ನು ಐಪಿಡಿ ಸಾಲಪ್ಪ ವರದಿಯಂತೆ ಕಾಯಂಗೊಳಿಸಬೇಕು ಎಂಬ ಜಾಗೃತಿ ಅಭಿಯಾನದಲ್ಲಿ ಪೌರಕಾರ್ಮಿಕರು ಭಾಗವಹಿಸಿದ್ದರು.

ದೀಪಾವಳಿಗೆ 1500 ವಿಶೇಷ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಪ್ರಯುಕ್ತ ಪ್ರಯಾಣಿಕರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ 1,500 ವಿಶೇಷ ಬಸ್‌ಗಳ ಕಾರ್ಯಾಚರಣೆಗೆ ವ್ಯವಸ್ಥೆ ಮಾಡಿದೆ.

ಇದೇ 21ರಿಂದ 23ರವರೆಗೆ ಬೆಂಗಳೂರಿನಿಂದ ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಹೊರ ರಾಜ್ಯಗಳಿಗೆ ವಿಶೇಷ ಬಸ್‌ಗಳು ಹೊರಡಲಿವೆ. 26ರಿಂದ 30ರ ವರೆಗೆ ಬೆಂಗಳೂರಿಗೆ ವಾಪಸ್ ಬರಲಿವೆ.

ಮೆಜೆಸ್ಟಿಕ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿಗೆ ಬಸ್‌ಗಳು ಸಂಚಾರ ಮಾಡಲಿವೆ.

ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿಗೆ ತೆರಳಲಿವೆ. ತಮಿಳುನಾಡು ಮತ್ತು ಆಂಧ್ರ ಪ್ರದೇಶಕ್ಕೆ ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳು ಸಂಚರಿಸಲಿವೆ.

ಆಸನಗಳನ್ನು ಮುಂಗಡವಾಗಿ ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ 5ರಷ್ಟು ರಿಯಾಯಿತಿ ನೀಡಲಾಗುವುದು. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟನ್ನು ಒಟ್ಟಿಗೆ ಕಾಯ್ದಿರಿಸಿದಾಗ ಹಿಂದಿರುಗುವ ಪ್ರಯಾಣ ದರದಲ್ಲಿ ಶೇ 10ರಷ್ಟು ರಿಯಾಯಿತಿ ಕೊಡಲಾಗುವುದು. ಪ್ರಯಾಣಿಕರ ಒತ್ತಡಕ್ಕೆ ಅನುಗುಣವಾಗಿ ನಿಗಮದ ಕಾರ್ಯಾಚರಣೆ ವ್ಯಾಪ್ತಿಯಲ್ಲಿನ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಂದಲೂ ವಿಶೇಷ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.



ಶ್ರೀನಿವಾಸನಗರದಲ್ಲಿರುವ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಾಖಾಮಠದ ನವೀಕರಣ ಕಾಮಗಾರಿಗೆ ಸಿದ್ಧರಾಮಾನಂದ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಸೋಮವಾರ ಭೂಮಿಪೂಜೆ ಮಾಡಲಾಯಿತು. ಬೀರೇಂದ್ರ ಕೇಶವ ತಾರಕಾನಂದ ಸ್ವಾಮೀಜಿ, ಮಾಜಿ ಸಚಿವ ಎಚ್.ಎಂ. ರೇವಣ್ಣ, ಲಿಂಗಪ್ಪ, ಮಾಜಿ ಮೇಯರ್‌ಗಳಾದ ರಾಮಚಂದ್ರಪ್ಪ, ವೆಂಕಟೇಶಮೂರ್ತಿ, ಶಾಂತಕುಮಾರಿ, ನಾಗರಾಜ್, ಬೀರಪ್ಪ, ನಿವೃತ್ತ ಐಎಎಸ್ ಅಧಿಕಾರಿಗಳಾದ ಪುಟ್ಟಸ್ವಾಮಿ, ಪೋಂಡೆ, ರಾಮಯ್ಯ, ರಾಮಚಂದ್ರಪ್ಪ, ಪತ್ರಕರ್ತ ಆರ್.ಪಿ.ಎಸ್. ರೆಡ್ಡಿ, ಕೆ. ಪ್ರಭಾವತಿ, ವಿಜಯಲಕ್ಷ್ಮಿ ಇದ್ದರು.

ನಗರದಲ್ಲಿ ಮುಂದುವರಿದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಹಲವು ಕಡೆ ಸೋಮವಾರ ಸಂಜೆ ಧಾರಾಕಾರ ಮಳೆಯಾಗಿದೆ. ಕರ್ತವ್ಯ ಮುಗಿಸಿ ಮನೆಗೆ ತೆರಳುತ್ತಿದ್ದವರು ಪರದಾಡಿದರು. ನಗರದಲ್ಲಿ ಶನಿವಾರ ಹಾಗೂ ಭಾನುವಾರವೂ ಧಾರಾಕಾರ ಮಳೆ ಸುರಿದಿತ್ತು.

ಯಶವಂತಪುರ, ರಾಜಾಜಿನಗರ, ಪೀಣ್ಯ, ಎಂ.ಜಿ. ರಸ್ತೆ, ಕೋರಮಂಗಲ, ಚಿಕ್ಕಪೇಟೆ, ಕೆ.ಆರ್.ಮಾರುಕಟ್ಟೆ, ಬಸವನಗುಡಿ, ಮೆಜೆಸ್ಟಿಕ್ ಸುತ್ತಮುತ್ತಲ ಪ್ರದೇಶದಲ್ಲಿ ಮಳೆ ಸುರಿದಿದೆ. ಮಡಿವಾಳ, ಕೋರಮಂಗಲ, ಆಡುಗೋಡಿ, ಅಶೋಕನಗರ, ಹಲಸೂರು, ದುಮ್ಮಲೂರು, ಎಚ್‌ಎಎಲ್, ಬೈಯಪ್ಪನಹಳ್ಳಿ, ಬೆಳ್ಳಂದೂರು, ಮಾರತ್ತಹಳ್ಳಿ, ಶಿವಾಜಿನಗರ, ಕೆ.ಜಿ.ಹಳ್ಳಿ, ಪುಲಿಕೇಶಿನಗರ, ವಸಂತನಗರದಲ್ಲೂ ಬಿಡುವು ಕೊಟ್ಟು ಮಳೆಯಾಗಿದೆ.

ಕೆಲವು ಬಡಾವಣೆಗಳಲ್ಲಿ ದಿಢೀರ್ ಸುರಿದ ಮಳೆಯಿಂದ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ರಸ್ತೆ ದುರಸ್ತಿಗಾಗಿ ಅಗೆದ ಸ್ಥಳದಲ್ಲಿ ಮಳೆಯ ನೀರು ಸಂಗ್ರಹಗೊಂಡು ವಾಹನ ಸವಾರರು ಪರದಾಡಿದರು.

ನಗರದಲ್ಲಿ ಇನ್ನೂ ನಾಲ್ಕು ದಿನಗಳ ಕಾಲ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ.

ಎಂಜಿನಿಯರಿಂಗ್ ಕೋರ್ಸ್ ಪ್ರವೇಶ: ನ.30 ಕೊನೆ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಕೊನೆ ದಿನವನ್ನು ಸುಪ್ರೀಂ ಕೋರ್ಟ್ ನ.30ರವರೆಗೆ ವಿಸ್ತರಿಸಿದೆ ಎಂದು ಸಚಿವ ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಎಂಜಿನಿಯರಿಂಗ್ ಕೋರ್ಸ್ ಪ್ರವೇಶಕ್ಕೆ ಅ.25 ಕೊನೆ ದಿನ ಆಗಿತ್ತು. ಆದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಈ ದಿನಾಂಕವನ್ನು ವಿಸ್ತರಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್ ಮೊರೆಹೋಗಿತ್ತು. ಈ ಮನವಿಯನ್ನು ನ್ಯಾಯಾಲಯ ಪುರಸ್ಕರಿಸಿದೆ ಎಂದು ತಿಳಿಸಿದ್ದಾರೆ.

'ತಿಂಗಳಿಗಿಂತ ಹೆಚ್ಚು ಕಾಲಾವಕಾಶ ಸಿಕ್ಕಿದೆ. ಇಷ್ಟರಲ್ಲಿ ನಾವು ಸುಗಮ ಕೌನ್ಸೆಲಿಂಗ್ ಸೇರಿ ಪ್ರವೇಶ ಪ್ರಕ್ರಿಯೆ ಮುಗಿಸಲಿದ್ದೇವೆ. ಕಳೆದ ವರ್ಷ ಪಿಯುಸಿ ಪಾಸಾದ 24 ಸಾವಿರ ಅಭ್ಯರ್ಥಿಗಳು ಈ ವರ್ಷ ಸಿಇಟಿ ಬರೆದು, ರ‍್ಯಾಂಕಿಂಗ್ ವಿಚಾರದಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಸ್ವಲ್ಪ ಅಡಚಣೆ ಎದುರಾಯಿತು. ಅಂತಿಮ ದಿನಾಂಕ ವಿಸ್ತರಿಸುವಂತೆ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದವು' ಎಂದು ವಿವರಿಸಿದ್ದಾರೆ.

ನಗರದಲ್ಲಿ ಇಂದು

ಹಣ್ಣು ಮತ್ತು ತರಕಾರಿ ಸಾಗಣೆ ವಾಹನಗಳ ವಿತರಣಾ ಕಾರ್ಯಕ್ರಮ: ವಿತರಣೆ: ಮುನಿರತ್ನ, ಎಸ್.ಟಿ. ಸೋಮಶೇಖರ್, ತೇಜಸ್ವಿಸೂರ್ಯ, ಉದಯ್ ಗರುಡಾಚಾರ್, ಅತಿಥಿಗಳು: ಬಿ.ಡಿ. ಭೂಕಾಂತ್, ಎನ್. ದೇವರಾಜ್, ರಾಜೇಂದ್ರ ಕುಮಾರ್ ಕಟಾರಿಯಾ, ನಾಗೇಂದ್ರ ಪ್ರಸಾದ್, ಆಯೋಜನೆ: ಹಾಪ್‌ಕಾಮ್ಸ್, ಸ್ಥಳ: ಪ್ರಧಾನ ಕಚೇರಿ ಹಾಪ್‌ಕಾಮ್ಸ್ ಆವರಣ, ಡಾ.ಎಂ.ಎಚ್. ಮರೀಗೌಡ ರಸ್ತೆ, ಲಾಲ್‌ಬಾಗ್, ಬೆಳಿಗ್ಗೆ 11

ಏರ್ ಮಾರ್ಷಲ್ ಪಿ.ವಿ. ಅಯ್ಯರ್ ಅವರು ಬರೆದ 'ಫಿಟ್ ಅಟ್ ಎನಿ ಏಜ್' ಪುಸ್ತಕದ ಬಿಡುಗಡೆ: ಅತಿಥಿಗಳು: ಮನ್ವೇಂದ್ರ ಸಿಂಗ್, ರಾಜೀವ್ ಮೆಹರಿಷಿ, ರಮೇಶ್ ಕೃಷ್ಣನ್, ಆಯೋಜನೆ: ಬ್ಲೂಮ್ಸ್‌ಬರಿ, ಸ್ಥಳ: ಮನೋರಂಜನ್ ಸಭಾಂಗಣ, ಎಚ್‌ಕ್ಯೂಟಿಸಿ, ಏರ್‌ಫೋರ್ಸ್ ಆವರಣ, ಮೇಖ್ರಿ ವೃತ್ತ, ಹೆಬ್ಬಾಳ, ಸಂಜೆ 5.30

ಆಡಳಿತ ವಿಭಾಗದ ಡಿಸಿಪಿ ವಿರುದ್ಧ ಸಿಬ್ಬಂದಿ ಆರೋಪ

ನಿಶಾ ವಿರುದ್ಧ ಕಿರುಕುಳದ ದೂರು

ಪ್ರಜಾವಾಣಿ ವಾರ್ತೆ


ನಿಶಾ ಜೇಮ್ಸ್

ಬೆಂಗಳೂರು: ನಗರದ ಪೊಲೀಸ್ ಆಯುಕ್ತರ ಕಚೇರಿಯ ಆಡಳಿತ ವಿಭಾಗದ ಡಿಸಿಪಿ ನಿಶಾ ಜೇಮ್ಸ್ ಅವರು ಕಚೇರಿ ಸಿಬ್ಬಂದಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಸಿಬ್ಬಂದಿ ಆಡಳಿತ ವಿಭಾಗದ ಎಡಿಜಿಪಿ ಡಾ.ಎಂ.ಎ.ಸಲೀಂಗೆ ವಿವರವಾದ ಪತ್ರ ಬರೆದಿದ್ದಾರೆ.

ಸೆ.3ರಂದು 13 ಪುಟಗಳ ದೂರು ನೀಡಿದ್ದು, ಅದು ಈಗ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

‘ದಕ್ಷ, ಪ್ರಾಮಾಣಿಕ ಅಧಿಕಾರಿ ಎಂದು ತಿಳಿದಿದ್ದರೆ ಶುದ್ಧ ಸುಳ್ಳು. ಸಾಧಾರಣ ಸಿಬ್ಬಂದಿ ನಾವು. ವಾರ್ಷಿಕ ವೇತನ ಬಡ್ತಿಯನ್ನು ತಡೆ ಹಿಡಿದು, ಭವಿಷ್ಯದ ಜತೆಗೆ ಚೆಲ್ಲಾಟ ಆಡುತ್ತಿದ್ದಾರೆ. ತಾವು ಮಾಡಿದ ಪ್ರಮಾದವನ್ನು ಸಿಬ್ಬಂದಿ ಮೇಲೆ ಹೊರಿಸಿ ಕಿರುಕುಳ ನೀಡುತ್ತಿದ್ದಾರೆ. ನಮ್ಮ ಉತ್ಸಾಹ ಕುಂದಿದೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ನಿಶಾ ಅವರು ಸಣ್ಣ ಸಮಸ್ಯೆಗಳನ್ನೇ ದೊಡ್ಡದಾಗಿ ಬಿಂಬಿಸಿ ಕೆಲಸವನ್ನು ವರ್ಷಗಟ್ಟಲೆ ಎಳೆಯುತ್ತಿದ್ದಾರೆ. ಕಡತಗಳು ವಿಲೇವಾರಿಯಾಗದೆ ಉಳಿಯುತ್ತಿವೆ’ ಎಂದು ಉಲ್ಲೇಖಿಸಿದ್ದಾರೆ.

‘ಕಚೇರಿ ಕೆಲಸ ಆರಂಭಿಸುವುದೇ ಸಂಜೆ 6ರ ನಂತರ. ರಾತ್ರಿ 3 ಗಂಟೆ ತನಕ ಮಕ್ಕಳು, ಪತ್ನಿ, ವಯಸ್ಕ ತಂದೆ - ತಾಯಿ ಬಿಟ್ಟು ಕಚೇರಿಯಲ್ಲಿ ಇರಬೇಕಾಗಿದೆ. ಸರಿಯಾದ ಸಮಯಕ್ಕೆ ಊಟ ಇಲ್ಲ. ನಿದ್ರೆಗೂ ಸಮಯ ಸಿಗುತ್ತಿಲ್ಲ. ಒತ್ತಡದಿಂದ ಕಾಯಿಲೆಗಳು ಬರುತ್ತಿವೆ. ಕಡತಕ್ಕೆ ಸಹಿ ಪಡೆಯುವುದೇ ಯುದ್ಧದಂತೆ ಆಗಿದೆ. ಈ ವರ್ತನೆ ವಿರೋಧಿಸಿದರೆ ಗತಿ ಏನು’ ಎಂದು ಪತ್ರದಲ್ಲಿ ಬರೆದು, ಬಡ್ತಿ ತಡೆ ಹಿಡಿದವರ ಪಟ್ಟಿ ಹಾಗೂ ಅಮಾನತುಗೊಂಡ 26 ಸಿಬ್ಬಂದಿ ಹೆಸರನ್ನು ಕೂಡ ಬರೆಯಲಾಗಿದೆ.

‘ಇಲಾಖೆಯ ವಿಚಾರಣೆ ಪಟ್ಟಿ ಮತ್ತೊಮ್ಮೆ ಪರಿಶೀಲಿಸಬೇಕು. ವರ್ಗಾವಣೆಗೆ ನಡೆದ ಕೌನ್ಸೆಲಿಂಗ್ ಸಹ ತಡರಾತ್ರಿ ತನಕ ನಡೆದಿತ್ತು. ಸೌಮೇಂದು ಮುಖರ್ಜಿ, ಕಮಲ್ ಪಂತ್ ವರ್ಗಾವಣೆ ಬಳಿಕ ಸೇಫ್ ಸಿಟಿ ನಿರ್ಭಯಾ ಪ್ರಾಜೆಕ್ಟ್ ಕಾರ್ಯಗತ ಕುಂಠಿತಗೊಂಡಿದೆ. ಖರೀದಿಸಿರುವ ಸಲಕರಣೆ ಕಳಪೆಯಾಗಿವೆ’ ಎಂದು ದೂರಿದ್ದಾರೆ.

‘ಹಿರಿಯ ಅಧಿಕಾರಿಗಳ ಸೂಚನೆ ಗಾಳಿಗೆ ತೂರಿ ಇಷ್ಟದಂತೆ ಸಿಬ್ಬಂದಿ ವರ್ಗಾವಣೆ ಮಾಡಿದ್ದಾರೆ. ಸಿಬ್ಬಂದಿಯನ್ನು ಶಿಸ್ತುಕ್ರಮಕ್ಕೆ ಒಳಪಡಿಸಿ ಆನಂದ ಪಡುತ್ತಿದ್ದಾರೆ. ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ’ ಎಂದು ಪತ್ರದಲ್ಲಿ ದೂರಿದ್ದಾರೆ.

ಅವರ ವಿರುದ್ಧ ವೈಯಕ್ತಿಕ ಆರೋಪ ಸಹ ಮಾಡಲಾಗಿದೆ. ಪತ್ರದ ಕೊನೆಯಲ್ಲಿ ನೊಂದ ಲಿಪಿಕ ಸಿಬ್ಬಂದಿಯ ಹೆಸರು ಬರೆದು ಸಹಿ ಹಾಕಲಾಗಿದೆ.

ಅಧಿಕಾರಿ ಪರವಾಗಿ ಅಭಿಯಾನ

‘ನಿಶಾ ಜೇಮ್ಸ್ ಪ್ರಾಮಾಣಿಕ ಅಧಿಕಾರಿ. ಕಚೇರಿಯ ಭ್ರಷ್ಟ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಂಡಿದ್ದರು. ಅದಕ್ಕೇ ಈ ರೀತಿ ಆರೋಪಿಸಿ ಪತ್ರ ಬರೆದಿದ್ದಾರೆ. ಸಚಿವರೇ ಹೇಳಿದರೂ ನಿಯಮ ಉಲ್ಲಂಘಿಸಿ ಅವರು ಕೆಲಸ ಮಾಡಿಲ್ಲ. 10–12 ವರ್ಷದಿಂದ ಕಚೇರಿಯಲ್ಲೇ ಠಿಕಾಣಿ ಹೂಡಿದ್ದವರನ್ನು ಕೆಲವು ತಿಂಗಳ ಹಿಂದೆ ವರ್ಗಾವಣೆ ಮಾಡಿದ್ದರು. ಪ್ರಾಜೆಕ್ಟ್‌ವೊಂದಕ್ಕೆ ಕೇಂದ್ರ ಸರ್ಕಾರದಿಂದ ಕೋಟ್ಯಂತರ ರೂಪಾಯಿ ಅನುದಾನ ಬಿಡುಗಡೆಯಾಗಿದೆ. ಅದರಲ್ಲಿ ಅವ್ಯವಹಾರ ಆಗದಂತೆ ನೋಡಿಕೊಳ್ಳುತ್ತಿದ್ದಾರೆ. ಇದರಿಂದ ಹತಾಶೆಗೆ ಒಳಗಾದವರು ದೂರು ನೀಡಿರುವ ಸಾಧ್ಯತೆಯಿದೆ’ ಎಂದು ಪೊಲೀಸ್ ಇಲಾಖೆಯ ಸಿಬ್ಬಂದಿ ಒಬ್ಬರು ಅಭಿಪ್ರಾಯಪಟ್ಟಿದ್ದಾರೆ.

ನಿಶಾ ಬೆಂಬಲಿಸಿ ಅವರ ಅಭಿಮಾನಿಗಳು ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ಆರಂಭಿಸಿದ್ದಾರೆ.

ಮೂರ್ಖರ ಕೆಲಸ: ನಿಶಾ ಜೇಮ್ಸ್

‘ಪತ್ರದಲ್ಲಿ ಹೆಸರಿರುವ ಸಿಬ್ಬಂದಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ನಾವು ಪತ್ರ ಬರೆದಿಲ್ಲ ಎಂದು ತಿಳಿಸಿದ್ದಾರೆ. ಕಚೇರಿಗೆ ಪತ್ರ ತಲುಪಿಲ್ಲ. ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ ಅಷ್ಟೆ. ಈ ರೀತಿಯ ಪತ್ರ ಬರೆಯುವುದು ಮೂರ್ಖರ ಹಾಗೂ ಹಾಸ್ಯಾಸ್ಪದ ಕೆಲಸ. ಈ ಬಗ್ಗೆ ಹೆಚ್ಚು ಪ್ರತಿಕ್ರಿಯೆ ನೀಡುವುದಿಲ್ಲ’ ಎಂದು ನಿಶಾ ಜೇಮ್ಸ್ ‘ಪ್ರಜಾವಾಣಿ’ಗೆ ತಿಳಿಸಿದರು.

ಗಾಂಜಾ ಮಾರಾಟ: ಆರೋಪಿ ಬಂಧನ


ಡೇವಿಡ್

ಬೆಂಗಳೂರು: ಬೆಳ್ಳಂದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಡೇವಿಡ್ (25) ಎಂಬಾತನನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಬಂಧಿಸಿದ್ದಾರೆ.

ಆರೋಪಿಯಿಂದ ಅಂದಾಜು ₹ 3 ಲಕ್ಷ ಮೌಲ್ಯದ ಮಾದಕ ವಸ್ತುಗಳಾದ 4 ಕೆ.ಜಿ. ಗಾಂಜಾ, ಬೈಕ್, ಕೃತ್ಯಕ್ಕೆ ಬಳಸಿದ ಮೊಬೈಲ್ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿ 5 ವರ್ಷದ ಹಿಂದೆ ಬೆಂಗಳೂರಿಗೆ ಬಂದು ಚೈನೀಸ್ ಫಾಸ್ಟ್‌ಫುಡ್ ಮಾಡುವ ಕೆಲಸದಲ್ಲಿ ತೊಡಗಿದ್ದ. ನಂತರ ಆ ಕೆಲಸ ಬಿಟ್ಟು ಗಾಂಜಾ ಮಾರಾಟದ ದಂಧೆಗೆ ಇಳಿದಿದ್ದ ವೇಳೆ ಹೆಣ್ಣೂರು ಪೊಲೀಸರು ಬಂಧಿಸಿದ್ದರು. ನ್ಯಾಯಾಂಗ ಬಂಧನದ ಅವಧಿಯಲ್ಲಿ ಕೇರಳದ ಆರೋಪಿ ಪರಿಚಯವಾಗಿದ್ದ. ಆತನೇ ಡೇವಿಡ್‌ಗೂ ಜಾಮೀನು ಕೊಡಿಸಿದ್ದ. ಇಬ್ಬರು ಗಾಂಜಾ ಮಾರಾಟಕ್ಕೆ ಇಳಿದಿದ್ದರು.

ಜೀವಾವಧಿ ಶಿಕ್ಷೆ ಮಾರ್ಪಾಡು: ಪತ್ನಿ ಕೊಂದ ಪತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಬ್ಬದ ದಿನ ಅಡುಗೆ ಮಾಡಿಲ್ಲ’ ಎಂದು ಕುಪಿತಗೊಂಡು ಪತ್ನಿ ಕೊಲೆ ಮಾಡಿದ್ದ ಪತಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ಮಾರ್ಪಾಡು ಮಾಡಿದೆ. ‘ಅಪರಾಧಿ ಈಗಾಗಲೇ ಆರು ವರ್ಷಗಳಿಗೂ ಹೆಚ್ಚು ಕಾಲ ಜೈಲು ವಾಸ ಅನುಭವಿಸಿರುವ ಕಾರಣ ಆತನನ್ನು ಜೈಲಿನಿಂದ ಬಿಡುಗಡೆಗೊಳಿಸಿ’ ಎಂದು ಆದೇಶಿಸಿದೆ.

‘ಮೃತ ಮಹಿಳೆ ಮದ್ಯ ವ್ಯಸನಿಯಾಗಿದ್ದಳು ಎಂಬುದನ್ನು ಸಾಕ್ಷ್ಯಗಳು ದೃಢಪಡಿಸುತ್ತಿವೆ. ಇಬ್ಬರು ಮಕ್ಕಳ ತಾಯಿಯಾಗಿದ್ದ ಆಕೆ ಮನೆ ಕೆಲಸ ಮಾಡುತ್ತಿರಲಿಲ್ಲ. ಗೌರಿಗಣೇಶ ಹಬ್ಬದ ದಿನ ಅಡುಗೆ ಮಾಡಿಲ್ಲ, ಮಕ್ಕಳಿಗೆ ಊಟ ಕೊಟ್ಟಿಲ್ಲ. ಪಾನಮತ್ತಳಾಗಿ ಮಲಗಿದ್ದಾಳೆ ಎಂದು ಕೋಪಗೊಂಡ ಪತಿ ದಿಢೀರ್ ಆವೇಶದಲ್ಲಿ ಆಕೆಗೆ ದೊಣ್ಣೆಯಿಂದ ಹೊಡೆದ ಪರಿಣಾಮ ಸಾವನ್ನಪ್ಪಿದ್ದಾಳೆ. ಈ ಘಟನೆಯಲ್ಲಿ ಪತಿಗೆ ಕೊಲೆ ಮಾಡುವ ಉದ್ದೇಶ ಇರಲಿಲ್ಲ ಎಂಬುದು ಕಂಡುಬಂದಿದೆ. ಹಾಗಾಗಿ, ಇದು ಉದ್ದೇಶಪೂರ್ವಕವಲ್ಲದ ನರಹತ್ಯೆ ಎಂದೇ ಪರಿಗಣಿಸಬೇಕಾಗುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಸುರೇಶ ಎಂಬುವರು ಪತ್ನಿ ರಾಧಾಳನ್ನು ಕೊಂದ ಆರೋಪದಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದ್ದರು. ಶಿಕ್ಷೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ. ಸೋಮಶೇಖರ್ ಹಾಗೂ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, ‘ಅಪರಾಧಿಯ ವಿರುದ್ಧ ಬೇರೆ ಯಾವುದೇ ಪ್ರಕರಣಗಳು ಇಲ್ಲದಿದ್ದರೆ ತಕ್ಷಣ ಜೈಲಿನಿಂದ ಬಿಡುಗಡೆಗೊಳಿಸಿ’ ಎಂದು ಆದೇಶಿಸಿದೆ.

2016ರಲ್ಲಿ ಸುರೇಶ ಪತ್ನಿಯನ್ನು ದೊಣ್ಣೆಯಿಂದ ಹೊಡೆದಿದ್ದರು. ವಿಚಾರಣಾ ನ್ಯಾಯಾಲಯ 2017ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಿತ್ತು.

ಆಟೊ ಕಳವು ಆರೋಪಿ ಬಂಧನ

ಬೆಂಗಳೂರು: ಸರಕು ಸಾಗಣೆ ಆಟೊ ಕಳವು ಮಾಡಿದ್ದ ಮೊಹಮ್ಮದ್ ಅಜರ್ (29) ಎಂಬ ಆರೋಪಿಯನ್ನು ಯಶವಂತಪುರ ಪೊಲೀಸರು ಬಂಧಿಸಿ, ಕದ್ದ ಹಣ್ಣುಗಳು ಮತ್ತು ಸರಕು ಸಾಗಣೆ ಆಟೊ ವಶಕ್ಕೆ ಪಡೆಯಲಾಗಿದೆ.

ಆರೋಪಿ ಅಜರ್ ರಸ್ತೆಬದಿ ನಿಲ್ಲಿಸುತ್ತಿದ್ದ ತಳ್ಳು ಗಾಡಿಗಳಲ್ಲಿದ್ದ ಹಣ್ಣುಗಳ ಬುಟ್ಟಿಗಳನ್ನು ಕಳವು ಮಾಡುತ್ತಿದ್ದ. ಕಳವು ಮಾಡಿದ ಹಣ್ಣು ಸಾಗಿಸಲು ರಾಮಮೂರ್ತಿ ನಗರ ಠಾಣೆ ವ್ಯಾಪ್ತಿಯಲ್ಲಿ ಗೂಡ್ಸ್ ಆಟೊ ಕಳವು ಮಾಡಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇನ್‌ಸ್ಪೆಕ್ಟರ್ ಕಿಶೋರ್ ಅಮಾನತು

ಆನೇಕಲ್: ಪಿಎಸಿಎಲ್ ಹಗರಣಕ್ಕೆ ಸಂಬಂಧಿಸಿದಂತೆ ನಕಲಿ ದಾಖಲೆ ಸೃಷ್ಟಿಸಿ ಅಕ್ರಮ ಭೂಮಾರಾಟದ ತನಿಖೆ ನಡೆಯುತ್ತಿದ್ದು, ಆಂತರಿಕ ಭದ್ರತಾ ವಿಭಾಗದ ಇನ್‌ಸ್ಪೆಕ್ಟರ್ ಬಿ.ಕೆ.ಕಿಶೋರ್ ಕುಮಾರ್ ಅವರನ್ನು ಅಮಾನತು ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಮಾನತು ಆದೇಶವನ್ನು ಇವರ ಕುಟುಂಬಕ್ಕೆ ತಲುಪಿಸಲಾಗಿದೆ ಎನ್ನಲಾಗಿದೆ. ಪರ್ಲ್ಸ್ ಆಗ್ರೊಟೆಕ್ ಕಾರ್ಪೊರೇಷನ್ ಲಿಮಿಟೆಟ್ ಕಂಪನಿಗೆ ಸೇರಿದ ಆನೇಕಲ್ ತಾಲ್ಲೂಕಿನ ಎಂ.ಮೇಡಹಳ್ಳಿಯ 12.30 ಎಕರೆ ಜಮೀನನ್ನು ನಕಲಿ ದಾಖಲೆ ಸೃಷ್ಟಿಸಿ ಅಕ್ರಮವಾಗಿ ಮಾರಾಟ ಮಾಡಲಾಗಿತ್ತು.

ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಸಂಬಂಧ ವಕೀಲ ಮಂಜುನಾಥ್, ರಿಯಲ್ ಎಸ್ಟೇಟ್ ಏಜೆಂಟ್ ಚಂದ್ರಮೋಹನ್ ಮತ್ತು ಪೃಥ್ವಿನ್ ಅವರನ್ನು ಬಂಧಿಸಲಾಗಿತ್ತು. ಈ ಪ್ರಕರಣದಲ್ಲಿ ಬಿ.ಕೆ. ಕಿಶೋರ್ ಕುಮಾರ್ ಅವರ ಸಹೋದರ ಪಾಲ್ಗೊಂಡಿದ್ದಾರೆ ಎನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ಇನ್‌ಸ್ಪೆಕ್ಟರ್ ಅವರನ್ನು ಅಮಾನತು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಆನೇಕಲ್ ಉಪ ವಿಭಾಗದ ಡಿವೈಎಸ್ಪಿ ಲಕ್ಷ್ಮೀನಾರಾಯಣ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ.

‘ಪಿಂಚಣಿ ಸೌಲಭ್ಯ ಒದಗಿಸಲು ಆಗ್ರಹ’

ಬೆಂಗಳೂರು: ರಾಜ್ಯದ ಅನುದಾನಿತ ಶಾಲಾ–ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ನೌಕರರಿಗೆ ಪಿಂಚಣಿ ಸೌಲಭ್ಯ ಒದಗಿಸಬೇಕು ಎಂದು ಅನುದಾನಿತ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘ ಆಗ್ರಹಿಸಿದೆ.

‘ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 2006, ಏ. 1ರ ನಂತರ ನೇಮಕಗೊಂಡು, ವೇತನ ಪಡೆಯುತ್ತಿರುವ ಹಾಗೂ ಮೊದಲೇ ನೇಮಕಗೊಂಡು, ಬಳಿಕ ಅನುದಾನಕ್ಕೊಳಪಟ್ಟು ವೇತನ ಪಡೆಯುತ್ತಿರುವ ನೌಕರರಿಗೆ ಪಿಂಚಣಿ ಸೌಲಭ್ಯವಿಲ್ಲ. ಈ ಸೌಲಭ್ಯವಿಲ್ಲದೇ 3000ಕ್ಕೂ ಹೆಚ್ಚು ನೌಕರರು ಈಗಾಗಲೇ ನಿವೃತ್ತಿಯಾಗಿದ್ದಾರೆ’ ಎಂದು ಸಂಘದ ರಾಜ್ಯಾಧ್ಯಕ್ಷ ಜಿ. ಹನುಮಂತಪ್ಪ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸಬೇಕು. ಇಲ್ಲದಿದ್ದರೆ ಡಿಸೆಂಬರ್ 20ರ ನಂತರ ಶಾಲಾ–ಕಾಲೇಜುಗಳನ್ನು ಬಂದ್ ಮಾಡಿ ಕುಟುಂಬ ಸಮೇತ ಪ್ರತಿಭಟನೆ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ವಿದ್ಯಾರ್ಥಿನಿಯರ ಹಾಸ್ಟೆಲ್ ಸೀಲಿಂಗ್ ಕುಸಿತ

ಪ್ರಜಾವಾಣಿ ವಾರ್ತೆ


ವಾಣಿ ವಿಲಾಸ ಆಸ್ಪತ್ರೆಯ ಆವರಣದಲ್ಲಿರುವ ಹಾಸ್ಟೆಲ್‌ನ ಸೀಲಿಂಗ್ ಸೋಮವಾರ ಬೆಳಿಗ್ಗೆ ಕುಸಿಯಿತು

ಬೆಂಗಳೂರು: ಇಲ್ಲಿನ ವಾಣಿ ವಿಲಾಸ ಆಸ್ಪತ್ರೆಯ ಆವರಣದಲ್ಲಿರುವ ಹಾಸ್ಟೆಲ್‌ನ ಸೀಲಿಂಗ್ ಸೋಮವಾರ ಬೆಳಿಗ್ಗೆ ಕುಸಿದಿದ್ದು, ಯಾವುದೇ ಅಪಾಯ ಸಂಭವಿಸಿಲ್ಲ.

ಯಾರೂ ಇಲ್ಲದಿರುವಾಗ ಈ ಘಟನೆ ನಡೆದಿದೆ. ಇದು ಹಳೇ ಕಟ್ಟಡವಾಗಿದ್ದು, ಸತತ ಮಳೆಯಿಂದ ಶಿಥಿಲವಾಗಿತ್ತು. ಈ ಹಾಸ್ಟೆಲ್‌ನಲ್ಲಿ ಮೆಡಿಕಲ್ ಕಾಲೇಜು ಹಾಗೂ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿನಿಯರು ನೆಲೆಸಿದ್ದರು.

ಬೆಳಿಗ್ಗೆಯೇ ಸೀಲಿಂಗ್ ಕುಸಿದಿದ್ದರೂ ಅದರ ಅವಶೇಷ ತೆರವು ಮಾಡಿಲ್ಲ ಎಂದು ವಿದ್ಯಾರ್ಥಿನಿಯರು ದೂರಿದ್ದಾರೆ. ಸೀಲಿಂಗ್ ಕುಸಿದಿದ್ದರಿಂದ ವಿದ್ಯಾರ್ಥಿನಿಯರು ಆತಂಕಗೊಂಡಿದ್ದಾರೆ.

ಪ್ರಜಾವಾಣಿ

ಮಂಗಳವಾರ, 18 ಅಕ್ಟೋಬರ್ 2022

ಕ್ಷೇಮ ಕುಶಲ

ತಪ್ಪೊಪ್ಪಿಗೆ ಎಂಬ ಅಪ್ಪುಗೆ

> ತಪ್ಪೊಪ್ಪಿಗೆಯ ಪಾಠ ಎಲ್ಲಿಂದ ಆರಂಭವಾಗಬೇಕು? ಮನೆಯೆ ಮೊದಲ ಪಾಠಶಾಲೆ. ಮಕ್ಕಳು ತಪ್ಪು ಮಾಡಿದಾಗ ಅವರು ಅದನ್ನು ಒಪ್ಪಿಕೊಳ್ಳುವಂತೆ ಸೂಚಿಸಬೇಕು.



ರಘು ವಿ.

ಜೀವನದ ನಡೆಯಲ್ಲಿ ಎಡವುವುದು ಸಹಜ. 'ನಡೆವರೆಡವದೆ ಕುಳಿತಿಹರೆಡುವವರೆ?'

ಆದರೆ ಹೀಗೆ ಎಡವಿದಾಗ, ಅದರಿಂದ ಮತ್ತೊಬ್ಬರಿಗೆ ತೊಂದರೆಯಾದಾಗ, ನೋವಾದಾಗ ಅದನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡು ಕ್ಷಮೆ ಕೇಳುವ ಅಭ್ಯಾಸವನ್ನು ಬೆಳೆಸಿಕೊಂಡರೆ ಬದುಕು ಮತ್ತಷ್ಟು ಸಹನೀಯವೂ ಸುಂದರವೂ ಆಗುತ್ತದೆ. ಮನೆ, ಕಚೇರಿ, ಬಂಧುವಲಯ, ಮಿತ್ರವಲಯ, ಸಾರ್ವಜನಿಕ ಕ್ಷೇತ್ರ – ಹೀಗೆ ಹತ್ತು ಹಲವೆಡೆ ಹಬ್ಬಿದ ಜೀವನಬಳ್ಳಿಯು ತೊಡಕಾಗದಂತೆ ಬೆಳೆಯಲು ಈ ಬಗೆಯ ತಪ್ಪೊಪ್ಪಿಗೆ ಬಹಳ ಮುಖ್ಯ. ಇದು ನಿಜ – ಎಂದು ತಲೆಯಾಡಿಸುವುದು ಸುಲಭ. ಆದರೆ ಹಾಗೆ ನಡೆದುಕೊಳ್ಳುವುದು ಬಹಳ ಕಷ್ಟ. ಕಷ್ಟ ಏಕೆಂದರೆ ನಮ್ಮೊಳಗಿರುವ ಅಹಂ 'ತಪ್ಪೊಪ್ಪಿಗೆಯೆ – ಏಕೆ? ನೋಡೋಣ, ಆಲೋಚಿಸೋಣ, ಮುಂದೆ ಕೇಳೋಣ' ಎಂಬಿತ್ಯಾದಿ ಕಾರಣಗಳನ್ನು ಒಡ್ಡಿ ಕೇಳದಂತೆ ಮಾಡಿಬಿಡುತ್ತದೆ. ಅದರಲ್ಲೂ ನಾವು ಹಿರಿಯರೊ, ಹಿರಿಯ ಹುದ್ದೆಯವರೊ ಆಗಿಬಿಟ್ಟರೆ ಕಿರಿಯರ ಕೆಳಗಿನವರ ಮೇಲೆ ನಾವು ನಡೆದುಕೊಂಡ ರೀತಿ ಸರಿಯಿಲ್ಲವೆಂದು ಮನಸ್ಸಾಕ್ಷಿ ಹೇಳಿದರೂ ವಯಸ್ಸಿನ, ಹುದ್ದೆಯ ಘನತೆಯಿಂದಾಗಿ ನಾವು ತಪ್ಪೊಪ್ಪಿಗೆಯನ್ನು ಸಲ್ಲಿಸುವುದೇ ಇಲ್ಲ. ಇದರಿಂದ ಎದುರಿನ ವ್ಯಕ್ತಿಗೆ ಹೆಚ್ಚು ನಷ್ಟವಾಗದಿದ್ದರೂ ನಮ್ಮ ಅಹಂಕಾರ ಬಲಿಯುವುದಂತೂ ದಿಟ. ಹೀಗೆ ಬಲಿತ ಅಹಂಕಾರ ಒಂದಲ್ಲ ಒಂದು ದಿನ ಬಲಿಯಾಗಲೇಬೇಕು; ಅದರೊಂದಿಗೆ ಅಂತಹ ವ್ಯಕ್ತಿಯೂ ಕುಗ್ಗಬೇಕು. ತಪ್ಪೊಪ್ಪಿಗೆಯಿಂದ ಯಾರೂ ಕುಬ್ಜರಾಗುವುದಿಲ್ಲ. ಅದು ಸಕಾಲದಲ್ಲಿ, ಸಕಾರಣವಾಗಿದ್ದುದಾದರೆ, ಎದುರಿನ ವ್ಯಕ್ತಿಗೆ ನಮ್ಮ ಬಗ್ಗೆ ಗೌರವ ಹೆಚ್ಚುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ.

ತಪ್ಪೊಪ್ಪಿಗೆಯ ಪಾಠ ಎಲ್ಲಿಂದ ಆರಂಭವಾಗಬೇಕು? ಮತ್ತೆಲ್ಲಿಂದ? ಮನೆಯೆ ಮೊದಲ ಪಾಠಶಾಲೆ. ಮಕ್ಕಳು ತಪ್ಪು ಮಾಡಿದಾಗ ಅವರು ಅದನ್ನು ಒಪ್ಪಿಕೊಳ್ಳುವಂತೆ ಸೂಚಿಸಬೇಕು. ಮುಖ್ಯವಾಗಿ ಮಕ್ಕಳು ಮನೆಯ ಹಿರಿಯರನ್ನು ಅನುಕರಿಸುತ್ತಾರೆ ಎಂಬುದು ವಾಸ್ತವ. ಮನೆಯ ಹಿರಿಯರು ಪರಸ್ಪರ ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ಗಮನಿಸುವ ಮಗು ತಾನೂ ಅದನ್ನೇ ಕಲಿಯುತ್ತದೆ. ದೈನಂದಿನ ಕಾರ್ಯಗಳಲ್ಲಿ ಮನೆಯ ಹಿರಿಯರ ನಡುವೆ ಸಂಘರ್ಷ ನಡೆದು ಕೊನೆಗೆ ತಪ್ಪು ಯಾರದೆಂದು ನಿರ್ಧಾರವಾದ ಬಳಿಕ ಹಾಗೆ ತಪ್ಪು ಎಸಗಿದವರು ಹೇಗೆ ತಪ್ಪೊಪ್ಪಿಗೆ ಮಾಡಿಕೊಳ್ಳುತ್ತಾರೆ ಎಂದು ಮಗು ಗಮನಿಸುತ್ತದೆ. ತಾನೂ ಅದನ್ನೇ ಕಲಿಯುತ್ತದೆ. ಮನೆಯ ತುಂಬೆಲ್ಲ ಅಹಂಕಾರ ವಿಲಾಸವೇ ನಡೆದಾಗ, ಮಗು ಕೂಡ ಅಹಂಕಾರದ ಮೂಟೆಯಾಗುತ್ತದೆ. ಹಾಗೆಯೇ ಸಣ್ಣಪುಟ್ಟದ್ದಕ್ಕೆಲ್ಲ ತಪ್ಪೊಪ್ಪಿಗೆ ಮಾಡಿಕೊಳ್ಳುವುದು ಕೂಡ ಸಲ್ಲದು. ಅದು ಮಗುವಿನ ಧೈರ್ಯವನ್ನು ಆತ್ಮವಿಶ್ವಾಸವನ್ನು ಕುಗ್ಗಿಸಿಬಿಡುತ್ತದೆ. ಯಾವಾಗ, ಎಷ್ಟರ ಮಟ್ಟಿಗೆ, ಯಾವ ಬಗೆಯಲ್ಲಿ ತಪ್ಪೊಪ್ಪಿಗೆ ಮಾಡಿಕೊಳ್ಳಬೇಕು ಎಂಬುದೂ ಒಂದು ಕಲೆ. ಅದನ್ನು ಗಮನಿಸಿ, ಅಭ್ಯಸಿಸಿ ಅಳವಡಿಸಿಕೊಳ್ಳಬೇಕು.

ಸಾಮಾನ್ಯವಾಗಿ ತಪ್ಪೊಪ್ಪಿಗೆಯ ಹೇಳಿಕೆ ಹೀಗಿರುತ್ತದೆ: 'ನನ್ನ ನಡೆ, ನುಡಿಗಳಿಂದ (ತಿಳಿದೋ ತಿಳಿಯದೆಯೋ ಎಸಗಿದ ಕಾರ್ಯದಿಂದ) ನಿಮಗೆ ನೋವಾಗಿದ್ದರೆ, ದಯವಿಟ್ಟು ಕ್ಷಮಿಸಿಬಿಡಿ.'

ಇದು ಅತ್ಯಂತ ಬಾಲಿಶವಾದ ವಾಕ್ಯ; ಬಹುತೇಕ ವಿದಾಯದ ಭಾಷಣಗಳಲ್ಲಿ ಇದನ್ನು ಕೇಳಿರುತ್ತೇವೆ. ಇದರರ್ಥ: 'ತಪ್ಪು ನನ್ನದಲ್ಲ. ಆದರೆ ನಿಮಗೆ ಹಾಗೆನಿಸಿರಬಹುದು, ಆದರೂ ನಿಮ್ಮ ಸಣ್ಣತನವನ್ನು ನಾನು ಗಣಿಸದೆ ನಾನೇ ಕ್ಷಮೆ ಕೋರಿ ನನ್ನ ಔದಾರ್ಯವನ್ನು ತೋರುತ್ತಿದ್ದೇನೆ.' ಇಂತಹ ತಪ್ಪೊಪ್ಪಿಗೆಯೇ ದೊಡ್ಡ ತಪ್ಪು. ಇದು ಬಿರುಕನ್ನು ಮುಚ್ಚುವ ಬದಲು ಮತ್ತಷ್ಟು ದೊಡ್ಡದಾಗಿಸುತ್ತದೆ. ಸಾರ್ವಜನಿಕ ತಪ್ಪುಗಳೆಸಗುವರ ಕಥೆ ಅಂತಿರಲಿ, ಸಾಮಾನ್ಯರಾದ ನಾವು ತಪ್ಪೆಸಗಿದಾಗ, ನೇರವಾಗಿ ಆ ವ್ಯಕ್ತಿಯ ಬಳಿಸಾರಿ, 'ನನ್ನ ಮಾತಿನಿಂದ, ನಡೆಯಿಂದ ನಿಮಗೆ ನೋವಾಯಿತೆ' – ಎಂದು ಕೇಳಿ, ಬಳಿಕ ಪ್ರಾಂಜಲ ಮನಸ್ಸಿನಿಂದ 'ತಪ್ಪಾಯಿತು, ಕ್ಷಮಿಸಿ' ಎನ್ನುವುದು ಸರಿಯಾದ ಕ್ರಮ. ಮುಂದೆ ಹೀಗಾಗದಂತೆ ನಡೆದುಕೊಂಡರೆ ಆ ವ್ಯಕ್ತಿಗೆ ನಮ್ಮ ಬಗೆಗಿನ ವಿಶ್ವಾಸ ಹೆಚ್ಚುತ್ತದೆ. ಹೀಗೆ ಮಾಡಲು ಬಹಳ ಧೈರ್ಯ ಬೇಕು. ಆದರೆ ಇದರಿಂದ ಮುಂದೆ ಬಹಳ ಪ್ರಯೋಜನವೂ ಉಂಟು. ಜಾನ್ ಮ್ಯಾಕ್ಸ್ ವೆಲ್, 'ಮನುಷ್ಯ ತಾನೆಸಗಿದ ತಪ್ಪನ್ನು ಒಪ್ಪಿಕೊಳ್ಳುವಷ್ಟು ದೊಡ್ಡವನೂ, ಅದರಿಂದ ತಿಳಿವಳಿಕೆ ಪಡೆದುಕೊಳ್ಳುವಷ್ಟು ಕುಶಲಿಯೂ ಮತ್ತು ಅದನ್ನು ತಿದ್ದಿಕೊಳ್ಳುವಷ್ಟು ಮನೋಬಲವುಳ್ಳವನೂ ಆಗಿರಬೇಕು' ಎನ್ನುತ್ತಾನೆ. ತಪ್ಪೊಪ್ಪಿಗೆ ಕೇವಲ ಬಾಯಿಮಾತಿನ ಹೇಳಿಕೆಯಾಗಿರಬಾರದು. ಅದು ಹೃದಯಕ್ಕೆ ತಟ್ಟುವಂತಿರಬೇಕು. ಅದರಲ್ಲಿ ಈ ಅಂಶಗಳು ಇರಬೇಕು:

ವಿಷಾದ: ತಪ್ಪೊಪ್ಪಿಗೆ ಪ್ರಾಮಾಣಿಕವಾಗಿದ್ದರೆ ಆ ಹೇಳಿಕೆಯಲ್ಲಿ ವಿಷಾದದ ದನಿ ಇರಬೇಕು. ಅಂದರೆ ತಾನು ಹೀಗೆ ಮಾಡಬಾರದಾಗಿತ್ತು ಎಂಬ ಭಾವ ಅಲ್ಲಿ ವ್ಯಕ್ತವಾಗಬೇಕು.

ತಪ್ಪಿನ ವಿವರಣೆ: ಬಹಳ ಸರಳವಾಗಿ ಏಕೆ ತಪ್ಪಾಯಿತೆಂದು ಹೇಳಬೇಕು. ಆದರೆ ಅದರ ಸಮಜಾಯಿಷಿಯೊ, ದೀರ್ಘವಾದ ಚರ್ವಣವೊ ಆಗಬಾರದು. ಬಹಳ ಬಾರಿ ತಪ್ಪುಗಳು ಯಾವುದೋ ಮತ್ತೊಂದು ತಪ್ಪು ಗ್ರಹಿಕೆಯ ಮೇಲೆ ಆಗಿರುತ್ತವೆ. ಅದನ್ನು ಗುರುತಿಸುವುದಷ್ಟೆ ಆಗಬೇಕು.



ತಪ್ಪಿನ ಜವಾಬ್ದಾರಿ ಹೊರುವುದು: ತಪ್ಪೆಸಗಿದ ಬಗ್ಗೆ ಬೇರೆಡೆಗೆ ಬೊಟ್ಟುಮಾಡದೆ, ಅದನ್ನು ಎಸಗಿದ ಪೂರ್ಣ ಜವಾಬ್ದಾರಿ ತನ್ನದೇ ಎಂದು ಗುರುತಿಸಿಕೊಳ್ಳಬೇಕು.

ಪಶ್ಚಾತ್ತಾಪವನ್ನು ವ್ಯಕ್ತಪಡಿಸುವುದು: ತಾನು ಮಾಡಿದ ತಪ್ಪಿನ ಬಗ್ಗೆ ಅರಿವನ್ನು ಹೊಂದುವುದು. ಅದರ ಪರಿಣಾಮವನ್ನು ಪೂರ್ಣಪ್ರಮಾಣದಲ್ಲಿ ಭಾವಿಸಿ ದುಃಖಿಸುವುದೇ ಪಶ್ಚಾತ್ತಾಪ. ತಪ್ಪೊಪ್ಪಿಗೆಯಲ್ಲಿ ಇದೂ ವ್ಯಕ್ತವಾಗಬೇಕು.

ತಪ್ಪಿನಿಂದಾದ ನಷ್ಟದ ಭರಿಸುವಿಕೆ: ತಪ್ಪಿನಿಂದಾದ ನಷ್ಟದ ಮೌಲ್ಯವನ್ನು ಹಣದ, ಸಮಯದ, ಪ್ರೀತಿಯ ಅಥವಾ ಇನ್ನಾವುದೇ ರೂಪದಲ್ಲಿ ಭರಿಸಲು ಸಾಧ್ಯವಾಗುವುದಾದರೆ ಹಾಗೆ ತುಂಬಿಕೊಡಬೇಕು.

ತಪ್ಪನ್ನು ಮರೆತುಬಿಡುವಂತೆ ಕೋರಿಕೆ: ನಡೆದುದುನ್ನು ಮರೆತುಬಿಡುವಂತೆ ಕೊನೆಯಲ್ಲಿ ಕೋರಬೇಕು. ಯಾವುದೇ ಕಾರಣಕ್ಕೂ ಇದು ಮೊದಲಿಗೆ ಬರಬಾರದು, ಕೊನೆಯಲ್ಲಿಯೇ ಇರಬೇಕು. ಏಕೆಂದರೆ ಮೊದಲಿಗೆ ಬರುವ ಎಲ್ಲ ಅಂಶಗಳು ಮನವರಿಕೆಯಾದ ಮೇಲೆ ಮಾತ್ರ ತಪ್ಪನ್ನು ಮರೆಯಲು ಸಾಧ್ಯ. ಈ ಕ್ರಮದಲ್ಲಿ ತಪ್ಪೊಪ್ಪಿಗೆ ನಡೆದಾಗ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಮೇಲಿನ ಆರು ಹೆಜ್ಜೆಗಳಲ್ಲಿ ಮೂರು ಮುಖ್ಯ ಅಂಶಗಳು ಅಡಕಗೊಂಡಿವೆ. ಮೊದಲನೆಯದು ತಪ್ಪಿನ ಜವಾಬ್ದಾರಿಯನ್ನು ಹೊರುವ ಧೈರ್ಯ, ಎರಡನೆಯದು ತಪ್ಪನ್ನು ಸರಿಪಡಿಸಿಕೊಳ್ಳುವ ಪ್ರಾಮಾಣಿಕತೆ, ಮೂರನೆಯದು ನಡೆದುದರ ಬಗ್ಗೆ ವಿಷಾದ, ಪಶ್ಚಾತ್ತಾಪ.

ನಾವು ತಪ್ಪೆಸಗಿದಾಗ ತಪ್ಪೊಪ್ಪಿಗೆ ಮಾಡಿಕೊಳ್ಳುವಂತೆ, ಇತರರೂ ನಮ್ಮ ವಿರುದ್ಧ ತಪ್ಪೆಸಗಿದಾಗ ಮಾಡಿಕೊಳ್ಳಬೇಕು ಎಂದು ಬಯಸುವುದು ಸರಿಯೆ. ಆದರೆ ಹಾಗಾಗದಿದ್ದರೆ? ಕುದಿಕುದಿದು ಪರಿತಪಿಸಿ ಮರುಗಬೇಕೆ? ಖಂಡಿತ ಇಲ್ಲ. ಆದರೆ ನಮ್ಮ ಘನತೆಗೆ ಕುಂದಾಗದಂತೆ ಪ್ರತಿರೋಧಿಸುವುದು ತಪ್ಪನ್ನು ತೋರಿಸಿಕೊಡುವುದು ಮಾಡಬೇಕು. ಇಷ್ಟಾಗಿಯೂ ತಪ್ಪೊಪ್ಪಿಗೆ ಬಾರದಿದ್ದಾಗ ಕಗ್ಗದ ಈ ಪದ್ಯವನ್ನು ನೆನಪಿಸಿಕೊಳ್ಳಬೇಕು: 'ಪ್ರೇಮಬೀಜಗಳಿಹವು ವೈರಬೀಜಗಳವೊಲೆ, ಸೌಮ್ಯಮುಂ ಸಂಕ್ಷೋಭೆಯಂತೆ ಪ್ರಕೃತಿಯಲಿ, ಭ್ರಾಮಕದ ಸೃಷ್ಟಿಯಾ ವಿಷಮಲಕ್ಷಣಗಳಲಿ, ಸಾಮರಸ್ಯವನರಸೊ – ಮಂಕುತಿಮ್ಮ'. ತಪ್ಪುಗಳು ನಡೆದಾಗಲೂ ಸಾಮರಸ್ಯವನ್ನು ಅರಸುವ ಸ್ವಭಾವ ನಮ್ಮದಾಗಬೇಕು. ಇದರಿಂದ ನಮ್ಮಿಂದ ಕಡಿಮೆ ತಪ್ಪುಗಳಾಗುತ್ತವೆ; ಜೊತೆಗೆ ಬೇರೆಯವರ ತಪ್ಪುಗಳನ್ನು ಧೇನಿಸುವ ದಾರಿ ದೂರಾಗುತ್ತದೆ.

ಗಿಬ್ರಾನ್, ಒಂದೆಡೆ ಹೇಳುತ್ತಾನೆ: 'ಹತಾಶನಾಗದಿರು ಮಿತ್ರ, ಪಂಚಭೂತಗಳಾಚೆ, ಎಲ್ಲದರಾಚೆ ಶಕ್ತಿಯೊಂದಿದೆ. ಅದು ನ್ಯಾಯ, ಕರುಣೆ, ಪ್ರೇಮ ಮತ್ತು ಸಹಾನುಭೂತಿಗಳಿಂದ ಕೂಡಿದೆ.'

ಈ ಜಗತ್ತಿನಲ್ಲಿ ಎಲ್ಲ ಪಯಣಿಗರೇ. ಎಡವಿದಾಗ, ತಡವಿಕೊಂಡಾಗ, ತಪ್ಪೆಸಗಿದಾಗ ಮೇಲಿನ ಉಕ್ತಿಗಳು ನೆನಪಾಗಲಿ. ತಪ್ಪುಗಳನ್ನು ಒಪ್ಪಿಕೊಳ್ಳುವ ಪ್ರಾಂಜಲ ಮನಸ್ಸು ನಮ್ಮದಾಗಲಿ. ತಪ್ಪೊಪ್ಪಿಗೆಯ ಆತ್ಮೀಯ ಅಪ್ಪುಗೆ ನಮ್ಮದಾಗಲಿ.



ರುಚಿಗೆ ತಕ್ಕಷ್ಟು ಉಪ್ಪು ತೂಕಕ್ಕೆ ತಕ್ಕಷ್ಟು ಔಷಧಿ

ಡಾ. ಕುಶ್ವಂತ್ ಕೋಳಿಬೈಲು

ದೇಹದೊಳಗೆ ವೈರಸ್, ಬ್ಯಾಕ್ಟೀರಿಯಾ ಅಥವಾ ಯಾವುದೇ ಸೂಕ್ಷ್ಮಾಣು ಜೀವಿಯ ಪ್ರವೇಶವಾದಲ್ಲಿ ದೇಹವು ತನ್ನ ತಾಪಮಾನವನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಪ್ರತಿಕ್ರಿಯೆ ನೀಡುತ್ತದೆ. ಇಂತಹ ಸಂದರ್ಭಗಳಲ್ಲಿ ಹೆತ್ತವರು ಆತಂಕಕ್ಕೆ ಒಳಗಾಗುತ್ತಾರೆ. ಮನೆಯಲ್ಲಿರುವ ಹಳೆಯ ಆ್ಯಂಟಿಬಯೋಟಿಕ್ ಔಷಧಿಯನ್ನು ಮಗುವಿಗೆ ಜ್ವರ ಬಂದ ತಕ್ಷಣ ನೀಡಿಬಿಡುತ್ತಾರೆ. ಮಗುವಿಗೆ ಬಂದಿರುವುದು ವೈರಲ್ ಜ್ವರವಾಗಿದ್ದಲ್ಲಿ, ಈ ಆ್ಯಂಟಿಬಯೋಟಿಕ್ ದೇಹವನ್ನು ಇನ್ನಷ್ಟು ನಿಸ್ತೇಜಗೊಳಿಸುತ್ತದೆ.

ದೇಹದೊಳಗಿನ ಸೋಂಕು ಬ್ಯಾಕ್ಟೀರಿಯಾದ ಕಾರಣದಿಂದ ಉಂಟಾಗಿದ್ದಲ್ಲಿ ಅದು ಯಾವ ಬ್ಯಾಕ್ಟೀರಿಯಾದ ಕಾರಣದಿಂದಾಗಿ ಉಂಟಾಗಿದೆ ಎಂದು ಅಂದಾಜಿಸುವುದು ಅತಿ ಮುಖ್ಯ. ಸಾಮಾನ್ಯವಾಗಿ ಗಂಟಲು, ಕಿವಿ, ಚರ್ಮ, ಶ್ವಾಸಕೋಶ, ಜಠರ, ಕಿಡ್ನಿ ಮತ್ತು ಮೂತ್ರಪಿಂಡಗಳು – ಹೀಗೆ ದೇಹದ ವಿವಿಧ ಅಂಗಾಂಗಗಳಲ್ಲಿ ವಿವಿಧ ಬ್ಯಾಕ್ಟೀರಿಯಾಗಳು ಸೋಂಕನ್ನು ಉಂಟುಮಾಡುತ್ತವೆ. ಹೊಟ್ಟೆಯ ಸೋಂಕಿಗೆ ಕಾರಣವಾದ ಬ್ಯಾಕ್ಟೀರಿಯಾದ ವಿರುದ್ಧ ಬಳಸುವ ಆ್ಯಂಟಿಬಯೋಟಿಕ್‌ಗೆ ಗಂಟಲು ಮತ್ತು ಶ್ವಾಸಕೋಶದಲ್ಲಿ ಸೋಂಕನ್ನು ಉಂಟುಮಾಡುವ ಬ್ಯಾಕ್ಟೀರಿಯಾಗಳನ್ನು ನಿಗ್ರಹಿಸುವ ಶಕ್ತಿಯಿರುವುದಿಲ್ಲ. ಇನ್ನೂ ಸೋಜಿಗದ ಸಂಗತಿಯೆಂದರೆ, ಆರು ತಿಂಗಳಿನ ಮಗುವಿನಲ್ಲಿ ಗಂಟಲು ಮತ್ತು ಶ್ವಾಸಕೋಶದ ಸೋಂಕನ್ನು ಉಂಟುಮಾಡುವ ಬ್ಯಾಕ್ಟೀರಿಯಾಗಳು ಮತ್ತು ಐದು ವರ್ಷಕ್ಕೆ ಮೇಲ್ಪಟ್ಟ ಮಕ್ಕಳಲ್ಲಿ ಗಂಟಲಿನ ಮತ್ತು ಶ್ವಾಸಕೋಶದ ಸೋಂಕನ್ನು ಉಂಟುಮಾಡುವ ಬ್ಯಾಕ್ಟೀರಿಯಾಗಳು ಬೇರೆ ಬೇರೆ. ಅವುಗಳ ನಿವಾರಣೆಗಾಗಿ ಬಳಸಬೇಕಿರುವ ಆ್ಯಂಟಿಬಯೋಟಿಕ್ ಕೂಡ ವಿಭಿನ್ನ! ಹೀಗಾಗಿ ವಿವಿಧ ವಯಸ್ಸಿನ ಮಕ್ಕಳಲ್ಲಿ ಅವರ ಸೋಂಕಿಗೆ ಅನುಗುಣವಾಗಿ ವಿವಿಧ ಬಗೆಯ ಆ್ಯಂಟಿಬಯೋಟಿಕ್‌ಗಳನ್ನು ಬಳಸಬೇಕಾಗಿ ಬರುತ್ತದೆ. ಎಲ್ಲ ಲಸಿಕೆಗಳನ್ನು ಪಡೆದಿರುವ ಮಕ್ಕಳಲ್ಲಿ ಮತ್ತು ಲಸಿಕೆಗಳನ್ನು ಸಮರ್ಪಕವಾಗಿ ಪಡೆಯದಿರುವ ಮಕ್ಕಳಲ್ಲಿ ಸೋಂಕು ಉಂಟುಮಾಡುವ ರೋಗಾಣುಗಳು ಕೂಡ ಬೇರೆ ಬೇರೆಯಾಗಿರುತ್ತವೆ. ಸೋಂಕು ಉಂಟುಮಾಡಿರುವ ಬ್ಯಾಕ್ಟೀರಿಯಾವನ್ನು ಸರಿಯಾಗಿ ಗ್ರಹಿಸದೆ ಯಾವುದೋ ಆ್ಯಂಟಿಬಯೋಟಿಕನ್ನು ದೇಹಕ್ಕೆ ನೀಡುವುದು ಗಾಳಿಯಲ್ಲಿ ಹಾರಿಸಿದ ಗುಂಡಿನಷ್ಟೇ ನಿಷ್ಪ್ರಯೋಜಕ.



ಯಾವ ವಯಸ್ಸಿನ ಮಗುವಿನ, ಯಾವ ಅಂಗಾಂಗದ ಬ್ಯಾಕ್ಟೀರಿಯಾ ಸೋಂಕಿಗೆ, ಯಾವ ಆ್ಯಂಟಿಬಯೋಟಿಕನ್ನು ಎಷ್ಟು ಸಮಯದ ಕಾಲ ನೀಡಬೇಕು ಎಂಬ ವಿಷಯದಲ್ಲಿ ಸರಿಯಾದ ನಿರ್ಧಾರಗಳನ್ನು ತಜ್ಞವೈದ್ಯರು ಮಾತ್ರವೇ ತೆಗೆದುಕೊಳ್ಳಬಲ್ಲರು. ಮಗುವಿನ ಅರೋಗ್ಯ ಮತ್ತು ಅಂಗಾಂಗಗಳ ಸ್ಥಿತಿಗತಿಯ ಆಧಾರದಲ್ಲಿ ಆ್ಯಂಟಿಬಯೋಟಿಕನ್ನು ಸಿರಪ್ಪಿನ ಮೂಲಕ ನೀಡುವ ಅಥವಾ ಸೋಂಕು ದೇಹದ ಇತರ ಅಂಗಾಂಗಗಳನ್ನು ವ್ಯಾಪಿಸುವ ಲಕ್ಷಣಗಳಿದ್ದಲ್ಲಿ ಚುಚ್ಚುಮದ್ದಿನ ಮೂಲಕ ನೀಡುವ ಬಗ್ಗೆಯೂ ತಜ್ಞವೈದ್ಯರ ಅಭಿಪ್ರಾಯ ಕೇಳುವುದು ಉತ್ತಮ. ಕೆಲವು ಸೋಂಕುಗಳು ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾದರೆ, ಡೆಂಗಿ ಮತ್ತು ಮಲೇರಿಯಾದಂತಹ ಕಾಯಿಲೆಗಳು ವರ್ಷದ ಕೆಲವು ತಿಂಗಳುಗಳಿಗೆ ಮಾತ್ರ ಸೀಮಿತವಾಗುತ್ತವೆ. ದೇಹದೊಳಗೆ ಯಾವುದೇ ಸೂಕ್ಷ್ಮಾಣು ಜೀವಿಗಳ ಸೋಂಕು ಇಲ್ಲದಿರುವ ಕೀಲುಗಳ ಅಥವಾ ಸ್ನಾಯುಗಳ ಉರಿಯೂತದ ಕಾಯಿಲೆಗಳಲ್ಲಿಯೂ ಜ್ವರ ಕಾಣಿಸಿಕೊಳ್ಳುತ್ತದೆ. ಈ ಕಾರಣಗಳಿಂದ ವೈದ್ಯರ ಸಲಹೆಯನ್ನು ಪಡೆಯದೆ ಮೆಡಿಕಲ್ ಸ್ಟೋರ್‌ಗಳಿಂದ ಔಷಧಿಗಳನ್ನು ತಂದು ಮಗುವಿಗೆ ಕುಡಿಸುವುದು ಅಪಾಯಕಾರಿ.

ಗಂಟಲಿನ ತುರಿಕೆಯಿಂದ ಉಂಟಾಗುವ ಕೆಮ್ಮು ಮತ್ತು ಶ್ವಾಸಕೋಶದ ಸೋಂಕಿನಿಂದ ಉಂಟಾಗುವ ಕೆಮ್ಮು ಬೇರೆ ಬೇರೆ. ಆಸ್ತಮಾದಂತಹ ಕಾಯಿಲೆಗಳಲ್ಲಿ ಶ್ವಾಸಕೋಶದ ನಾಳಗಳು ಸಂಕುಚಿತವಾಗುವುದರಿಂದ ಉಂಟಾಗುವ ಕೆಮ್ಮು ಕೂಡ ವಿಭಿನ್ನವಾದದ್ದು. ಮಾರ್ಕೆಟ್ಟಿನಲ್ಲಿ ನೂರಾರು ಬಗೆಯ ಕಾಫ್ ಸಿರಪ್‌ಗಳು ಲಭ್ಯವಿದ್ದರೂ ಕೆಮ್ಮು ಉತ್ಪಾದನೆಯಾಗುವ ಹಿಂದಿರುವ ಕಾರಣಗಳ ಆಧಾರದಲ್ಲಿ ಔಷಧಿಯನ್ನು ಆಯ್ಕೆ ಮಾಡಬೇಕಾಗುತ್ತದೆ. ಟಿ.ವಿ ಜಾಹೀರಾತುಗಳನ್ನು ನೋಡಿ ಕೆಮ್ಮನ್ನು ಶಮನ ಮಾಡುವ ಔಷಧಿಗಳನ್ನು ಕೊಳ್ಳುವುದು ಸಮಂಜಸವಲ್ಲ.

ಸಾಮಾನ್ಯವಾದ ಜ್ವರ ಮತ್ತು ಶೀತಕ್ಕೆ ಬಳಸುವ ಔಷಧಿಗಳನ್ನು ದೊಡ್ಡವರು 'ಓವರ್ ದ ಕೌಂಟರ್' ಪಡೆದು ಸೇವಿಸುತ್ತಾರೆ. ಕೊರೊನಾ ಸಮಯದಲ್ಲಿ ಜ್ವರ ಮತ್ತು ತಲೆನೋವಿಗಾಗಿ ಪ್ಯಾರಾಸಿಟಮಾಲ್ ಗುಳಿಗೆಗಳನ್ನು ದೇಶದಾದ್ಯಂತ ಜನರು ನುಂಗಿದ್ದಾರೆ. ಜನರು ಸಾಮಾನ್ಯವಾಗಿ ಬಳಸುವ ಇಂತಹ ಔಷಧಿಗಳ ಜಾಹೀರಾತುಗಳು ಟಿ.ವಿಯಲ್ಲಿಯೂ ಬರುವುದರಿಂದ ಎಲ್ಲರ ಬಾಯಲ್ಲಿಯೂ ಇಂತಹ ಔಷಧಿಗಳ ಬ್ರಾಂಡಿನ ಹೆಸರು ಓಡಾಡುತ್ತಿದೆ. ಆದರೆ ಮಕ್ಕಳ ವಿಚಾರದಲ್ಲಿ ಈ ಮಾದರಿಯ ನಡವಳಿಕೆಗಳು ಅನೇಕ ಹಸುಗೂಸುಗಳ ಲಿವರ್ ಮತ್ತು ಮೂತ್ರಪಿಂಡಕ್ಕೆ ಹಾನಿಯುಂಟುಮಾಡಿದ ನಿದರ್ಶನಗಳಿವೆ. ಮಗುವಿನ ತೂಕದ ಆಧಾರದಲ್ಲಿ ಮಗುವಿನ ದೇಹಕ್ಕೆ ಬೇಕಾದ ಔಷಧಿಯ ಪ್ರಮಾಣವು ನಿಗದಿಯಾಗಿರುವುದರಿಂದ ಕಡಿಮೆ ಪ್ರಮಾಣದ ಔಷಧಿಯನ್ನು ಸೇವಿಸಿದರೆ ರೋಗಲಕ್ಷಣಗಳು ಶಮನವಾಗುವುದಿಲ್ಲ. ಆಕಸ್ಮಿಕವಾಗಿ ಹೆಚ್ಚು ಪ್ರಮಾಣದ ಔಷಧಿಗಳು ದೇಹದೊಳಗೆ ಹೋದರೆ ಅಂಗಾಂಗ ವೈಫಲ್ಯವಾಗುವ ಸಾಧ್ಯತೆಯಿರುತ್ತದೆ.

ಔಷಧಿಯನ್ನು ಮಗುವಿನ ತೂಕದ ಆಧಾರದಲ್ಲಿ ನೀಡುವಾಗ ಹೆತ್ತವರು ಎರಡು ಅಲಗಿನ ಕತ್ತಿಯ ಮೇಲೆ ನಡೆಯುವಷ್ಟೇ ಜಾಗರೂಕರಾಗಿರಬೇಕು. ಉದಾಹರಣೆಗೆ, ಇಂದು ಪ್ಯಾರಾಸಿಟಮಾಲ್ ಮಾದರಿಯ ಔಷಧಿಗಳನ್ನು ವಿವಿಧ ಕಂಪನಿಗಳು ವಿವಿಧ ಸಾಂದ್ರತೆಯಲ್ಲಿ ಮಾರುಕಟ್ಟೆಗೆ ಬಿಡುತ್ತಿವೆ. ಮಗುವಿನ ತೂಕದ ಆಧಾರದಲ್ಲಿ ವೈದ್ಯರು ನಿಗದಿಪಡಿಸಿರುವ ಸಾಂದ್ರತೆಯ ಸಿರಪ್ ತಮ್ಮಲ್ಲಿ ಇದೆಯೆ ಎಂಬುದನ್ನು ಮೊದಲು ಪೋಷಕರು ಖಚಿತ ಪಡಿಸಿಕೊಳ್ಳಬೇಕು. ಬಾಟಲಿಯಲ್ಲಿರುವ ಔಷಧಿಯ ಸಾಂದ್ರತೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಯಾವುದೋ ಬ್ರಾಂಡಿನ ಪ್ಯಾರಾಸಿಟಮಾಲ್ ಸಿರಪ್ಪನ್ನು ಇಷ್ಟ ಬಂದಷ್ಟು ಮಿಲಿಲೀಟರನ್ನು ಮಗುವಿಗೆ ಕುಡಿಸಿದರೆ ಅಪಾಯಗಳು ಕಟ್ಟಿಟ್ಟ ಬುತ್ತಿ.

ಚಿಕ್ಕ ಮಕ್ಕಳಿಗೆ ಊಟ ಮಾಡಿಸುವಾಗ ಶ್ರಮ–ತಾಳ್ಮೆಗಳು ಅಗತ್ಯ. ಇಷ್ಟೇ ತಾಳ್ಮೆ–ಶ್ರಮಗಳು ಮಕ್ಕಳಿಗೆ ಸರಿಯಾದ ಪ್ರಮಾಣದ ಔಷಧಿಯನ್ನು ನೀಡುವಾಗಲೂ ಬೇಕಾಗುತ್ತದೆ. ಅಹಾರದಲ್ಲಿ ಒಂದೆರಡು ತುತ್ತು ಹೆಚ್ಚು ಕಡಿಮೆಯಾದರೂ ದೇಹಕ್ಕೆ ಸಮಸ್ಯೆಗಳಾಗದು. ಆದರೆ ಔಷಧಿಯ ವಿಚಾರದಲ್ಲಿ ಸ್ಪಷ್ಟತೆ ಮತ್ತು ನಿಖರತೆ ಅತ್ಯಗತ್ಯ.

❖



ಆ್ಯಂಟಿಬಯೋಟಿಕ್ ಬಳಕೆಗೆ ಬೇಕು ವಿವೇಕದ ಔಷಧಿ

ಡಾ. ಕವಿತಾ ಸದಾಶಿವ

ಎರಡು ವಾರಗಳ ಹಿಂದೆ ಭುಜದ ಮೇಲಿನ ಗಡ್ಡೆಯ ಸೂಜಿಪರೀಕ್ಷೆಗಾಗಿ ಬಂದ 25 ವರ್ಷದ ಫೈನಾನ್ಸ್ ಕಂಪನಿಯ ಉದ್ಯೋಗಿಯೊಬ್ಬರು 'ಡಾಕ್ಟರೇ, ಪೆನ್ಸಿಲಿನ್ ಇಂಜೆಕ್ಷನ್ ತೆಗೆದುಕೊಂಡರೂ ಗಡ್ಡೆ ಕರಗಲಿಲ್ಲ...' ಎಂದು ಹೇಳಿದರು.

ಈ 'ಪೆನ್ಸಿಲಿನ್' ಹೆಸರು ನನ್ನನ್ನು ಸುಮಾರು ಎರಡು-ಮೂರು ದಶಕಗಳ ಹಿಂದೆ ಕರೆದೊಯ್ಯಿತು. ಮೈ-ಕೈ ನೋವಿನಿಂದ ಹಿಡಿದು ಕೆಮ್ಮು-ಶೀತ–ಗಾಯಗಳ ವರೆಗೆ – ಹೀಗೆ ಸರ್ವರೋಗಗಳಿಗೂ ಅಂದು ಪೆನ್ಸಿಲಿನ್ ಇಂಜೆಕ್ಷನ್ ಎಂಬ ಆ್ಯಂಟಿಬಯೋಟಿಕ್ ರಾಮಬಾಣವಾಗಿತ್ತು. 'ಪೆನ್ಸಿಲಿನ್' ಹೆಸರನ್ನು ಕೇಳಿದ ನನಗೆ ಆ್ಯಂಟಿಬಯೋಟಿಕ್ಸ್ ಬಳಕೆಯ ಮೇಲೆ ಪುನಃ ಬೆಳಕು ಚೆಲ್ಲಬೇಕೆನಿಸಿತು.

ಸುಪ್ರಸಿದ್ಧ ವೈದ್ಯಕೀಯ ನಿಯತಕಾಲಿಕೆ 'ಲ್ಯಾನ್ಸೆಟ್'ನಲ್ಲಿ, ಭಾರತೀಯರು 'ಅಜಿಥ್ರೋಮೈಸಿನ್' ಎಂಬ ಆ್ಯಂಟಿಬಯೋಟಿಕ್‌ಗಳನ್ನು ಹೆಚ್ಚು ಬಳಸುತ್ತಿದ್ದಾರೆ ಎಂಬ ಒಂದು ಸಂಶೋಧನಾ ವರದಿ ಇತ್ತೀಚೆಗೆ ಪ್ರಕಟವಾಗಿ ಬಾರಿ ಸುದ್ದಿಯನ್ನು ಮಾಡತೊಡಗಿತು. ಭಾರತೀಯರ ನಡವಳಿಕೆ ಮತ್ತು ವೈದ್ಯಕೀಯ ವ್ಯವಸ್ಥೆಗಳನ್ನು ಮಾತ್ರ ಮೂದಲಿಸುವುದು ಖೇದನೀಯ. ಏಕೆಂದರೆ ಆ್ಯಂಟಿಬಯೋಟಿಕ್‌ಗಳ ದುರುಪಯೋಗ ಜಾಗತಿಕ ಸಮಸ್ಯೆ.

ವೈದ್ಯಕೀಯ ವಿಜ್ಞಾನದಲ್ಲಿ 'ಪ್ರಾಣರಕ್ಷಕ'ಗಳೆಂದೇ ಹೆಸರಾದ ಆ್ಯಂಟಿಬಯೋಟಿಕ್ಸ್, ಸೋಂಕುಕಾರಕ ಸೂಕ್ಷ್ಮಾಣು ಜೀವಿಗಳಲ್ಲಿ ಒಂದಾದ ಬ್ಯಾಕ್ಟೀರಿಯಾಗಳನ್ನು ಮಾತ್ರ ಕೊಲ್ಲುವ, ಇಲ್ಲವೆ ಅವುಗಳ ಬಲವನ್ನು ಕುಂಠಿತಗೊಳಿಸುವ ಔಷಧಿಗಳು. ಅನೇಕ ಸಾಮಾನ್ಯ ಸೋಂಕುಗಳಿಗೆ ಕಾರಣವಾದ ವೈರಾಣುಗಳ ಮೇಲೆ ಅದು ಕಾರ್ಯ ನಿರ್ವಹಿಸುವುದಿಲ್ಲ. 1928ರಿಂದ ಪೆನ್ಸಿಲಿನ್ ಆವಿಷ್ಕಾರದೊಟ್ಟಿಗೆ ಶುರುವಾಯಿತು ಆ್ಯಂಟಿಬಯೋಟಿಕ್ಸ್‌ನ ಬಳಕೆ. ಕೊರೋನಾ ಸಮಯದಲ್ಲಿ ನಿರ್ಮಿತವಾದ ಗೊಂದಲ ಮತ್ತು ಭಯದ ವಾತಾವರಣದಲ್ಲಿ ಯಾವುದೇ ನಿರ್ದಿಷ್ಟ ಮಾರ್ಗಸೂಚಿಗಳಿಲ್ಲದೆ, ಭಾರತದಲ್ಲಿ ಮಾತ್ರವಲ್ಲದೇ ಜಗತ್ತಿನಾದ್ಯಂತ ಆ್ಯಂಟಿಬಯೋಟಿಕ್‌ಗಳ ಬಳಕೆ ಇತಿ-ಮಿತಿಯನ್ನು ಮೀರಿತೆನ್ನುವುದು ದಿಟ. ಆ್ಯಂಟಿಬಯೋಟಿಕ್‌ಗಳ ಬಳಕೆಯು ವೈದ್ಯಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೇ, ಪಶುಚಿಕಿತ್ಸೆಯಲ್ಲಿ, ಆಹಾರೋದ್ಯಮಗಳಲ್ಲಿ, ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ಯಾವುದೇ ನಿಯಮಗಳಿಲ್ಲದೇ ಬಳಕೆಯಾಗುತ್ತಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಇಂದು ಜಗತ್ತಿನಾದ್ಯಂತ ಆ್ಯಂಟಿಬಯೋಟಿಕ್‌ಗಳ ದುರುಪಯೋಗ - ಅತಿಯಾದ ಬಳಕೆ ಮತ್ತು ದುರ್ಬಳಕೆಗಳು, ಒಂದು ವಿಷಮ ಹಂತವನ್ನು ತಲುಪಿದೆ; ವೈದ್ಯಲೋಕಕ್ಕೆ ಒಂದು ಪ್ರಮುಖ ಆರೋಗ್ಯ ಸವಾಲಾಗಿ ಪರಿಣಮಿಸಿದೆ. ಅದರ ದುಷ್ಪರಿಣಾಮಗಳು ಹೀಗೆ ಪಟ್ಟಿಮಾಡಬಹುದು:

1. ಇಂದು ಸಾಮಾನ್ಯ ರೋಗಗಳ ಚಿಕಿತ್ಸೆಯೂ ದುರ್ಲಭವಾಗುತ್ತಿದೆ.

2. ಬಳಕೆದಾರರಲ್ಲಿ ಸುಸ್ತು, ಕೂದಲು ಉದುರುವಿಕೆ, ವಾಕರಿಕೆ, ಕಿಡ್ನಿವೈಫಲ್ಯದಂತಹ ಅನೇಕ ಅಡ್ಡಪರಿಣಾಮಗಳು ಕಾಣಿಸಿಕೊಳ್ಳುತ್ತಿವೆ. ಹಣ, ಔಷಧಿ, ಮಾನವ ಸಂಪನ್ಮೂಲಗಳು ನಿರರ್ಥಕವಾಗುತ್ತಿವೆ.

3. ವಿಪರೀತ ಬಳಕೆಯಿಂದಾಗಿ ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧವನ್ನು ಹೊಂದಿರುವ 'ಸೂಪರ್ ಬಗ್'ಗಳು ಅಸ್ತಿತ್ವಕ್ಕೆ ಬಂದಿವೆ. ಬಳಕೆಯಲ್ಲಿರುವ ಆ್ಯಂಟಿಬಯೋಟಿಕ್‌ಗಳು ನಿರುಪಯುಕ್ತವಾಗುತ್ತಿವೆ: ಈ ಸೂಪರ್ ಬಗ್‌ಗಳು ತೀವ್ರವಾದ ರೋಗಗಳಿಗೆ ಕಾರಣವಾಗಿ, ಸಾವಿನ ಪ್ರಮಾಣವನ್ನು ಹೆಚ್ಚಿಸುತ್ತಿವೆ. ಹೊಸ ಆ್ಯಂಟಿಬಯೋಟಿಕ್‌ಗಳ ಸಂಶೋಧನೆ–ಉತ್ಪಾದನೆಗಳು ಸ್ಥಗಿತಗೊಂಡಿದ್ದು, ಪರ್ಯಾಯ ಮದ್ದು ಇಲ್ಲದಂತಾಗಿದೆ.

ಪರಿಸ್ಥಿತಿ ಹೀಗೆ ಮುಂದುವರಿದಲ್ಲಿ 20-30 ವರ್ಷಗಳಲ್ಲಿ ಇದು ವಿಪರೀತ ಸ್ಥಿತಿ ತಲುಪಿ , ಜನರು ಸಂಕಷ್ಟಕ್ಕೀಡಾಗುವ ಸಾಧ್ಯತೆಯಿದೆ.

ಈ ಬಹುರೂಪಿ ಸಮಸ್ಯೆಗಳಿಗೆ ಪರಿಹಾರವೂ ಸಂಕೀರ್ಣವಾಗಿದೆ; ಅನೇಕ ಹಂತಗಳಲ್ಲಿ ಪ್ರಯತ್ನಿಸಬೇಕಾಗಿದೆ:

1. ಸರ್ಕಾರ ಆ್ಯಂಟಿಬಯೋಟಿಕ್‌ಗಳ ಬಳಕೆಯ ಮೇಲೆ ನಿಯಂತ್ರಣ ಬಲಪಡಿಸಬೇಕು; ಎಲ್ಲಾ ಪಾಲುದಾರರನ್ನೂ ಇದರಲ್ಲಿ ಒಳಗೊಳಿಸಬೇಕು.
2. ವಿಜ್ಞಾನಿಗಳು ಉತ್ತಮ ಪರ್ಯಾಯವನ್ನು ಅಭಿವೃದ್ಧಿಪಡಿಸಬೇಕು.
3. ಆ್ಯಂಟಿಬಯೋಟಿಕ್ ಔಷಧತ್ಯಾಜ್ಯಗಳನ್ನು ಸೂಕ್ತವಾಗಿ ವಿಲೇವಾರಿ ಮಾಡಬೇಕು.
4. ಜನಸಾಮಾನ್ಯರ, ಆರೋಗ್ಯ ಸಿಬ್ಬಂದಿಗಳ ಅರಿವಿನ ಮಟ್ಟವನ್ನು ಹೆಚ್ಚಿಸುವಂಥ ಕಾರ್ಯಕ್ರಮಗಳನ್ನು ರೂಪಿಸಬೇಕು.



ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ನಮ್ಮ ಪಾತ್ರ ಹೀಗಿರಲಿ:

ತಪ್ಪು/ದುರ್ಬಳಕೆಯ ಅಭ್ಯಾಸಗಳು

- ತುಂಬಾ ಸ್ಟ್ರಾಂಗ್ ಎಂದೋ, ಇಲ್ಲವೆ ದುಬಾರಿ ಎಂದೋ; ನಿರ್ದಿಷ್ಟ ಪ್ರಮಾಣದಲ್ಲಿ ವೈದ್ಯರು ಸೂಚಿಸಿದಂತೆ ಆ್ಯಂಟಿಬಯೋಟಿಕ್‌ಗಳನ್ನು ಸೇವಿಸದೇ ಇರುವುದು.
- ಕಾಯಿಲೆ ವಾಸಿಯಾಯಿತೆಂದು ಅರ್ಧದಲ್ಲಿ ಚಿಕಿತ್ಸೆಯನ್ನು ನಿಲ್ಲಿಸುವುದು.
- ವೈದ್ಯರ ಸೂಚನೆಯಿಲ್ಲದೆ, ನಾವೇ ನೇರವಾಗಿ ಆ್ಯಂಟಿಬಯೋಟಿಕ್‌ಗಳನ್ನು ಸೇವಿಸುವುದು.
- ಹಿಂದೆ ಎಂದೋ ನೀಡಿದ್ದ ಆ್ಯಂಟಿಬಯೋಟಿಕ್ ಅನ್ನು ಪ್ರಸ್ತುತ ಸೋಂಕಿನ ಸಮಸ್ಯೆಗೂ ಬಳಸುವುದು.
- ನಮಗೆ ಫಲಕಾರಿಯಾಗಿದೆಯೆಂಬ ಕಾರಣಕ್ಕಾಗಿ ಸ್ನೇಹಿತರಿಗೆ, ಬಂಧುಗಳಿಗೆ ಅದೇ ಔಷಧಿಯನ್ನು ನೀಡುವುದು.

ಬದಲಾವಣೆಗಳು ಹೀಗಿರಲಿ:

ಸೋಂಕಿಗೆ ತಕ್ಕುದಾದ ಆ್ಯಂಟಿಬಯೋಟಿಕ್‌ಗಳನ್ನು ನಿಯಮಿತ ಪ್ರಮಾಣದಲ್ಲಿ, ಸರಿಯಾದ ಅವಧಿಗೆ ಮತ್ತು ಸರಿಯಾದ ಆವರ್ತನದಲ್ಲಿ ಶಿಸ್ತುಬದ್ಧವಾಗಿ ಬಳಕೆ ಮಾಡಿ.

ಸ್ವಚಿಕಿತ್ಸೆಯ ಅಭ್ಯಾಸಗಳು

- ಶೇ 80ರಷ್ಟು ಪೋಷಕರು, ಅನಾರೋಗ್ಯಕ್ಕೆ ಒಳಗಾದ ತಮ್ಮ ಮುದ್ದು ಕಂದಮ್ಮಗಳಿಗೆ ವೈದ್ಯರನ್ನು ಸಂಪರ್ಕಿಸದೆ ತಾವೇ ಸ್ವಯಂ ಆಗಿ ಆ್ಯಂಟಿಬಯೋಟಿಕ್‌ಗಳನ್ನು ನೀಡುವುದು; ಇಲ್ಲವೆ ಆ್ಯಂಟಿಬಯೋಟಿಕ್ ಔಷಧಿ ನೀಡುವಂತೆ ವೈದ್ಯರನ್ನು ಪೀಡಿಸುವುದು
- ಮಕ್ಕಳಲ್ಲಿ ಶೇ 90ರಷ್ಟು ಸೋಂಕುಗಳು ವೈರಸ್ ಆಗಿದ್ದರೂ ಕೆಲವು ಪೋಷಕರು ಮಕ್ಕಳತಜ್ಞರ ಅಭಿಪ್ರಾಯವನ್ನು ಒಪ್ಪಿಕೊಳ್ಳದಿರುವುದು.
- ವಯಸ್ಕರು ವೈದ್ಯಕೀಯ ಸಲಹೆಗಳಿಲ್ಲದೆ ಆ್ಯಂಟಿಬಯೋಟಿಕ್‌ಗಳನ್ನು ಸೇವಿಸುವುದು.
- ವೈದ್ಯಕೀಯ ಪರಿಹಾರಗಳನ್ನು ಗೂಗಲ್ ಮಾಡಿ ಪಡೆದುಕೊಳ್ಳುವುದು.

ಬದಲಾವಣೆ ಹೀಗಿರಲಿ:

- ವೈದ್ಯರು ಸೂಚಿಸಿದ ಸೂಕ್ತ ಪರೀಕ್ಷೆಗಳಿಗೆ ಒಳಪಡಬೇಕು; ವೈದ್ಯರ ಸಲಹೆಯಿಲ್ಲದೆ ಎಂದಿಗೂ ಆ್ಯಂಟಿಬಯೋಟಿಕ್‌ಗಳನ್ನು ಬಳಸಬಾರದು.
- ರೋಗನಿರೋಧಕ ಶಕ್ತಿಯನ್ನು ಸಾತ್ವಿಕ ಆಹಾರಸೇವನೆ, ಯೋಗ, ವ್ಯಾಯಾಮ, ಧ್ಯಾನ, ಸದ್ವಿಚಾರ , ಧನಾತ್ಮಕ ಚಿಂತನೆಗಳಿಂದ ವೃದ್ಧಿಸಿಕೊಳ್ಳಬೇಕು.

ಕೋವಿಡ್ ಸಮಯದಲ್ಲಿ ಪಾಲಿಸಿದಂತಹ ಸ್ವಚ್ಛತೆಯ ನಿಯಮಗಳಾದ ಕೈ ತೊಳೆಯುವುದು, ಮುಖ ಮುಚ್ಚಿ ಸೀನುವುದು /ಕೆಮ್ಮುವುದು, ರಸ್ತೆಗಳಲ್ಲಿ ಉಗುಳದಿರುವುದು – ಇಂಥ ಅಭ್ಯಾಸಗಳನ್ನು ಮುಂದುವರಿಸಬೇಕು.

- ಅಗತ್ಯವಿದ್ದಲ್ಲಿ ಲಸಿಕೆಗಳನ್ನು ಪಡೆಯಬೇಕು.
- ಪ್ರಥಮ ಚಿಕಿತ್ಸೆಯ ಬಗ್ಗೆ ಅರಿವನ್ನು ಸಂಪಾದಿಸಬೇಕು.
- ಸೂಕ್ತ ತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಛ ಪರಿಸರ ನಿರ್ಮಾಣದತ್ತ ಎಲ್ಲರೂ ಶ್ರಮಿಸಬೇಕು.

❖

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಇನ್ನಷ್ಟು ಪ್ರತಿಕ್ರಿಯೆಗಳನ್ನು prajavani.net ನಲ್ಲಿ ಓದಬಹುದು...


ದೇವರಪಟ ನೋಡಿದ ಮೇಲೆ ಪ್ರಜಾವಾಣಿಯತ್ತ...



ಜೂನಿಯರ್ ಹಂತದ ಕ್ರಿಕೆಟ್ ಆಡುವಾಗಲೇ ಪ್ರಜಾವಾಣಿ ನಂಟು ಬೆಳೆಯಿತು. ಪತ್ರಿಕೆಯ ಬಳಗದಲ್ಲಿದ್ದ ಚಂದ್ರಮೌಳಿ ಎಂಬುವವರೂ ನಮ್ಮೊಂದಿಗೆ ಕ್ರಿಕೆಟ್ ಆಡುತ್ತಿದ್ದರು. ಅಗನಿಂದ ಈಗಲೂ ನಮ್ಮ ಕುಟುಂಬದ ಅವಿಭಾಜ್ಯ ಅಂಗವಾಗಿದೆ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಬೆಳಿಗ್ಗೆ ಎದ್ದಕ್ಷಣ ದೇವರ ಪಟ ನೋಡಿದ ಮೇಲೆ ಪ್ರಜಾವಾಣಿಯತ್ತಲೇ ಕಣ್ಣು ಹೋಗುತ್ತದೆ. ಇವತ್ತಿಗೂ ಪತ್ರಿಕೋದ್ಯಮದ ಶಿಸ್ತು ಹಾಗೂ ಸುದ್ದಿ ಮೌಲ್ಯಗಳನ್ನು ಅಚ್ಚುಕಟ್ಟಾಗಿ ಕಾಪಾಡಿಕೊಂಡಿದೆ. ಪತ್ರಿಕೆಯು ಶತಕ ಗಳಿಸಿದ ನಂತರವೂ ಮುಂದೆ ಸಾಗಲಿ.

ದೊಡ್ಡಗಣೇಶ್, ಅಂತರರಾಷ್ಟ್ರೀಯ ಮಾಜಿ ಕ್ರಿಕೆಟಿಗ

ನಿಕಟ ಬಾಂಧವ್ಯ



ಪ್ರಜಾವಾಣಿಗೂ ನನಗೂ ನಿಕಟವಾದಂತಹ ಬಾಂಧವ್ಯ ಸುಮಾರು 40 ವರ್ಷಗಳಿಂದ ಇದೆ. ಪ್ರತಿನಿತ್ಯವೂ ನಾನು ಓದುವ ಪತ್ರಿಕೆಗಳಲ್ಲಿ ಮೊದಲನೆಯದು ಪ್ರಜಾವಾಣಿ. ಇದು ತುಂಬಾ ಪ್ರಭಾವಯುತ. ಬೇರೆ ಪತ್ರಿಕೆಗಳಿದ್ದರೂ 'ಪ್ರಜಾವಾಣಿ'ಯಲ್ಲಿ ಒಂದು ಸುದ್ದಿ ಬಂದರೆ ಜನ ಅದನ್ನು ನಂಬುತ್ತಾರೆ. ಇದು ಈಗಿನ ಸುದ್ದಿ ಪ್ರಪಂಚದಲ್ಲಿ ದೊಡ್ಡ ಸಾಧನೆ ಎಂದು ನಾನು ಭಾವಿಸುತ್ತೇನೆ. ಕೆಲವು ವಿಶೇಷವಾದಂತಹ ವಿಷಯಗಳಿಗೆ ಪತ್ರಿಕೆ ಆದ್ಯತೆ ಕೊಡುತ್ತದೆ. ಉದಾಹರಣೆಗೆ ಸಮಾಜದ ಹಿತದೃಷ್ಟಿಯಿಂದ ಒಳನೋಟ, ಶಿಕ್ಷಣ, ಸಾಹಿತ್ಯ, ಕ್ರೀಡೆ, ಮನರಂಜನೆ ಇವೆಲ್ಲಕ್ಕೂ ಸತತವಾಗಿ ಆದ್ಯತೆ ನೀಡುತ್ತಿರುವುದು ಪ್ರಶಂಸನೀಯ. ಇದರ ಜೊತೆಗೆ ಸರ್ಕಾರವು ಕೆಲವು ತಪ್ಪುಗಳನ್ನು ಮಾಡಿದಾಗ ಅದನ್ನು ನಿರ್ಭಯವಾಗಿ ಸುದ್ದಿ ಜೊತೆಗೆ ಸಂಪಾದಕೀಯದಲ್ಲಿ ಖಂಡಿಸುತ್ತದೆ. ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸತತವಾಗಿ ಪ್ರೋತ್ಸಾಹ ನೀಡುತ್ತಿದೆ. ಹೀಗೆ ಪ್ರಜಾವಾಣಿ ಸಾಧನೆಗಳ ಪಟ್ಟಿ ವಿಶಾಲವಾದದ್ದು, ಸಮಾಜಕ್ಕೆ ಪ್ರಜಾವಾಣಿ ಅತ್ಯವಶ್ಯ.

ಪ್ರೊ. ಎಂ.ಆರ್.ದೊರೆಸ್ವಾಮಿ, ಅಧ್ಯಕ್ಷರು, ಪಿಇಎಸ್ ಸಂಸ್ಥೆ ಬೆಂಗಳೂರು, ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣಾ ಸಲಹೆಗಾರರು

ಇನ್ನಷ್ಟು ಉತ್ತುಂಗಕ್ಕೆ ಏರಲಿ



ನಾನು ಬಾಲ್ಯದಿಂದಲೂ ಪ್ರಜಾವಾಣಿ ಓದುತ್ತಿದ್ದೇನೆ. ಅಂದಿನಿಂದಲೂ ಸುದ್ದಿ ಪ್ರಕಟಿಸುವುದರಲ್ಲಿ ಅದೇ ಗುಣಮಟ್ಟ ಕಾಪಾಡಿಕೊಂಡು ಬರುತ್ತಿದೆ. ಸ್ಪಷ್ಟತೆ, ನಿಖರತೆ ಬಗ್ಗೆ ರಾಜಿ ಇಲ್ಲದೆ ನಿರಂತರವಾಗಿ ಪತ್ರಿಕಾ ಧರ್ಮವನ್ನು ಕಾಪಾಡಿಕೊಂಡು ಬರುತ್ತಿರುವುದು ಅಭಿನಂದನಾರ್ಹ. ಆ ಕಾರಣದಿಂದ ತನ್ನದೇ ಆದ ಓದುಗರನ್ನು ಹಿಡಿದಿಡಲು ಸಾಧ್ಯವಾಗಿದೆ. ನನ್ನ ನೆಚ್ಚಿನ ದಿನಪತ್ರಿಕೆಗಳಲ್ಲಿ ಪ್ರಜಾವಾಣಿ ಅತ್ಯಂತ ಇಷ್ಟದ ಪತ್ರಿಕೆ. ಪ್ರಜಾವಾಣಿಯ ಅಡಿ ಬರಹದಂತೆ ಅತ್ಯಂತ ವಿಶ್ವಾಸಾರ್ಹವಾಗಿದೆ. ಕಾಲಕಾಲಕ್ಕೆ ಬದಲಾವಣೆ ಅಳವಡಿಸಿಕೊಂಡು ಸಾಮಾನ್ಯ ಜನರ ಧ್ವನಿಯಾಗಿದೆ. ಅಮೃತ ಮಹೋತ್ಸವ ಆಚರಿಸುತ್ತಿರುವುದು ಸಂತಸದ ವಿಷಯ. ಇನ್ನಷ್ಟು ಉತ್ತುಂಗಕ್ಕೆ ಏರಲಿ.

ಡಾ.ಜಿ. ಪರಮೇಶ್ವರ, ಶಾಸಕ, ಕೊರಟಗೆರೆ

ಆರ್ಥಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ ಪತ್ರಿಕೆ




ಪ್ರಜಾವಾಣಿ ಪತ್ರಿಕೆಯಲ್ಲಿ ಸಮಯಕ್ಕೆ ಸೂಕ್ತವಾಗಿ ಪ್ರಕಟವಾದ ಸಂಪಾದಕೀಯ, ಲೇಖನ, ಸಂಗತ ಮತ್ತು ಪ್ರತಿಕ್ರಿಯೆಗಳು ದೇಶವನ್ನು ಅನೇಕ ವರ್ಷಗಳಿಂದ ಕಾಡುತ್ತಿರುವ ಗಂಭೀರ ಆರ್ಥಿಕ ಸಮಸ್ಯೆಗಳಾದ ಬಡತನ,ನಿರುದ್ಯೋಗ ಮತ್ತು ಅಸಮಾನತೆಗಳ ಮೇಲೆ ವಿಶೇಷ ಬೆಳಕು ಚೆಲ್ಲಿವೆ ಎನ್ನುವುದರಲ್ಲಿ ಅನುಮಾನವಿಲ್ಲ. ದೋಷಪೂರಿತ ಸರಕಾರಿ ನೀತಿಗಳಿಂದ ಈ ಸಮಸ್ಯೆಗಳು ಇನ್ನೂ ಗಂಭೀರವಾಗಿಯೇ ಉಳಿದುಕೊಂಡಿವೆಯನ್ನುವ ಸತ್ಯವನ್ನು ಪ್ರಜಾವಾಣಿ ಬಯಲು ಮಾಡಿದೆ. ಜತೆಗೆ ಕೆಲವು ನೀತಿಗಳು ಸರಿಯಾಗಿದ್ದರೂ ಸಮರ್ಪಕವಾಗಿ ಜಾರಿಯಾಗಿಲ್ಲವೆಂಬ ಕಹಿ ಸತ್ಯವನ್ನು ಯಾವ ಮುಲಾಜೂ ಇಲ್ಲದೆ ಬೆಳಕಿಗೆ ತಂದಿದೆ.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆರ್ಥಿಕ ಸಮಸ್ಯೆಗಳ ಮೇಲೆ ಸಮರ್ಪಕ ಚಿಂತನೆ, ಆಳವಾದ ವಿಮರ್ಶೆ ಮತ್ತು ಹೆಚ್ಚಿನ ಸಂಶೋಧನೆಗಳಿಗೆ ನಿರ್ಭೀತಿಯಿಂದ ದಾರಿ ಮಾಡಿಕೊಟ್ಟದ್ದರಿಂದಲೇ ಅದು ಇಂದಿಗೂ ನಿಜವಾದ ಅರ್ಥದಲ್ಲಿ ಪ್ರಜಾವಾಣಿ.

ಪ್ರೊ. ಜಿ.ವಿ.ಜೋಶಿ, ಮಂಗಳೂರು

ನನ್ನನ್ನು ಹೀರೊ ಆಗಿಸಿದ ಪತ್ರಿಕೆ



ಸುಮಾರು 55 ವರ್ಷಗಳಿಂದ ನನ್ನ ಒಡನಾಡಿಯಾಗಿರುವ 'ಪ್ರಜಾವಾಣಿ' 75ನೇ ವರ್ಷಕ್ಕೆ ಕಾಲಿರಿಸಿರುವುದು ಅತೀವ ಸಂತಸ ತಂದಿದೆ. ನನ್ನ ದೈನಂದಿನ ವೇಳಾಪಟ್ಟಿ ಪ್ರಾರಂಭವಾಗುವುದೇ 'ಪ್ರಜಾವಾಣಿ' ಓದಿನೊಂದಿಗೆ. ಸಾಮಾಜಿಕ ಹಾಗೂ ರಾಜಕೀಯ ಆರೋಗ್ಯ ಕಾಪಾಡಲು 'ಪ್ರಜಾವಾಣಿ' ಬಳಗ ಶ್ರಮಿಸಿದೆ. ಕನ್ನಡನಾಡಿನ ಜನರನ್ನು ಸದಾ ಎಚ್ಚರವಾಗಿರಿಸಲು ಕಾತರಿಸಿದೆ. ನಾಡಿನ ಹಲವು ಉತ್ತಮ ಲೇಖಕರು ಹೊರಹೊಮ್ಮಿರುವುದು ಮತ್ತು ಬೆಳೆದಿರುವುದು ಪತ್ರಿಕೆ ಮುಖಾಂತರವೇ. ನಾನು ಬರೆದ ಮೊದಲ ಕಥೆ 1973ರಲ್ಲಿ ಪತ್ರಿಕೆಯಲ್ಲಿ ಪ್ರಕಟವಾದಾಗ ದಾವಣಗೆರೆಯ ಹೀರೊ ಆಗಿ ಮೆರೆದಿದ್ದೆ. ಸಮಾಜದ ಸಮಗ್ರ ಏಳಿಗೆಗೆ ಪತ್ರಿಕೆ ಅವಿರತವಾಗಿ ಶ್ರಮಿಸಿದೆ. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕಾಲಕ್ಕೆ ತಕ್ಕಂತೆ ಸ್ಪಂದಿಸಿದೆ. ಸುದ್ದಿಯನ್ನು ಸರಕಾಗಿಸದೆ ಪತ್ರಿಕಾ ಧರ್ಮದ ಘನತೆ, ಗೌರವ ಕಾಪಾಡಿದ ಪತ್ರಿಕೆ ಸಂಸ್ಥಾಪಕರು ಮತ್ತು ಸಿಬ್ಬಂದಿಗೆ ಅಭಿನಂದನೆಗಳು.

ಡಾ.ಎಂ.ಜಿ. ಈಶ್ವರಪ್ಪ, ಜಾನಪದ ವಿದ್ವಾಂಸ, ಬಾಪೂಜಿ ಸಂಸ್ಥೆ ಶೈಕ್ಷಣಿಕ ನಿರ್ದೇಶಕ, ದಾವಣಗೆರೆ

'ಕಲಾವಿದರಿಗೆ ಪ್ರೋತ್ಸಾಹ ನೀಡಿದ ಪತ್ರಿಕೆ'



ಪ್ರಜಾವಾಣಿ ಮೊದಲಿನಿಂದಲೂ ಕಲಾವಿದರನ್ನು ಬೆಳೆಸುತ್ತಾ ಬಂದಿರುವ ಪತ್ರಿಕೆ. ಹಾಗಾಗಿ, ಸುದ್ದಿಯೊಂದಿಗೆ ಅದಕ್ಕೆ ಪೂರಕವಾಗಿ ರೇಖಾಚಿತ್ರಗಳು, ಛಾಯಾಚಿತ್ರಗಳನ್ನು ಬಹಳ ಪರಿಣಾಮಕಾರಿಯಾಗಿ ಬಳಸಿ ಸೈ ಎನಿಸಿಕೊಂಡಿದೆ. ಸಾಪ್ತಾಹಿಕ ಪುರವಣಿಯಲ್ಲಿ ಬರುವ ಕಲಾವಿದರು ಬಿಡಿಸಿದ ಚಿತ್ರಗಳು ಇಡೀ ಕಥೆಯನ್ನೇ ಹೇಳುವಷ್ಟು ಸಶಕ್ತವಾಗಿರುತ್ತವೆ.

ಇತ್ತೀಚಿನ ಪತ್ರಿಕೆಯ ವಿನ್ಯಾಸ, ಅಕ್ಷರಗಳು ಮನ ಸೆಳೆಯುವಂತಿವೆ. ಒಂದು ಜನಪರ ಪತ್ರಿಕೆಯಾಗಿ ಪ್ರಜಾವಾಣಿ ತನ್ನ ಕರ್ತವ್ಯವನ್ನು ಸಮರ್ಥವಾಗಿ ನಿಭಾಯಿಸುತ್ತಿದೆ.

ಡಾ. ವಿ.ಜಿ. ಅಂದಾನಿ, ಹಿರಿಯ ಚಿತ್ರಕಲಾವಿದ, ಕಲಬುರಗಿ

ನೆಲದ ಸಂಸ್ಕೃತಿ ಪೋಷಿಸಿದ ಕೀರ್ತಿ



ಎಷ್ಟು ಕಾಲ ಬದುಕಿದೆ ಎನ್ನುವುದಕ್ಕಿಂತ ಹೇಗೆ ಬದುಕಿದೆ ಎನ್ನುವುದೇ ಮುಖ್ಯ. ಈ ಸಾಲುಗಳಿಗೆ ಪ್ರಜಾವಾಣಿ @75 ಉತ್ತಮ ಉದಾಹರಣೆ. ಪತ್ರಿಕೋದ್ಯಮದ ಮೌಲ್ಯಗಳನ್ನು ಸದಾ ಗೌರವಿಸಿ, ಪ್ರತಿಭಾವಂತ ಬರಹಗಾರರನ್ನು ಆಹ್ವಾನಿಸಿ, ಹೊಸ ವಿಚಾರಗಳಿಗೆ ಅವಕಾಶ ನೀಡಿ, ಭಾಷೆಯನ್ನು ಬೆಳೆಸಿ, ನೆಲದ ಸಂಸ್ಕೃತಿಯನ್ನು ಪೋಷಿಸಿದ ಕೀರ್ತಿ 'ಪ್ರಜಾವಾಣಿ'ಗೆ ಸಲ್ಲುವುದರಲ್ಲಿ ಸಂದೇಹವಿಲ್ಲ. ಹೀಗಾಗಿ, ಈ 75 ವರ್ಷಗಳಿಗೆ ವಿಶೇಷ ಗೌರವವಿದೆ. ಇದೇ ದಾರಿಯಲ್ಲಿ 'ಪ್ರಜಾವಾಣಿ' ಮುನ್ನಡೆಯಲಿ. ಅದು ಕನ್ನಡಿಗರ ಶಾಶ್ವತ ಆಸ್ತಿಯಾಗಲಿ ಎನ್ನುವುದು ನಮ್ಮ ಆಶಯ.

ಕೃಪಾಕರ ಸೇನಾನಿ, ಗ್ರೀನ್ ಆಸ್ಕರ್ ಪ್ರಶಸ್ತಿ ವಿಜೇತರು, ಮೈಸೂರು

'ಪ್ರಜಾವಾಣಿಯೊಂದಿಗೆ ಕರುಳು ಬಳ್ಳಿಯ ಸಂಬಂಧ'



ನನಗೆ ತಿಳಿವಳಿಕೆ ಬಂದಾಗಿನಿಂದಲೂ ಪ್ರಜಾವಾಣಿ ಪತ್ರಿಕೆಯನ್ನು ಓದುತ್ತಿದ್ದೇನೆ. ಪ್ರಜಾವಾಣಿಗೂ ನನಗೂ ಕರುಳು ಬಳ್ಳಿಯ ಸಂಬಂಧವಿದೆ. ಹಲವು ಸವಾಲುಗಳ ನಡುವೆಯೂ ಪತ್ರಿಕಾ ಧರ್ಮವನ್ನು ಪೋಷಿಸಿಕೊಂಡು ಬಂದಿದೆ. ಪತ್ರಿಕೆಯ ಸಾಪ್ತಾಹಿಕ ಪುರವಣಿಯು ಕರ್ನಾಟಕದ ಸಾಹಿತ್ಯ ಪ್ರಸ್ತುತಿಯನ್ನು ಬೆಳೆಸುವಲ್ಲಿ ದೊಡ್ಡ ಮಟ್ಟದ ಕೆಲಸವನ್ನು ಮಾಡಿದೆ.

ದೀಪಾವಳಿ ಕಥಾಸ್ಪರ್ಧೆಯು ಹಲವು ಪ್ರಮುಖ ಕಥೆಗಾರರನ್ನು ನಾಡಿಗೆ ಪರಿಚಯಿಸಿದೆ. ಪ್ರಜಾವಾಣಿ ಸಂಪಾದಕೀಯವು ಖಚಿತ ಹಾಗೂ ದಿಟ್ಟ ನಿಲುವನ್ನು ತೆಗೆದುಕೊಂಡಿದೆ. ವೈಚಾರಿಕ, ವೈಜ್ಞಾನಿಕ, ಜನಪರವಾದ ನಿಲುವುಗಳನ್ನು ಹಲವು ಬಾರಿ ಪ್ರಕಟಿಸಿದೆ. 25 ವರ್ಷಗಳಿಂದೀಚೆಗೆ ಪತ್ರಿಕಾ ಕ್ಷೇತ್ರದಲ್ಲಿ ಕಂಡು ಬಂದ ಅನಾರೋಗ್ಯಕರ ಸ್ಪರ್ಧೆಯ ನಡುವೆಯೂ ದೃಢಗೆಡದೆ ಪತ್ರಿಕಾಧರ್ಮವನ್ನು ನಿಭಾಯಿಸಿಕೊಂಡು ಬಂದಿದೆ. ಆಳವಾದ ರಾಜಕೀಯ, ಆರ್ಥಿಕ ನೋಟಗಳು ಪ್ರಜಾವಾಣಿ ಶ್ರೇಷ್ಠ ಪತ್ರಿಕೆ ಎಂಬುದಾಗಿ ಸಾಬೀತು ಮಾಡಿವೆ.

ಡಾ. ಮೀನಾಕ್ಷಿ ಬಾಳಿ, ರಾಜ್ಯ ಅಧ್ಯಕ್ಷೆ, ಜನವಾದಿ ಮಹಿಳಾ ಸಂಘಟನೆ, ಕಲಬುರಗಿ

ಜಿಲ್ಲಾಧಿಕಾರಿಗಳಿಗೆ ಬೊಮ್ಮಾಯಿ 'ಬಿಸಿ'

ಒಂದನೇ ಪುಟದಿಂದ

'ಇವತ್ತಿನ ಸಭೆಯಲ್ಲಿ ನೀಡಿರುವ ನಿರ್ದೇಶನಗಳನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಬೇಕು. ಕ್ರಿಯಾಶೀಲರಾಗಿ, ಜನಸ್ನೇಹಿಗಳಾಗಿ ಕೆಲಸ ಮಾಡಬೇಕು. ನೀವು ನಿಮ್ಮ ಜಿಲ್ಲೆಗಳಲ್ಲಿ ಪ್ರವಾಸ ಮಾಡಬೇಕು. ಕ್ಷೇತ್ರ ಮಟ್ಟದಲ್ಲಿ ಪರಿಶೀಲನೆ ನಡೆಸಬೇಕು. ಸರ್ಕಾರದ ಯೋಜನೆಗಳ ಅನುಷ್ಠಾನ ಪರಿಶೀಲಿಸಬೇಕು' ಎಂದು ಬೊಮ್ಮಾಯಿ ಸೂಚಿಸಿದರು.

'ದಿಢೀರ್ ಭೇಟಿ ನೀಡುವ ಮೂಲಕ ಆಡಳಿತಕ್ಕೆ ಚುರುಕು ಮುಟ್ಟಿಸಬೇಕು. ಜನರ ಪರವಾಗಿ ಕೆಲಸ ಮಾಡಲು ಹಿಂದೆ-ಮುಂದೆ ನೋಡಬೇಡಿ. ಯೋಜನೆಗಳ ಜಾರಿಯಲ್ಲಿ ತೊಡಕುಗಳಿದ್ದರೆ ನನ್ನ ಗಮನಕ್ಕೆ ತನ್ನಿ, ಅವುಗಳನ್ನು ಸರಿಪಡಿಸಲಾಗುವುದು. ಆದರೆ, ಅನಿಶ್ಚಿತತೆಯಲ್ಲಿ ಕಾಲ ದೂಡಬೇಡಿ. ಆಯವ್ಯಯ ಘೋಷಣೆಗಳ ಅನುಷ್ಠಾನಕ್ಕೆ ಒತ್ತು ನೀಡಿದರೆ ಸರ್ಕಾರದ ಮೇಲೆ ವಿಶ್ವಾಸ ಮೂಡಲು ಸಾಧ್ಯ' ಎಂದರು.

ಮನೆ ಹಾನಿ ಮಾಹಿತಿ ದಾಖಲೆಗೆ ಅ.30 ಕೊನೇ ದಿನ

- ಮಳೆ ಮತ್ತು ಪ್ರವಾಹದಿಂದ ಆದ ಮನೆ ಹಾನಿ ಮಾಹಿತಿ ದಾಖಲಿಸಲು ಇದೇ 30 ರವರೆಗೆ ಗಡುವು ವಿಸ್ತರಣೆ. ಜಿಲ್ಲಾಧಿಕಾರಿಗಳಿಗೆ ಎಲ್ಲ ಸರ್ಕಾರಿ ಆದೇಶಗಳನ್ನು, ಮಾರ್ಗಸೂಚಿಗಳನ್ನು ಕಳುಹಿಸಲಾಗಿದೆ. ಮನೆ ಹಾನಿ ಮಾಹಿತಿ ದಾಖಲಾತಿಯನ್ನು ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ವಾರಕ್ಕೊಮ್ಮೆ ಪರಿಶೀಲಿಸಬೇಕು.
- 'ಭೂಮಿ' ಯೋಜನೆಯಡಿ ಖಾತೆ ವರ್ಗಾವಣೆಯ ನೋಟಿಸ್ ಅವಧಿ 30 ರಿಂದ 15 ದಿನಗಳಿಗೆ ಇಳಿಕೆ ಮಾಡಲಾಗಿದೆ.
- ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸಮಾನಾಂತರ ಕೇಡರ್ ಅಧಿಕಾರಿಗಳಿಗೆ ಅಧಿಕಾರ ನೀಡಲು ತೀರ್ಮಾನ.
- ಆಯುಷ್ಮಾನ್ ಭಾರತ್ ಕಾರ್ಡ್‌ಗಳನ್ನು ಆರೋಗ್ಯ ಖಾತೆಗೆ ಜೋಡಿಸಬೇಕು.
- ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಡಿ 302 ನಗರ ಸ್ಥಳೀಯ ಸಂಸ್ಥೆಗಳಿಗೆ ₹3,885 ಕೋಟಿ ಅನುದಾನ ಒದಗಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದ್ದು, ಉಳಿದ ಜಿಲ್ಲೆಗಳಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಮಾರ್ಚ್ 15 ರೊಳಗೆ ಕಾಮಗಾರಿ ಪೂರ್ಣಗೊಳಿಸಬೇಕು.
- ವಸತಿ ಯೋಜನೆಗಳಡಿ 5 ಲಕ್ಷ ಮನೆಗಳ ನಿರ್ಮಾಣ ಕಾರ್ಯವನ್ನು ಡಿಸೆಂಬರ್ ಅಂತ್ಯದೊಳಗೆ ಮತ್ತು ನಗರ ವಸತಿ ಯೋಜನೆಯಡಿ 1 ಲಕ್ಷ ಮನೆಗಳನ್ನು ಮಾರ್ಚ್ ಕೊನೆಯೊಳಗೆ ಪೂರ್ಣಗೊಳಿಸಲು ಗಡುವು ನಿಗದಿ.
- ದೌರ್ಜನ್ಯ ತಡೆ ಅಧಿನಿಯಮದಡಿ ದಾಖಲಾಗಿರುವ ಕೊಲೆ ಪ್ರಕರಣಗಳಲ್ಲಿ, ಮೃತರ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿ ನೀಡಲು ಬಾಕಿ ಇರುವ ಪ್ರಸ್ತಾವನೆಗಳನ್ನು ಪ್ರಾದೇಶಿಕ ಆಯುಕ್ತರು ತ್ವರಿತವಾಗಿ ವಿಲೇವಾರಿಗೊಳಿಸಬೇಕು.
- ಬೆಳೆ ವಿಮೆ ಪಡೆಯಲು ರೈತರಿಗೆ ಅಧಿಕಾರಿಗಳು ಪೂರಕವಾಗಿ ಕಾರ್ಯ ನಿರ್ವಹಿಸಬೇಕು.
- ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ಒದಗಿಸುವ ಕುರಿತು ಬ್ಯಾಂಕುಗಳು ಅರ್ಜಿ ತಿರಸ್ಕರಿಸುವ ಕುರಿತು ಬ್ಯಾಂಕರ್‌ಗಳೊಂದಿಗೆ ನಿಯಮಿತ ಸಭೆ ನಡೆಸಬೇಕು. ತಿರಸ್ಕೃತ ಅರ್ಜಿಗಳ ಪುನರ್ ಪರಿಶೀಲನೆ ನಡೆಸಬೇಕು.

ಸ್ಮಾರ್ತ ಬ್ರಾಹ್ಮಣರ ಅರ್ಜಿ ತಿರಸ್ಕರಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ತಮಗೆ ಅಲ್ಪಸಂಖ್ಯಾತರ ಸ್ಥಾನಮಾನ ಕಲ್ಪಿಸಬೇಕೆಂದು ಕೋರಿ ತಮಿಳುನಾಡಿನ ಸ್ಮಾರ್ತ ಬ್ರಾಹ್ಮಣರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿದೆ.

ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಮತ್ತು ಎಸ್.ರವೀಂದ್ರ ಭಟ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಈ ವಿಚಾರದಲ್ಲಿ ಮದ್ರಾಸ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ಎತ್ತಿಹಿಡಿದಿದೆ.

'ಸ್ಮಾರ್ತ ಬ್ರಾಹ್ಮಣ ಎಂಬುದು ಒಂದು ಜಾತಿಯಷ್ಟೆ. ಅದು ಧಾರ್ಮಿಕ ಪಂಗಡವಲ್ಲ. ಹೀಗಾಗಿ ಅವರಿಗೆ ಅಲ್ಪಸಂಖ್ಯಾತರ ಸ್ಥಾನಮಾನ ನೀಡಲು ಸಾಧ್ಯವಿಲ್ಲ' ಎಂದು ಮದ್ರಾಸ್ ಹೈಕೋರ್ಟ್ ಜೂನ್ 7ರ ತೀರ್ಪಿನಲ್ಲಿ ತಿಳಿಸಿತ್ತು.

'ದೂರುದಾರರ ಹಾಜರಿ ಅನಿವಾರ್ಯವಲ್ಲ'

ಬೆಂಗಳೂರು: 'ಚೆಕ್‌ಬೌನ್ಸ್ ಪ್ರಕರಣಗಳಲ್ಲಿ ಆರೋಪಿಯ ಹೇಳಿಕೆ ದಾಖಲಿಸಿಕೊಳ್ಳುವಾಗ ಫಿರ್ಯಾದುದಾರರು ಖುದ್ದು ಹಾಜರಿರಬೇಕು ಎಂಬುದು ಅನಿವಾರ್ಯವಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ಕಲಬುರಗಿಯ ಸುಭಾಷ್ ಚೌಕ್ ನಿವಾಸಿ ನಾಗರಾಜ್ ಎಂಬುವರು ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರಿದ್ದ ಏಕಸದಸ್ಯ ನ್ಯಾಯಪೀಠ, ಪ್ರಕರಣದಲ್ಲಿ ಆರೋಪಿಯನ್ನು ಖುಲಾಸೆಗೊಳಿಸಿದ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿದೆ.

ಪ್ರಕರಣವನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಿ, 'ಇದೇ 21ರಂದು ಆರೋಪಿ ಮತ್ತು ದೂರುದಾರರು ವಿಚಾರಣಾ ನ್ಯಾಯಾಲಯಕ್ಕೆ ಹಾಜರಾಗಬೇಕು. ದೂರು ರದ್ದುಪಡಿಸಿದ ಹಂತದಿಂದ ವಿಚಾರಣೆ ಪುನಃ ಮುಂದುವರಿಸಬೇಕು' ಎಂದು ನಿರ್ದೇಶಿಸಿದೆ.

'ಪ್ರಕರಣ ವಿಲೇವಾರಿ ಮಾಡಬೇಕೆಂಬ ಏಕೈಕ ಉದ್ದೇಶದಿಂದ ಇಂತಹ ಪ್ರಕರಣಗಳಲ್ಲಿ ದೂರುದಾರ ವಿಚಾರಣೆಗೆ ಹಾಜರಾಗಿಲ್ಲ ಎಂಬ ಕಾರಣ ಮುಂದು ಮಾಡಿ ದೂರುಗಳನ್ನು ವಜಾಗೊಳಿಸಬಾರದು. ಆದೇಶ ಹೊರಡಿಸುವ ಮುನ್ನ ಪ್ರಕರಣ ಯಾವ ಹಂತದಲ್ಲಿದೆ? ದೂರುದಾರರು ಮತ್ತು ಆರೋಪಿ ಯಾವಾಗ ಹಾಜರಾಗಿದ್ದರು? ದೂರು ಎಷ್ಟು ವರ್ಷಗಳಿಂದ ಬಾಕಿಯಿದೆ? ಪ್ರಕರಣ ಯಾವ ಸ್ವರೂಪದ್ದಾಗಿದೆ ಎಂಬುದನ್ನು ನ್ಯಾಯಾಲಯ ಗಮನಿಸಬೇಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?

ಈಶ್ವರ್ ಎಂಬುವರು 2013ರಲ್ಲಿ ನಾಗರಾಜ್ ಅವರಿಂದ ₹ 4.5 ಲಕ್ಷ ಸಾಲ ಪಡೆದು ಭದ್ರತಾ ಖಾತರಿಯಾಗಿ ಚೆಕ್ ನೀಡಿದ್ದರು. ಸಾಲ ಮರು ಪಾವತಿಸದ ಕಾರಣ ನಾಗರಾಜ್ ದೂರು ದಾಖಲಿಸಿದ್ದರು. ಆರೋಪಿ ಈಶ್ವರ್ ಹಲವು ವರ್ಷಗಳಿಂದ ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಿರಲಿಲ್ಲ. ಇದರಿಂದ ಆರೋಪಿಗೆ ಜಾಮೀನು ರಹಿತ ಬಂಧನ ವಾರಂಟ್ ಜಾರಿಗೊಳಿಸಲಾಗಿತ್ತು.

ಏತನ್ಮಧ್ಯೆ, ಆರೋಪಿಯು 2018ರಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನು ಪಡೆದುಕೊಂಡಿದ್ದರು. ಆರೋಪಿಯ ಹೇಳಿಕೆ ದಾಖಲೆಗೆ ಪ್ರಕರಣ ನಿಗದಿಯಾದ ದಿನ ಫಿರ್ಯಾದುದಾರ ಹಾಜರಾಗಿರಲಿಲ್ಲ. ಈ ಕಾರಣಕ್ಕೆ, ವಿಚಾರಣಾ ನ್ಯಾಯಾಲಯ ಪ್ರಕರಣವನ್ನು ವಜಾಗೊಳಿಸಿತ್ತು. ಈ ಆದೇಶ ಪ್ರಶ್ನಿಸಿ ನಾಗರಾಜ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಹಿಂದಿಯಲ್ಲೇ ಔಷಧ ಚೀಟಿ ಬರೆದುಕೊಟ್ಟ ವೈದ್ಯ

ಸತನಾ, ಮಧ್ಯಪ್ರದೇಶ (ಪಿಟಿಐ): ಇಲ್ಲಿನ ಕೋಟರ್ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಸರ್ವೇಶ್ ಸಿಂಗ್ ಎಂಬುವರು ರೋಗಿಗಳಿಗೆ ಹಿಂದಿಯಲ್ಲೇ ಔಷಧ ಚೀಟಿ ಬರೆದುಕೊಟ್ಟಿದ್ದು (ಪ್ರಿಸ್ಕ್ರಿಪ್ಷನ್) ಈ ಚೀಟಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

'ವೈದ್ಯರು ಔಷಧ ಚೀಟಿಯ ಮೇಲ್ಭಾಗದಲ್ಲಿ 'ಆರ್‌ಎಕ್ಸ್' ಬದಲು 'ಶ್ರೀ ಹರಿ' ಎಂದು ಸಂಬೋಧಿಸಿ ಹಿಂದಿಯಲ್ಲೇ ಔಷಧಗಳ ವಿವರ ಬರೆದು ಕೊಡಬೇಕು ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಸೂಚಿಸಿದ್ದರು. ಅದನ್ನು ಪಾಲಿಸಿದ್ದೇನೆ' ಎಂದು ಸಿಂಗ್ ಹೇಳಿದ್ದಾರೆ.



ಕೊಡಗು ಜಿಲ್ಲೆ ತಲಕಾವೇರಿಯಲ್ಲಿ ಸೋಮವಾರ ಸಂಜೆ ತೀರ್ಥೋದ್ಭವವಾದ ನಂತರ ತೀರ್ಥವನ್ನು ತುಂಬಿಕೊಳ್ಳಲು ಭಕ್ತರು ಬಿಂದಿಗೆ, ಕ್ಯಾನ್ ಹಿಡಿದು ಮುಗಿಬಿದ್ದರು

ಜಯಘೋಷ ಮಧ್ಯೆ ಉಕ್ಕಿದ ಜೀವನದಿ ಕಾವೇರಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಹಸಿರು ಹೊದ್ದ ಬ್ರಹ್ಮಗಿರಿಯ ತಲಕಾವೇರಿಯಲ್ಲಿ ಸೋಮವಾರ ಸೂರ್ಯ ಅಸ್ತಮಿಸುತ್ತಿದ್ದಂತೆ ಸಂಭ್ರಮ ಮೇಳೈಸಿತು. ಭಕ್ತರ ನಂಬುಗೆಯಂತೆ ಇಲ್ಲಿನ ಬ್ರಹ್ಮಕುಂಡಿಕೆಯಲ್ಲಿ ಮೈಕೊರೆಯುವ ಚಳಿಯ ನಡುವೆ ಕಾವೇರಿ ತೀರ್ಥರೂಪಿಣಿಯಾಗಿ ಉಕ್ಕಿ ಹರಿದಳು.

ದಟ್ಟ ಮಂಜಿನ ನಡುವೆ ಭಕ್ತರ ನೂಕುನುಗ್ಗಲಿನ ನಡುವೆ ಸಂಜೆ 7.21ರಲ್ಲಿ ವಿವಿಧ ಪೂಜಾವಿಧಿ ನೆರವೇರಿಸಿದ ಬಳಿಕ 7.22ಕ್ಕೆ ತೀರ್ಥೋದ್ಭವವಾಯಿತು ಎಂದು ಅರ್ಚಕ ವೃಂದ ಘೋಷಿಸಿ ತೀರ್ಥವನ್ನು ಪ್ರೋಕ್ಷಿಸಿದರು. ಕೋವಿಡ್ ನಿರ್ಬಂಧಗಳು ಈ ಬಾರಿ ಇಲ್ಲದ್ದರಿಂದ ಭಕ್ತಸಾಗರವೇ ಹರಿದು ಬಂದಿತ್ತು.

ತೀರ್ಥೋದ್ಭವದ ಬಳಿಕ ಬಿಂದಿಗೆ ಹಾಗೂ ಬಾಟಲಿಗಳಲ್ಲಿ ತೀರ್ಥ ತುಂಬಿಸಿಕೊಳ್ಳಲು ಸಾವಿರಾರು ಭಕ್ತರು ಮುಗಿಬಿದ್ದರು. ಇಳಿ ಹೊತ್ತಿನಲ್ಲಿ, ಮೈಕೊರೆಯುವ ಚಳಿಯ ಮಧ್ಯೆಯೂ ಬ್ರಹ್ಮಕುಂಡಿಕೆಯ ಸಮೀಪದ ಪುಷ್ಕರಿಣಿಯಲ್ಲಿ ನೂರಾರು ಮಂದಿ ಮಿಂದು ಭಕ್ತಿಭಾವ ಮೆರೆದರು.

ತೀರ್ಥೋದ್ಭವದ ಅಪರೂಪದ ದೃಶ್ಯ ಕಣ್ತುಂಬಿಕೊಳ್ಳಲು ತಮಿಳುನಾಡು, ಕೇರಳಗಳಿಂದಲೂ ಅಪಾರ ಸಂಖ್ಯೆಯ ಜನರು ಇಲ್ಲಿಗೆ ಬಂದಿದ್ದರು. ಭಾಗಮಂಡಲದಿಂದ ತಲಕಾವೇರಿಯವರೆಗೆ ಕೊಡವರ ಸಾಂಪ್ರದಾಯಿಕ ಉಡುಗೆಯಲ್ಲಿ ನೂರಾರು ಮಂದಿ ಪಾದಯಾತ್ರೆಯಲ್ಲಿ ಬಂದಿದ್ದು ವಿಶೇಷವಾಗಿತ್ತು. ತಲಕಾವೇರಿಯಾದ್ಯಂತ ಜಗಮಗಿಸುವ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿತ್ತು.

ಸಮೀಪದ ಭಾಗಮಂಡಲದ ಕಾವೇರಿ, ಕನ್ನಿಕೆ, ಸುಜ್ಯೋತಿ ನದಿಗಳು ಸೇರುವ ತ್ರಿವೇಣಿ ಸಂಗಮದಲ್ಲೂ ಭಕ್ತರು ಪುಣ್ಯಸ್ನಾನ ಮಾಡಿದರು. ಪಿಂಡ ಪ್ರದಾನ ಮತ್ತಿತರ ಧಾರ್ಮಿಕ ಕಾರ್ಯ ನೆರವೇರಿಸಿದರು. ತಡರಾತ್ರಿಯವರೆಗೂ ಭಾಗಮಂಡಲ, ತಲಕಾವೇರಿಯಲ್ಲಿ ಜನಜಂಗುಳಿ ಇತ್ತು.

ಸುದ್ದಿ 2 ನಿಮಿಷ

ರಾಜಕೀಯದಿಂದ ನಿವೃತ್ತಿ: ಪ್ರಸಾದ್

ಮೈಸೂರು: 'ಒಂದೂವರೆ ವರ್ಷ ಕಳೆದರೆ, ಚುನಾವಣೆಯಲ್ಲಿ ಸ್ಪರ್ಧಿಸಿ 50 ವರ್ಷ ಪೂರೈಸಿದಂತಾಗುತ್ತದೆ. ಅಲ್ಲಿಗೆ ರಾಜಕೀಯದಿಂದ ನಿವೃತ್ತಿಯಾಗಲಿದ್ದೇನೆ' ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೇಳಿದರು.

ಕಲಾಮಂದಿರದಲ್ಲಿ 'ಸಮಾನತೆ- ಸ್ವಾಭಿಮಾನ- ಸ್ವಾವಲಂಬನೆ ಪ್ರತಿಷ್ಠಾನ' ಹಾಗೂ 'ಸಮಾನತೆ ಪ್ರಕಾಶನ' ಸೋಮವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, '1974ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತೆ. 1977ರಲ್ಲಿ ಜನತಾ ಪಕ್ಷದಿಂದ ಸಂಸತ್ ಪ್ರವೇಶಿಸಿದೆ. ಇದುವರೆಗೆ 14 ಚುನಾವಣೆಯಲ್ಲಿ ಸ್ಪರ್ಧಿಸಿ 11ರಲ್ಲಿ ಗೆಲುವು ಸಾಧಿಸಿದ್ದೇನೆ. 2024ರಲ್ಲಿ ಸಂಸತ್ ಸದಸ್ಯ ಅವಧಿ ಮುಗಿಯಲಿದ್ದು, ಮತ್ತೆ ಸ್ಪರ್ಧಿಸಲಾರೆ' ಎಂದರು.

'ದಲಿತ ಸಮುದಾಯ ಇಂದಿಗೂ ಪ್ರತ್ಯೇಕ ಕಾಲೊನಿಗಳಲ್ಲಿ, ಕೊಳೆಗೇರಿಗಳಲ್ಲಿ ವಾಸಿಸುತ್ತಿದೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೂ ತಿಳಿಸಿದ್ದೆ. ಅಧಿಕಾರ, ಸಂಪತ್ತು ಅವರಿಗೆ ಇನ್ನೂ ಸರಿಯಾಗಿ ಸಿಕ್ಕಿಲ್ಲ' ಎಂದರು.

'22 ವರ್ಷಗಳಿಂದ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಮೊಸಳೆ ಹಿಡಿದು ಕೊಂಡಿತ್ತು. ಚುನಾವಣೆಯಿಂದ ಪಕ್ಷಕ್ಕೆ ಗಜೇಂದ್ರ ಮೋಕ್ಷ ಸಿಕ್ಕಿದೆ. ಆನೆ ನೀರು ಕುಡಿಯಲು ಹೊಳೆ ಹತ್ತಿರ ಹೋದಾಗ ಮೊಸಳೆ ಕಾಲು ಹಿಡಿದುಕೊಳ್ಳುತ್ತದೆ. ಇದೀಗ ಬಿಟ್ಟಿರುವುದರಿಂದ ಇಬ್ಬರು ಅಭ್ಯರ್ಥಿಗಳ ನಡುವೆ ಚುನಾವಣೆ ನಡೆಯುತ್ತಿದೆ. ಗೆದ್ದವರು ಸ್ವತಂತ್ರವಾಗಿ ಕೆಲಸ ಮಾಡುತ್ತಾರೋ ಇಲ್ಲವೋ ನನಗೆ ಸಂಬಂಧವಿಲ್ಲ' ಎಂದು ಪ್ರಸಾದ್ ಪ್ರತಿಕ್ರಿಯಿಸಿದರು.



'4,000 ಬಸ್ ಖರೀದಿ ಪ್ರಸ್ತಾವ'

ಬೆಂಗಳೂರು: ರಾಜ್ಯದ ಸಾರಿಗೆ ನಿಗಮಗಳನ್ನು ನಷ್ಟದ ಸುಳಿಯಿಂದ ಹೊರ ತರುವುದಕ್ಕಾಗಿ ಏಕಕಾಲಕ್ಕೆ ನಾಲ್ಕು ಸಾವಿರ ಹೊಸ ಬಸ್‌ಗಳನ್ನು ಖರೀದಿಸುವ ಪ್ರಸ್ತಾವವಿದೆ ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಹಳೆಯ ಬಸ್‌ಗಳನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಓಡಿಸುತ್ತಿರುವುದರಿಂದ ಸಾರಿಗೆ ನಿಗಮಗಳು ಹೆಚ್ಚು ನಷ್ಟ ಅನುಭವಿಸುತ್ತಿವೆ. ಈಗ ನಾಲ್ಕು ನಿಗಮಗಳಲ್ಲೂ ತಲಾ ಒಂದು ಸಾವಿರ ಬಸ್ ಖರೀದಿಗೆ ಪ್ರಸ್ತಾವವಿದೆ. ಈ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಒಪ್ಪಿಗೆ ಸೂಚಿಸುವ ನಿರೀಕ್ಷೆ ಇದೆ' ಎಂದರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಲ್ಲಿ 600 ಹೊಸ ಬಸ್‌ಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಮುಖ್ಯಮಂತ್ರಿಯವರ ಒಪ್ಪಿಗೆ ದೊರೆತ ಬಳಿಕ ಇತರ ನಿಗಮಗಳಲ್ಲೂ ಬಸ್ ಖರೀದಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಹೇಳಿದರು.

ಸಾರಿಗೆ ಇಲಾಖೆಯ ಅಧೀನದ ನಾಲ್ಕು ನಿಗಮಗಳನ್ನೂ ವಿಲೀನಗೊಳಿಸಬೇಕೆಂಬ ಶಿಫಾರಸನ್ನೂ ಅನುಷ್ಠಾನಕ್ಕೆ ತರಲು ನಿರ್ಧರಿಸಲಾಗಿದೆ. ಈ ಸಂಬಂಧ ಶೀಘ್ರದಲ್ಲಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ತಿಳಿಸಿದರು.

ಸಿಐಡಿ ತನಿಖೆಗೆ ನಿರ್ಧಾರ: 'ದುಬಾರಿ ಬೆಲೆಯ ಐಷಾರಾಮಿ ವಾಹನಗಳ ನೋಂದಣಿಯಲ್ಲಿ ತೆರಿಗೆ ವಂಚನೆ ಕುರಿತು ಲೆಕ್ಕಪರಿಶೋಧನೆ ನಡೆಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ. ವರದಿ ಕೈಸೇರಿದ ಬಳಿಕ ಸಿಐಡಿ ತನಿಖೆಗೆ ಆದೇಶಿಸಲು ನಿರ್ಧರಿಸಲಾಗಿದೆ' ಎಂದು ಶ್ರೀರಾಮುಲು ತಿಳಿಸಿದರು.

ಮತ್ತೊಂದು ಹೋರಾಟದ ಸುಳಿವು • ಬೆಂಗಳೂರು ಸುತ್ತ ಭೂಮಿ ಕಳೆದುಕೊಳ್ಳುತ್ತಿರುವ ಒಕ್ಕಲಿಗರು: ಸ್ವಾಮೀಜಿ

ಶೇ12ರಷ್ಟು ಮೀಸಲಿಗೆ ಚುಂಚನಗಿರಿ ಶ್ರೀ ಬೇಡಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: 'ಮೀಸಲಾತಿ ವಿಚಾರವಾಗಿ 1993ರಲ್ಲಿ ದೊಡ್ಡ ಚಳವಳಿ ನಡೆದಿತ್ತು. ಮತ್ತೊಂದು ಅಂಥ ಹೋರಾಟದ ಅವಶ್ಯದ ಬಗ್ಗೆ ಸಮುದಾಯದ ಮುಖಂಡರು ಮಾತನಾಡುತ್ತಿದ್ದಾರೆ. ಬೆಂಗಳೂರು ಸುತ್ತಮುತ್ತ ಒಕ್ಕಲಿಗರ ಭೂಮಿ ಕೈತಪ್ಪುತ್ತಿದೆ. ಮುಂದೆ ಸ್ವಾಮೀಜಿಗಳು ಹೋರಾಟಕ್ಕೆ ಕರೆ ನೀಡಿದಾಗ ಬರಲು ಒಕ್ಕಲಿಗರು ಸಿದ್ಧರಿರಬೇಕು' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಕರೆ ನೀಡಿದರು.



ನಿರ್ಮಲಾನಂದನಾಥ ಸ್ವಾಮೀಜಿ

ನಗರದಲ್ಲಿ ಸೋಮವಾರ ಒಕ್ಕಲಿಗರ ಸಾಂಸ್ಕೃತಿಕ ಭವನದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, 'ರಾಜ್ಯದಲ್ಲಿ ಶೇ16ರಷ್ಟು ಇರುವ ಒಕ್ಕಲಿಗರಿಗೆ ಶೇ4 ರಷ್ಟು ಮೀಸಲಾತಿ ಸಾಕಾಗುವುದಿಲ್ಲ. ನಮ್ಮ ಬೇಡಿಕೆ ಈಡೇರದಿದ್ದರೆ ಧ್ವನಿ ಎತ್ತಬೇಕೆಂಬ ಆಗ್ರಹವೂ ಸಮುದಾಯದಲ್ಲಿದೆ' ಎಂದರು.

ಮುಖ್ಯಾಂಶಗಳು

- ಒಕ್ಕಲಿಗರ ಮೀಸಲಾತಿ–ಶೇ 4ರಿಂದ 12ಕ್ಕೆ ಹೆಚ್ಚಿಸಬೇಕು
- ಬೆಂಗಳೂರಿನ ಸೌಕರ್ಯಕ್ಕೆ ಒಕ್ಕಲಿಗರ ಭೂಮಿ
- ಜಮೀನು ಕಳೆದುಕೊಂಡು ಬೆಂಗಳೂರಿನಲ್ಲಿ ಕೂಲಿ

'ಒಟ್ಟಾರೆ ಮೀಸಲಾತಿ ಶೇ 50 ದಾಟುವಂತಿಲ್ಲ ಎಂಬ ಸಂವಿಧಾನದ ಆಶಯಕ್ಕೆ ವ್ಯತಿರಿಕ್ತವಾಗಿ ಮಾತನಾಡುವುದು ಬೇಡ ಎಂದು ಸುಮ್ಮನಿದ್ದೆವು. ಸರ್ಕಾರ ಆ ಮಿತಿ ದಾಟಿ ಮೀಸಲಾತಿ ನೀಡುವುದಾದರೆ ಒಕ್ಕಲಿಗರಿಗೂ ಶೇ 4ರಿಂದ ಶೇ12ಕ್ಕೆ ಮೀಸಲಾತಿ ಹೆಚ್ಚಿಸಲಿ' ಎಂದು ಬೇಡಿಕೆ ಮುಂದಿಟ್ಟರು.

ಶಿರಾ ತಾಲ್ಲೂಕಿನ ಪಟ್ಟದನಾಯಕನಹಳ್ಳಿಯ ನಂಜಾವದೂತ ಸ್ವಾಮೀಜಿ ಮಾತನಾಡಿ, 'ಸರ್ಕಾರ ಕಲ್ಪಿಸುತ್ತಿರುವ ಮೀಸಲಾತಿ ಶೇ 200 ಇದ್ದರೂ ಸಾಕಾಗಲ್ಲ. ನಮ್ಮ ಬೇಡಿಕೆ ಪರಿಗಣಿಸದಿದ್ದರೆ ಮತ್ತೆ ದೊಡ್ಡ ಹೋರಾಟ ನಡೆಯಬಹುದು. ಅದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬಾರದು' ಎಂದರು.

'ಒಕ್ಕಲಿಗರ ಸ್ಥಿತಿ ನೆನಪಿಸಿಕೊಂಡರೆ ಭಯವಾಗುತ್ತೆ'

'ಬೆಂಗಳೂರು ಸುತ್ತಮುತ್ತ ಒಕ್ಕಲಿಗರೇ ಹೆಚ್ಚಿನ ಪ್ರಮಾಣದಲ್ಲಿ ಜಮೀನು ಕಳೆದುಕೊಂಡಿದ್ದಾರೆ. ಈ ಒಕ್ಕಲಿಗರು ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ಕೊಳೆಗೇರಿಗಳಲ್ಲಿ ವಾಸಿಸುತ್ತಾ ಕೂಲಿ ಮಾಡುತ್ತಿದ್ದಾರೆ' ಎಂದು ನಿರ್ಮಲಾನಂದನಾಥ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

'ಬೆಂಗಳೂರಿಗೆ ಅಗತ್ಯ ಸೌಲಭ್ಯ ಪೂರೈಸಲು ರೈತರ ಭೂಮಿ ಪಡೆಯಲಾಗಿದೆ. ಆ ಭಾಗದಲ್ಲಿ ಒಕ್ಕಲಿಗರ ಪ್ರಮಾಣ ಶೇ70ಕ್ಕೂ ಅಧಿಕವಿದೆ. ಒಕ್ಕಲಿಗರು ಹೆಚ್ಚಿರುವ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯದಲ್ಲಿ ಭೂಮಿ ಉಳಿಯಲ್ಲ. ಮುಂದಿನ 30 ವರ್ಷಗಳಲ್ಲಿ ಒಕ್ಕಲಿಗರ ಸ್ಥಿತಿ ನೆನಪಿಸಿಕೊಂಡರೆ ತುಂಬಾ ಭಯವಾಗುತ್ತದೆ' ಎಂದರು.

ಎಸ್‌ಟಿಗೆ ಸೇರಿಸಲು ಗಂಗಾಮತಸ್ಥರ ಆಗ್ರಹ

ಬೆಂಗಳೂರು: ಗಂಗಾಮತಸ್ಥರ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವ ಕೇಂದ್ರದಲ್ಲಿ ನನೆಗುದಿಗೆ ಬಿದ್ದಿದೆ ಎಂದು ನಿಜಶರಣ ಅಂಬಿಗರ ಚೌಡಯ್ಯ ಪೀಠದ ಅಧ್ಯಕ್ಷ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಹೇಳಿದರು.

'ಗಂಗಾಮತಸ್ಥರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವ ಪರಿಶೀಲನೆಯಲ್ಲಿದ್ದು, ಕೂಡಲೇ ಬೇಡಿಕೆ ಈಡೇರಿಸಿ ನ್ಯಾಯ ಒದಗಿಸಬೇಕು. ರಾಜ್ಯ ಸರ್ಕಾರದಿಂದ ಶಿಫಾರಸು ಮಾಡಿದ ಈ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿಲ್ಲ. ರಾಜಕೀಯ ನಾಯಕರು ಚುನಾವಣೆಯ ಸಮಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿಸುವುದಾಗಿ ಬಹಿರಂಗವಾಗಿ ಘೋಷಣೆ ಮಾಡಿದ್ದರು. ಆದರೆ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ' ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕರ್ನಾಟಕ ರಾಜ್ಯ ಗಂಗಾಮತಸ್ಥರ ಸಂಘದ ಅಧ್ಯಕ್ಷ ಬಿ. ಮೌಲಾಲಿ ಮಾತನಾಡಿ, 'ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಮುಂದಿನ ದಿನಗಳಲ್ಲಿ ಬೃಹತ್ ಜನೋತ್ಸವ ಸಭೆ ಹಮ್ಮಿಕೊಂಡು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು' ಎಂದರು.

'ಹಂಪಿ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ಪೀಠ ಹಾಗೂ ಮೈಸೂರಿನ ಬುಡಕಟ್ಟು ಸಂಶೋಧನಾ ಸಂಸ್ಥೆ ಸಮಗ್ರವಾಗಿ ಕುಲಶಾಸ್ತ್ರೀಯ ಅಧ್ಯಯನ ನಡೆಸಿದ್ದು, ಗಂಗಾಮತಸ್ಥರ ಪರ್ಯಾಯ ಪದಗಳಾದ ಅಂಬಿಗ, ಬೆಸ್ತ, ಕೋಳಿ, ಕಬ್ಬಲಿಗ, ಬಾರ್ಕಿರ, ಸುಣಗಾರ, ನಾಟೀಕರ್ ಮೀನುಗಾರ, ಮೊಗವೀರ ಮುಂತಾದವುಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಎಲ್ಲಾ ದಾಖಲೆಗಳನ್ನು ಸಲ್ಲಿಸಿದೆ. ಆದರೆ ಈ ಕುರಿತಾದ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡುತ್ತಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಗಂಗಾಮತಸ್ಥ ಸಮುದಾಯವು ರಾಜ್ಯದಲ್ಲಿ 40 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದೆ. ಈ ಸಮುದಾಯವನ್ನು ಪರಿಶಿಷ್ಟ ಜನಾಂಗದ ಪಟ್ಟಿಗೆ ಸೇರಿಸಲು ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು, ಸಂಸದರು ಹಾಗೂ ರಾಜ್ಯ ಸರ್ಕಾರ ಪ್ರಯತ್ನ ತೀವ್ರಗೊಳಿಸಬೇಕು' ಎಂದು ಆಗ್ರಹಿಸಿದರು.

'ಮೀಸಲಾತಿ ಹೆಚ್ಚಳದ ಹಿಂದೆ ಬಿಜೆಪಿ ಪ್ರಮುಖರ ಸಮಿತಿ'

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಹೆಚ್ಚಳ ಮಾಡುವ ನಿರ್ಧಾರದ ಹಿಂದೆ ಬಿಜೆಪಿ ಪ್ರಮುಖರ ಸಮಿತಿ, ಕಾರ್ಯಕಾರಿ ಸಮಿತಿಯ ಸಮ್ಮತಿಯೂ ಇತ್ತು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೀಸಲಾತಿ ಹೆಚ್ಚಳಕ್ಕೆ ಶೀಘ್ರ ಸುಗ್ರೀವಾಜ್ಞೆ: ಶ್ರೀರಾಮುಲು

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ಮೀಸಲಾತಿ ಪ್ರಮಾಣ ಹೆಚ್ಚಿಸಲು ಕೈಗೊಂಡಿರುವ ನಿರ್ಧಾರವನ್ನು ಅನುಷ್ಠಾನಕ್ಕೆ ತರಲು ಶೀಘ್ರವೇ ಸುಗ್ರೀವಾಜ್ಞೆ ಹೊರಡಿಸಲಾಗುವುದು ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಎಸ್.ಸಿ ಮೀಸಲಾತಿಯನ್ನು ಶೇಕಡ 15ರಿಂದ ಶೇ 17ಕ್ಕೆ ಮತ್ತು ಎಸ್.ಟಿ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಿ ಒಂದೆರಡು ದಿನಗಳಲ್ಲಿ ಸುಗ್ರೀವಾಜ್ಞೆ ಹೊರಡಿಸಲಾಗುವುದು. ಈ ಸಂಬಂಧ ಪ್ರಕ್ರಿಯೆ ಆರಂಭಿಸಲಾಗಿದೆ' ಎಂದರು.

ಮೀಸಲಾತಿ ಹೆಚ್ಚಳದ ತೀರ್ಮಾನವನ್ನು ಸಂವಿಧಾನದ ಒಂಬತ್ತನೇ ಪರಿಚ್ಛೇದಕ್ಕೆ ಸೇರಿಸಿ ಕಾನೂನಿನ ರಕ್ಷಣೆ ನೀಡಲಾಗುವುದು ಎಂದು ಹೇಳಿದರು.

'ಸುಪ್ರೀಂಕೋರ್ಟ್, ರಕ್ಷಣಾ ಇಲಾಖೆಯಲ್ಲಿಲ್ಲ ಮೀಸಲಾತಿ'

ಕಲಬುರಗಿ: 'ಸುಪ್ರೀಂಕೋರ್ಟ್, ರಕ್ಷಣಾ ಇಲಾಖೆಯಲ್ಲಿ ಪರಿಶಿಷ್ಟರಿಗೆ ಮೀಸಲಾತಿಯೇ ಇಲ್ಲ. ಇದರಿಂದಾಗಿ ಸುಪ್ರೀಂಕೋರ್ಟ್‌ನಲ್ಲಿ ಪರಿಶಿಷ್ಟ ಸಮುದಾಯದ ನಾಲ್ವರು ನ್ಯಾಯಮೂರ್ತಿಗಳೂ ಕಾಣಸಿಗುವುದಿಲ್ಲ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಜಿಲ್ಲೆಯ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡಲು ಇಲಾಖೆ ವತಿಯಿಂದ ಆರಂಭಿಸಲಾದ ಡಾ. ಅಂಬೇಡ್ಕರ್ ಶ್ರೇಷ್ಠತಾ ಕೇಂದ್ರವನ್ನು (ಡಿಎಸಿಇ) ಸೋಮವಾರ ಉದ್ಘಾಟಿಸಿ ಮಾತನಾಡಿದರು.

'ವಿಧಾನಸೌಧದಲ್ಲಿಯೂ ಇದೇ ಪರಿಸ್ಥಿತಿ ಇದೆ. ಪರಿಶಿಷ್ಟ ಸಮುದಾಯಕ್ಕೆ ಸೇರಿದ ನಾಲ್ಕೈದು ಜನ ಕಾರ್ಯದರ್ಶಿ ಹಂತದ ಅಧಿಕಾರಿಗಳೂ ಇಲ್ಲ' ಎಂದು ಹೇಳಿದರು.

'ಕಟ್ಟೆ ಕಾಮೇಗೌಡ' ಇನ್ನಿಲ್ಲ



ಮಂಡ್ಯ: ಮಳವಳ್ಳಿ ತಾಲ್ಲೂಕು ದಾಸನದೊಡ್ಡಿ ಗ್ರಾಮದ ಕುಂದನಿ ಬೆಟ್ಟದ ಮೇಲೆ 15 ಕಟ್ಟೆ ಕಟ್ಟಿ ಪ್ರಸಿದ್ಧಿ ಪಡೆದಿದ್ದ ಪ್ರಕೃತಿ ಸಂರಕ್ಷಕ ಕಲ್ಮನೆ ಕಾಮೇಗೌಡ (84) ಸೋಮವಾರ ನಸುಕಿನಲ್ಲಿ ಅನಾರೋಗ್ಯದಿಂದ ನಿಧನರಾದರು.

ಕುರಿಗಾಹಿಯಾಗಿದ್ದ ಅವರು ಕುರಿ ಮಾರಿ ಸಂಪಾದಿಸಿದ ಹಣದಲ್ಲಿ ಬೆಟ್ಟದ ಮೇಲೆ ಕಟ್ಟೆಗಳನ್ನು ಕಟ್ಟಿಸಿದ್ದರು. ಆ ಮೂಲಕ 'ಕಟ್ಟೆ ಕಾಮೇಗೌಡ' ಎಂದೇ ಪ್ರಸಿದ್ಧಿ ಪಡೆದಿದ್ದರು. ಪ್ರತಿ ಕಟ್ಟೆಗೂ ದೇವರು ಹಾಗೂ ಮೊಮ್ಮಕ್ಕಳ ಹೆಸರಿಟ್ಟಿದ್ದರು. ಹಲವು ವರ್ಷಗಳಿಂದಲೂ ಸಂರಕ್ಷಿಸಿ ಬೆಟ್ಟದ ತಟದಲ್ಲಿ ಹಸಿರು ಪರಿಸರವಿರುವಂತೆ ನೋಡಿಕೊಂಡಿದ್ದರು. ಬೆಟ್ಟದ ಮಧ್ಯಭಾಗ, ತಟದಲ್ಲಿ ನೂರಾರು ಸಸಿ ನೆಟ್ಟು ಬೆಳೆಸಿದ್ದರು.

ಕಾಮೇಗೌಡರ ಪ್ರಕೃತಿ ಸಂರಕ್ಷಣೆ ಪ್ರಧಾನಿ ನರೇಂದ್ರ ಮೋದಿ ಅವರ ಗಮನ ಸೆಳೆದಿತ್ತು. 2020ರ 'ಮನ್ ಕಿ ಬಾತ್' ಸರಣಿಯಲ್ಲಿ ಕಾಮೇಗೌಡರ ಸೇವೆಯನ್ನು ಕೊಂಡಾಡಿದ್ದರು. ಕ್ರಿಕೆಟಿಗ ವಿವಿಎಸ್ ಲಕ್ಷ್ಮಣ್ ಸಹ ಅವರ ಸೇವೆ ಉಲ್ಲೇಖಿಸಿ ಟ್ವೀಟ್ ಮಾಡಿದ್ದರು.

ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ರಮಾಗೋವಿಂದ ಪ್ರಶಸ್ತಿ ಸೇರಿದಂತೆ ಹಲವು ಪ್ರತಿಷ್ಠಿತ ಪ್ರಶಸ್ತಿಗಳು ಸಂದಿದ್ದವು. ಅವರಿಗೆ ಪತ್ನಿ, ಇಬ್ಬರು ಪುತ್ರರಿದ್ದಾರೆ. ಮಧ್ಯಾಹ್ನ ಕಾಮೇಗೌಡರ ಜಮೀನಿನಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಒಬ್ಬರ ಶವ ಪತ್ತೆ: ಮತ್ತಿಬ್ಬರಿಗಾಗಿ ಶೋಧ

ತುಮಕೂರು: ಗುಬ್ಬಿ ತಾಲ್ಲೂಕಿನ ಕಡಬ ಹೋಬಳಿ ಕಲ್ಲೂರು ಕೆರೆ ಕೋಡಿ ನೀರಿನಲ್ಲಿ ಕೊಚ್ಚಿ ಹೋಗಿದ್ದ ಇಬ್ಬರ ಪೈಕಿ ಒಬ್ಬರ ಶವ ಸೋಮವಾರ ಪತ್ತೆಯಾಗಿದೆ.

ಕಲ್ಲೂರು ಗ್ರಾಮದ ನಟರಾಜು (32) ಅವರ ಶವ ಬಿಳಿನಂದಿ ಗ್ರಾಮದ ಬಳಿ ಪತ್ತೆಯಾಗಿದ್ದು, ಅವರೊಂದಿಗೆ ಕೊಚ್ಚಿ ಹೋಗಿದ್ದ ಹನುಮಂತಯ್ಯ ಅವರಿಗಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಶೋಧ ಕಾರ್ಯ ನಡೆಸಿದ್ದಾರೆ.

ಪಾವಗಡ ತಾಲ್ಲೂಕಿನ ಪಳವಳ್ಳಿ ಗ್ರಾಮದ ಸಮೀಪ ರಸ್ತೆ ಮೇಲೆ ಹರಿಯುತ್ತಿದ್ದ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದ ಗಂಗಾಧರ ಎಂಬುವರು ಈವರೆಗೂ ಪತ್ತೆಯಾಗಿಲ್ಲ. ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರಿನ ಕೆಂಕರೆ ಗ್ರಾಮದ ಕೆರೆ ಏರಿ ಒಡೆದು 200 ಎಕರೆಗೂ ಹೆಚ್ಚಿನ ಬೆಳೆ ನಾಶವಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.70	54,311	52,115
ಹಾರಂಗಿ	2,859	2,854.03	1,458	528
ಕಬಿನಿ	2284	2,283.73	6,990	800
ಹೇಮಾವತಿ	2,922	2,921.95	12,473	12,972
ಲಿಂಗನಮಕ್ಕಿ	1,819	1,814	3,417	5,599
ಸೂಪಾ (ಮೀ)	564	553.75	2,673	1,829
ಮಾಣಿ	595	589	184	747
ತುಂಗಭದ್ರಾ	1,633	1,632.64	48,030	59,513
ಮಲಪ್ರಭಾ	2079.5	2,079.50	3,394	3,394
ಘಟಪ್ರಭಾ	2175	2,175	1,806	1,806
ಭದ್ರಾ	186	185	5,007	8,641
ಆಲಮಟ್ಟಿ (ಮೀ)	519.6	519.49	82,451	82,451
ನಾರಾಯಣಪುರ (ಮೀ)	492.25	491.76	90,000	97,100

* ನೆಲಮಟ್ಟದಿಂದ

ಕಾಂಗ್ರೆಸ್ ಚುನಾವಣೆ: ರಾಜ್ಯದಲ್ಲಿ 501 ಮತ ಚಲಾವಣೆ

ಒಂದನೇ ಪುಟದಿಂದ...

ಕಾಂಗ್ರೆಸ್ ಮೂಲಗಳ ಪ್ರಕಾರ, ವಿದೇಶ ಪ್ರವಾಸದಲ್ಲಿರುವ ನಿವೇದಿತ್ ಆಳ್ವ ಮತ್ತು ಪ್ರಶಾಂತ್ ದೇಶಪಾಂಡೆ ಮತ ಚಲಾಯಿಸಿಲ್ಲ.

ಕೆಪಿಸಿಸಿ ಕಚೇರಿ ಹಾಗೂ ಬಳ್ಳಾರಿಯ ಸಂಗನಕಲ್ಲು ಬಳಿ ಭಾರತ್ ಜೋಡೊ ಪಾದಯಾತ್ರೆಯ ಕ್ಯಾಂಪ್‌ನಲ್ಲಿ ಮತಗಟ್ಟೆಗಳನ್ನು ತೆರೆಯಲಾಗಿತ್ತು. ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಸೇರಿದಂತೆ ರಾಜ್ಯದ 495 ಮಂದಿ ಕೆಪಿಸಿಸಿ ಕಚೇರಿ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ಸಂಸದ ಡಿ.ಕೆ. ಸುರೇಶ್, ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ಶಾಸಕ ಬಿ. ನಾಗೇಂದ್ರ ಮತ್ತು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಜೆ.ಎಸ್. ಆಂಜನೇಯುಲು ಕೂಡ ಸಂಗನಕಲ್ಲು ಕ್ಯಾಂಪ್‌ನಲ್ಲಿ ಮತ ಚಲಾವಣೆ ಮಾಡಿದರು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸೇರಿದಂತೆ ಹೊರರಾಜ್ಯಗಳ 40 ಮಂದಿ ಭಾರತ್ ಜೋಡೊ ಯಾತ್ರಿಗಳು ಸಂಗನಕಲ್ಲು ಕ್ಯಾಂಪ್‌ನಲ್ಲಿ ಮತ ಚಲಾಯಿಸಿದರು.

ಹೊರ ರಾಜ್ಯಗಳ ಚುನಾವಣಾಧಿಕಾರಿಗಳಾಗಿ ನಿಯುಕ್ತಿಗೊಂಡಿರುವ ಶಾಸಕ ಜಿ. ಪರಮೇಶ್ವರ ಮತ್ತು ರಾಜ್ಯಸಭಾ ಜಿ.ಸಿ. ಚಂದ್ರಶೇಖರ್ ತಾವು ಕಾರ್ಯನಿರ್ವಹಿಸುತ್ತಿದ್ದ ಸ್ಥಳಗಳಿಂದಲೇ ಮತದಾನ ಮಾಡಿದರು.





ಬಳ್ಳಾರಿ ಸಮೀಪದ ಸಂಗನಕಲ್ಲು ಎಂಬಲ್ಲಿರುವ 'ಭಾರತ್ ಜೋಡೊ ಯಾತ್ರೆ'ಯ ಶಿಬಿರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸರತಿ ಸಾಲಿನಲ್ಲಿ ನಿಂತು ಮತಚಲಾಯಿಸಿದರು –ಪಿಟಿಐ ಚಿತ್ರ (ಎಡಚಿತ್ರ) ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿನ ಕೆಪಿಸಿಸಿ ಕಚೇರಿ ಮತಗಟ್ಟೆಯಲ್ಲಿ ಮತ ಚಲಾಯಿಸಿದರು –ಪ್ರಜಾವಾಣಿ ಚಿತ್ರ

ಬುಧವಾರ ಮತ ಎಣಿಕೆ ನಡೆದು, ಫಲಿತಾಂಶ ಪ್ರಕಟವಾಗಲಿದೆ. ಅಲ್ಲಿಯವರೆಗೂ ಚುನಾವಣೆ ಕುರಿತು ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ
ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ ಸ್ಥಾನದ ಅಭ್ಯರ್ಥಿ


ಭರ್ಜರಿ ಗೆಲುವಿನ ವಿಶ್ವಾಸ: 'ಮಲ್ಲಿಕಾರ್ಜುನ ಖರ್ಗೆ ಅವರು 50 ವರ್ಷಗಳಿಂದ ಪಕ್ಷಕ್ಕಾಗಿ ದುಡಿದಿದ್ದಾರೆ. ರಾಜ್ಯದ ಎಲ್ಲರೂ ಅವರ ಪರವಾಗಿ ಮತ ಚಲಾಯಿಸುವ ಭರವಸೆಯಿದೆ. ಖರ್ಗೆ ಅವರು ಭಾರಿ ಅಂತರದ ಗೆಲುವನ್ನು ಸಾಧಿಸುವ ವಿಶ್ವಾಸವಿದೆ' ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

ಬಿಜೆಪಿ ಟೀಕೆ ಬಗ್ಗೆ ಕೇಳಿದಾಗ, 'ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವವೇ ಇಲ್ಲ. ಯಾವತ್ತಾದರೂ ಆ ಪಕ್ಷದ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆದಿದೆಯೆ? ಬಿಜೆಪಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ. ಬಸವರಾಜ ಬೊಮ್ಮಾಯಿ ಅವರನ್ನು ಪ್ರಜಾತಾಂತ್ರಿಕವಾಗಿ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಗಿತ್ತೆ? ನಳಿನ್ ಕುಮಾರ್ ಕಟೀಲ್ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತೆ' ಎಂದು ಪ್ರಶ್ನಿಸಿದರು.

ತರೂರ್‌ಗೆ ಶುಭಾಶಯ ಹೇಳಿದ ಖರ್ಗೆ: ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಪ್ರತಿಸ್ಪರ್ಧಿ ಶಶಿ ತರೂರ್ ಅವರಿಗೆ ಸೋಮವಾರ ಬೆಳಿಗ್ಗೆ ದೂರವಾಣಿ ಕರೆಮಾಡಿ ಶುಭಾಶಯ ಹೇಳಿದರು.

ಚಿಮಣಿ ಏರಿ ಆತ್ಮಹತ್ಯೆಗೆ ಯತ್ನಿಸಿದ ಆರ್‌ಟಿಪಿಎಸ್ ಕಾರ್ಮಿಕ!

ಪ್ರಜಾವಾಣಿ ವಾರ್ತೆ



ಸೂಗಪ್ಪ

ಶಕ್ತಿನಗರ (ರಾಯಚೂರು ಜಿಲ್ಲೆ): ಗುತ್ತಿಗೆ ಕಾರ್ಮಿಕರಿಗೆ ನ್ಯಾಯಬದ್ಧವಾಗಿ ದೊರೆಯಬೇಕಾದ ಸೌಲಭ್ಯ ಒದಗಿಸಬೇಕು ಎಂದು ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಆರ್‌ಟಿಪಿಎಸ್) ಗುತ್ತಿಗೆ ನೌಕರ ಸೂಗಪ್ಪ ಅವರು ಸೋಮವಾರ ಭಾರಿ ಎತ್ತರವಿರುವ ಚಿಮಣಿ ಏರಿ ಆತ್ಮಹತ್ಯೆಗೆ ಯತ್ನಿಸಿದ್ದರು.

'ವೇತನ ಸೌಲಭ್ಯದ ಕುರಿತು ಪರಿಶೀಲಿಸಿ ನ್ಯಾಯ ಒದಗಿಸಲಾಗುವುದು' ಎಂದು ಆರ್‌ಟಿಪಿಎಸ್ ಕಾರ್ಯನಿರ್ವಾಹಕ ಅಧಿಕಾರಿ ಶಶಿಕಾಂತ್ ಲಿಖಿತ ಭರವಸೆ ನೀಡಿದರು. ಬಳಿಕ ಅಧಿಕಾರಿಗಳು ಮತ್ತು ಕಾರ್ಮಿಕ ಮುಖಂಡರು ಮನವೊಲಿಸಿದ್ದರಿಂದ ಸೂಗಪ್ಪ ಕೆಳಗಿಳಿದರು.

ಸುಮಾರು ನಾಲ್ಕು ತಾಸು ಚಿಮಣಿ ಮೇಲೆ ಇದ್ದರು. ಅವರ ಬೇಡಿಕೆ ಬೆಂಬಲಿಸಿ ಗುತ್ತಿಗೆ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಸೂಗಪ್ಪ ಅವರು ಬೇಡಿಕೆ ಕುರಿತು ಎಂಟು ನಿಮಿಷ ಮಾತನಾಡಿದ ವಿಡಿಯೊವೊಂದನ್ನು ಇನ್‌ಸ್ಟಾಗ್ರಾಂನಲ್ಲಿ ಹರಿಬಿಟ್ಟಿದ್ದರು.


'ಆರ್‌ಟಿಪಿಎಸ್ ನಿರ್ಮಾಣಕ್ಕೆ ಭೂಮಿ ನೀಡಿದವರನ್ನು ಗುತ್ತಿಗೆ ನೌಕರಿಗೆ ಸೇರಿಸಿಕೊಂಡಿದ್ದಾರೆ. ಸರಿಯಾದ ವೇತನ ಕೊಡುತ್ತಿಲ್ಲ. ವಿದ್ಯುತ್ ಸ್ಥಾವರದಲ್ಲಿ ಕೆಲಸ ಮಾಡುವವರೆಲ್ಲ ಒಂದು ಕುಟುಂಬದ ಸದಸ್ಯರಿದ್ದಂತೆ. ಮನೆಯಲ್ಲಿ ಸಿಹಿ ಮಾಡಿದಾಗ ಎಲ್ಲರೂ ಹಂಚಿಕೊಂಡು ತಿನ್ನುತ್ತಾರೆ. ಆದರೆ, ಆರ್‌ಟಿಪಿಎಸ್‌ನಲ್ಲಿ ಅಧಿಕಾರಿಗಳಿಗೆ ಮಾತ್ರ ಸಿಹಿ ಸಿಗುತ್ತಿದೆ. ಗುತ್ತಿಗೆ ಕಾರ್ಮಿಕರಿಗೂ 'ಸಿಹಿ' ಕೊಡಿ. ನ್ಯಾಯಬದ್ಧ ವೇತನ ನೀಡಿ' ಎಂದು ಸೂಗಪ್ಪ ಅಳಲು ತೋಡಿಕೊಂಡಿದ್ದಾರೆ.

ಐವರಿಗೆ ಕಾಂತಾವರ ಕನ್ನಡ ಸಂಘದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕಾಂತಾವರ (ಉಡುಪಿ ಜಿಲ್ಲೆ): ಕಾಂತಾವರ ಕನ್ನಡ ಸಂಘದ ಐದು ಪ್ರಶಸ್ತಿಗಳಿಗೆ ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಬಾಲಕೃಷ್ಣ ಆಚಾರ್ ಮತ್ತು ಅವರ ಪತ್ನಿ ವಾಣಿ ಬಿ.ಆಚಾರ್ ಅವರು ಸ್ಥಾಪಿಸಿರುವ ದತ್ತಿನಿಧಿಯಿಂದ ಕೊಡಲಾಗುವ 'ಶ್ರೇಷ್ಠ ಶಿಕ್ಷಕ ಸೌರಭ ಪ್ರಶಸ್ತಿ'ಯನ್ನು ಯಕ್ಷಗಾನದ ಅರ್ಥದಾರಿ, ಪ್ರಸಂಗಕರ್ತ ಶ್ರೀಧರ ಡಿ.ಎಸ್ ಅವರಿಗೆ, ಹಿರಿಯ ರಂಗಕರ್ಮಿ ಶ್ರೀಪತಿ ಮಂಜನಬೈಲ್ ಅವರು ಸ್ಥಾಪಿಸಿರುವ ದತ್ತಿನಿಧಿಯಿಂದ ಕೊಡಲಾಗುವ 'ಮಂಜನಬೈಲ್ ರಂಗ ಸನ್ಮಾನ್' ಪ್ರಶಸ್ತಿಯನ್ನು ಧಾರವಾಡದ ಹಿರಿಯ ರಂಗಕರ್ಮಿ ಹರ್ಷವರ್ಧನ ಹನುಮಂತರಾವ್ ಡಂಬಳ ಅವರಿಗೆ ನೀಡಲು ನಿರ್ಣಯಿಸಲಾಗಿದೆ.



ಶ್ರೀಧರ ಡಿ.ಎಸ್



ಹರ್ಷವರ್ಧನ



ಕೆ. ಚಂದ್ರಮೌಳಿ



ಡಾ.ಸುಭಾಷ್ ರಾಜಮಾನೆ



ಪುಂಡಿಕಾಯ್ ಗಣಪಯ್ಯ ಭಟ್

ಡಾ.ನಾ. ಮೊಗಸಾಲೆ ಕುಟುಂಬದವರು ಸ್ಥಾಪಿಸಿದ ದತ್ತಿನಿಧಿಯಿಂದ ಕೊಡಲಾಗುವ 'ಕಾಂತಾವರ ಸಾಹಿತ್ಯ ಪ್ರಶಸ್ತಿ'ಯನ್ನು ಮೂಡುಬಿದಿರೆಯ ಸಂಶೋಧಕ ಡಾ. ಪುಂಡಿಕಾಯ್ ಗಣಪಯ್ಯ ಭಟ್ ಅವರಿಗೆ, ಸರೋಜಿನಿ ನಾಗಪ್ಪಯ್ಯ ಈಶ್ವರ ಮಂಗಲ ಅವರ ದತ್ತಿನಿಧಿಯ 'ಕಾಂತಾವರ ಸಾಹಿತ್ಯ ವಿಮರ್ಶಾ' ಪ್ರಶಸ್ತಿಯನ್ನು ಸಾಹಿತ್ಯ ವಿಮರ್ಶೆ, ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಡಾ.ಸುಭಾಷ್ ರಾಜಮಾನೆ ಅವರಿಗೆ ನೀಡಲಾಗಿದೆ.

ಪ್ರಶಸ್ತಿಗಳು ತಲಾ ₹10 ಸಾವಿರ ಗೌರವ ಸಂಭಾವನೆ, ತಾಮ್ರ ಪತ್ರ ಮತ್ತು ಸನ್ಮಾನ ಒಳಗೊಂಡಿವೆ.

ಬೆಂಗಳೂರಿನ ಕೆ. ಚಂದ್ರಮೌಳಿ ಅವರಿಗೆ ಸಂಘದ ಪ್ರತಿಷ್ಠಿತ 'ವಾರ್ಷಿಕ ಗೌರವ ಪ್ರಶಸ್ತಿ'ಯನ್ನು ನೀಡಲಾಗುವುದು.

ನ. 1ರಂದು ನಡೆಯುವ 'ಕಾಂತಾವರ ಉತ್ಸವ'ದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸದಾನಂದ ನಾರಾವಿ ತಿಳಿಸಿದ್ದಾರೆ.

ಹೊಸ ಶಾಲೆ ಆರಂಭಕ್ಕೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023–24ನೇ ಸಾಲಿನಿಂದ ಹೊಸದಾಗಿ ಖಾಸಗಿ ಶಾಲೆಗಳನ್ನು ಆರಂಭಿಸಲು ಇಚ್ಛಿಸುವ ಶಿಕ್ಷಣ ಸಂಸ್ಥೆಗಳು ಡಿ.15ರ ಒಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢಶಾಲೆಗಳನ್ನು ಆರಂಭಿಸಲು ನೋಂದಣಿ ಬಯಸುವ ಸಂಸ್ಥೆಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಬೇಕು. ನ.4ರಿಂದ ಅರ್ಜಿ ಸಲ್ಲಿಕೆಯ ಪ್ರಕ್ರಿಯೆಗಳು ಆರಂಭವಾಗಲಿವೆ ಎಂದು ಆಯುಕ್ತರು ತಿಳಿಸಿದ್ದಾರೆ.

ಮುರುಘಾ ಶ್ರೀ ವಿರುದ್ಧದ ಪೋಕ್ಸೊ ಪ್ರಕರಣ

ದೂರುದಾರರ ಹೇಳಿಕೆ ಪಡೆದ ಪೊಲೀಸರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಲೈಂಗಿಕ ಕಿರುಕುಳ ದೂರು ನೀಡಿರುವ ಇಬ್ಬರು ಸಂತ್ರಸ್ತ ವಿದ್ಯಾರ್ಥಿನಿಯರು ಹಾಗೂ ಅವರ ತಾಯಿಯ ಹೇಳಿಕೆಯನ್ನು ಚಿತ್ರದುರ್ಗದ ತನಿಖಾ ತಂಡ ಮೈಸೂರಿನಲ್ಲಿ ಸೋಮವಾರ ಪಡೆದಿದೆ.


ತನಿಖಾಧಿಕಾರಿ ಬಾಲಚಂದ್ರ ನಾಯ್ಕ್ ನೇತೃತ್ವದ ತಂಡ ಮೈಸೂರಿಗೆ ತೆರಳಿ, ಒಡನಾಡಿ ಸೇವಾ ಸಂಸ್ಥೆಯಲ್ಲಿ ಆಶ್ರಯ ಪಡೆದಿರುವ ದೂರುದಾರ ಮಹಿಳೆ ಹಾಗೂ 14 ವರ್ಷದ ವಿದ್ಯಾರ್ಥಿನಿಯ ಹೇಳಿಕೆ ಪಡೆದಿದೆ. ಮತ್ತೊಬ್ಬ ಬಾಲಕಿಯ ಹೇಳಿಕೆಯನ್ನು ಸಂಬಂಧಿಕರ ಮನೆಯಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ದೂರಿನಲ್ಲಿ ಉಲ್ಲೇಖವಾದ ಇನ್ನೂ ಇಬ್ಬರು ಸಂತ್ರಸ್ತ ವಿದ್ಯಾರ್ಥಿನಿಯರ ಪೈಕಿ ಒಬ್ಬ ಸಂತ್ರಸ್ತೆ ಹಾಗೂ ಆಕೆಯ ತಾಯಿಯ ಹೇಳಿಕೆಯನ್ನು ಸೋಮವಾರ ಚಿತ್ರದುರ್ಗದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ. ಈ ಪೈಕಿ ಮತ್ತೊಬ್ಬ ಸಂತ್ರಸ್ತೆ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜೈಲಿಗೆ ಏಕಾಂತಯ್ಯ ಭೇಟಿ

ಶಿವಮೂರ್ತಿ ಮುರುಘಾ ಶರಣರ ಪೀಠತ್ಯಾಗಕ್ಕೆ ಒತ್ತಾಯಿಸುತ್ತಿರುವ ಮಾಜಿ ಸಚಿವ ಎಚ್.ಏಕಾಂತಯ್ಯ ಅವರು ಸೋಮವಾರ ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿದ್ದರು.

'ಬಸವಪ್ರಭು ಸ್ವಾಮೀಜಿ ಅವರನ್ನು ಮಠದ ಉಸ್ತುವಾರಿಗೆ ನೇಮಕ ಮಾಡಿದ ಪ್ರಕ್ರಿಯೆಗೆ ಸಂಬಂಧಿಸಿದ ಕೆಲ ದಾಖಲೆ ಕೇಳಲು ಕಾರಾಗೃಹಕ್ಕೆ ತೆರಳಿದ್ದೆ. ಅರ್ಜಿ ಸಲ್ಲಿಸಿದರೆ ದಾಖಲೆ ಒದಗಿಸುವುದಾಗಿ ಕಾರಾಗೃಹದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಶಿವಮೂರ್ತಿ ಮುರುಘಾ ಶರಣರನ್ನು ಭೇಟಿ ಮಾಡಿಲ್ಲ' ಎಂದು ಏಕಾಂತಯ್ಯ ಸ್ಪಷ್ಟನೆ ನೀಡಿದ್ದಾರೆ.



ಶಿವಮೂರ್ತಿ ಮುರುಘಾ ಶರಣರು

ನಿರೀಕ್ಷಣಾ ಜಾಮೀನಿಗೆ ಅರ್ಜಿ: ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಎರಡನೇ ಪ್ರಕರಣದ ಇಬ್ಬರು ಆರೋಪಿಗಳಾದ ಮಹಾಲಿಂಗ ಹಾಗೂ ಕರಿಬಸಪ್ಪ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಕೀಲ ಪ್ರತಾಪ್ ಜೋಗಿ ಸೋಮವಾರ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸೋಮವಾರ ಸಲ್ಲಿಸಿದ್ದಾರೆ.

ದೆಹಲಿ ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮ ಆರೋಪ: ಎಎಪಿ ಕಾರ್ಯಕರ್ತರ ಪ್ರತಿಭಟನೆ

ಸಿಸೋಡಿಯಾಗೆ ಸಿಬಿಐ ತನಿಖೆ ಬಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ಸಿಬಿಐ ಸೋಮವಾರ ತನಿಖೆಗೆ ಒಳಪಡಿಸಿದೆ. ದೆಹಲಿಯ ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮ ಆರೋಪದ ಪ್ರಕರಣದಲ್ಲಿ ಈ ತನಿಖೆ ನಡೆದಿದೆ. ತಮ್ಮ ಮೇಲೆ ಹೊರಿಸಲಾಗಿರುವ ಆರೋಪ ಹುಸಿ ಎಂದು ಸಿಸೋಡಿಯಾ ಹೇಳಿದ್ದಾರೆ. ವಿಧಾನಸಭೆಗೆ ಚುನಾವಣೆ ನಡೆಯಲಿರುವ ಗುಜರಾತ್‌ನಲ್ಲಿ ಎಎಪಿಯ ಜನಪ್ರಿಯತೆ ಕಂಡು ಬಿಜೆಪಿ ಬೆದರಿದೆ. ಹಾಗಾಗಿ ಈ ತನಿಖೆ ನಡೆಯುತ್ತಿದೆ ಎಂದಿದ್ದಾರೆ.

ಸಿಸೋಡಿಯಾ ಅವರು ಬೆಳಿಗ್ಗೆ 11.15ರ ಹೊತ್ತಿಗೆ ಸಿಬಿಐ ಕೇಂದ್ರ ಕಚೇರಿ ತಲುಪಿದರು. ಅವರನ್ನು ಸತತ ಒಂಬತ್ತು ತಾಸು ತನಿಖೆಗೆ ಒಳಪಡಿಸಲಾಗಿದೆ. ವೈಎಸ್‌ಆರ್ ಕಾಂಗ್ರೆಸ್ ಸಂಸದ ಮಾಗುಂಟ ಶ್ರೀನಿವಾಸುಲು ರೆಡ್ಡಿ ಅವರ ಮಗ ರಾಘವ ರೆಡ್ಡಿ ಅವರನ್ನೂ ಸಿಬಿಐ ತನಿಖೆಗೆ ಒಳಪಡಿಸಿದೆ.

ಸಿಬಿಐ ಕಚೇರಿಗೆ ಹೊರಡುವ ಮೊದಲು ಸಿಸೋಡಿಯಾ ಅವರು ತಾಯಿಯ ಆಶೀರ್ವಾದ ಪಡೆದರು. ಸಿಬಿಐ ಕಚೇರಿಗೆ ಮೆರವಣಿಗೆಯಲ್ಲಿ ಹೋದರು. ಅವರ ಜತೆಗೆ ಎಎಪಿ ಮುಖಂಡರು ಮತ್ತು ಕಾರ್ಯಕರ್ತರು ಇದ್ದರು. ದೇಶಭಕ್ತಿಯ ಗೀತೆಗಳನ್ನು ಮೆರವಣಿಗೆಯ ಉದ್ದಕ್ಕೂ ಹಾಡಲಾಯಿತು.

ಮಾರ್ಗ ಮಧ್ಯದಲ್ಲಿ ಎರಡು ಬಾರಿ ನಿಂತ ಸಿಸೋಡಿಯಾ ಅವರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಬಂಧನದ ಭಯ ತಮಗೆ ಇಲ್ಲ ಎಂದೂ ಅವರು ಈ ಸಂದರ್ಭದಲ್ಲಿ ಹೇಳಿದರು. ಮಹಾತ್ಮ ಗಾಂಧಿ ಸಮಾಧಿ ಇರುವ ರಾಜ್‌ಘಾಟ್‌ಗೆ ಹೋಗಿ, ನಮನ ಸಲ್ಲಿಸಿದರು.



ಸಿಸೋಡಿಯಾ ಅವರು ಸಿಬಿಐ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿದರು ಪಿಟಿಐ ಚಿತ್ರ

> **ಸಿಸೋಡಿಯಾರನ್ನು ಡಿ.8ರವರೆಗೆ ಜೈಲಲ್ಲಿ ಇರಿಸಲು ಬಿಜೆಪಿ ಬಯಸಿದೆ. ಆದರೆ, ಗುಜರಾತ್‌ನಲ್ಲಿ ಎಎಪಿ ಗೆದ್ದರೆ ಜೈಲಿನ ಬೀಗ ಮುರಿಯುತ್ತದೆ, ಅವರು ಹೊರಕ್ಕೆ ಬರುತ್ತಾರೆ**
> **ಅರವಿಂದ ಕೇಜ್ರಿವಾಲ್,** ಎಎಪಿ ಮುಖ್ಯಸ್ಥ

> **ಭ್ರಷ್ಟಾಚಾರ ಆರೋಪ ಹೊತ್ತ ಸಚಿವರನ್ನು ಭಗತ್ ಸಿಂಗ್ ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರಿಗೆ ಹೋಲಿಸುವ ಮೂಲಕ ಅವರನ್ನು ಎಎಪಿ ಅವಮಾನಿಸಿದೆ**
> **ಮನೋಜ್ ತಿವಾರಿ,** ಬಿಜೆಪಿ ಸಂಸದ

ಎಎಪಿ ಭ್ರಷ್ಟ ಪಕ್ಷ: ಬಿಜೆಪಿ

ಎಎಪಿ ಅತ್ಯಂತ ಭ್ರಷ್ಟ ಪಕ್ಷ ಎಂದು ಬಿಜೆಪಿ ಆರೋಪಿಸಿದೆ.

ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪ್ರತಿಜ್ಞೆಯೊಂದಿಗೆ ಈ ಪಕ್ಷವನ್ನು ಸ್ಥಾಪಿಸಲಾಗಿತ್ತು. ಆದರೆ, ಈಗ ಅ ಪಕ್ಷವೇ ಅತಿ ಹೆಚ್ಚು ಭ್ರಷ್ಟ ಪಕ್ಷವಾಗಿದೆ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಹೇಳಿದ್ದಾರೆ.

'ಎಎಪಿ ಅತಿದೊಡ್ಡ ಕುತಂತ್ರಿ ಪಕ್ಷ. ಸಿಬಿಐ ಕಚೇರಿಗೆ ಹೋಗುವಾಗ ಸಿಸೋಡಿಯಾ ಅವರು ಭಾರಿ ಘೋಷಣೆಗಳನ್ನು ಕೂಗಿದ್ದಾರೆ. ಅದನ್ನು ನೋಡಿದರೆ ಅವರ ಪಕ್ಷಕ್ಕೆ ಭ್ರಷ್ಟಾಚಾರದಲ್ಲಿ ವಿಶ್ವಕಪ್ ದೊರೆತಂತಿದೆ' ಎಂದಿದ್ದಾರೆ.

ಸಂಸದ ವಶಕ್ಕೆ

ಸಿಬಿಐ ಕಚೇರಿಯ ಹೊರಗೆ ಪ್ರತಿಭಟನೆ ನಡೆಸುವ ಮೂಲಕ ನಿಷೇಧಾಜ್ಞೆ ಉಲ್ಲಂಘಿಸಿದ ಆರೋಪದಲ್ಲಿ ಎಎಪಿ ಸಂಸದ ಸಂಜಯ ಸಿಂಗ್ ಮತ್ತು ಇತರ ಪ್ರತಿಭಟನಕಾರರನ್ನು ದೆಹಲಿ ಪೊಲೀಸರು ಸೋಮವಾರ ವಶಕ್ಕೆ ಪಡೆದಿದ್ದಾರೆ. ಸಿಸೋಡಿಯಾ ಅವರನ್ನು ತನಿಖೆಗೆ ಒಳಪಡಿಸಿದ್ದನ್ನು ಖಂಡಿಸಿ ಈ ಪ್ರತಿಭಟನೆ ನಡೆದಿದೆ.

ಪಕ್ಷ ತೊರೆಯಲು ಒತ್ತಡ: ಸಿಬಿಐ ಕಚೇರಿಯಿಂದ ಹೊರಬಂದ ಬಳಿಕ ಮಾತನಾಡಿದ ಸಿಸೋಡಿಯಾ, ಎಎಪಿ ತೊರೆಯುವಂತೆ ಸಿಬಿಐ ನನಗೆ ಬೆದರಿಕೆ ಒಡ್ಡಿತ್ತು ಎಂದು ಆರೋಪಿಸಿದರು. ಆದರೆ, ಈ ಆರೋಪವನ್ನು ಸಿಬಿಐ ತಳ್ಳಿಹಾಕಿದೆ. ಎಫ್‌ಐಆರ್‌ನಲ್ಲಿರುವ ಆರೋಪಕ್ಕೆ ಅನುಗುಣವಾಗಿ ಅವರ ವಿಚಾರಣೆಯನ್ನು ಕಾನೂನು ಪ್ರಕಾರ ನಡೆಸಲಾಗಿದೆ ಎಂದಿದೆ.

ವಿವಾದಕ್ಕೆ ಕಾರಣವಾಗಿದ್ದ 2021–22ರ ಅಬಕಾರಿ ನೀತಿಯನ್ನು ದೆಹಲಿ ಸರ್ಕಾರವು ಈಗಾಗಲೇ ಹಿಂದಕ್ಕೆ ಪಡೆದಿದೆ.

ಆಗಸ್ಟ್ 17ರಂದು ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ. ಎಎಪಿ ಕಾರ್ಯಕರ್ತ ವಿಜಯ ನಾಯರ್ ಎಂಬವರನ್ನು ಬಂಧಿಸಲಾಗಿದೆ.

ಬಾಲಕಿಯ ಮದುವೆ ಊರ್ಜಿತ: 'ಸುಪ್ರೀಂ'ನಲ್ಲಿ ಆದೇಶ ಪ್ರಶ್ನಿಸಿದ ಎನ್‌ಸಿಪಿಸಿಆರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಸ್ಲಿಂ ವೈಯಕ್ತಿಕ ಕಾನೂನು ಆಧಾರದ ಮೇಲೆ 16 ವರ್ಷ ವಯಸ್ಸಿನ ಬಾಲಕಿಯ ಮದುವೆಯನ್ನು ಮಾನ್ಯ ಮಾಡಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಅರ್ಜಿ ಸಲ್ಲಿಸಿದೆ. ಈ ಅರ್ಜಿಯನ್ನು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

'ಪ್ರಿನ್ಸಿಪಲ್ಸ್ ಆಫ್ ಮೊಹಮ್ಮದ್ದನ್ ಲಾ' ಎಂಬ ಪುಸ್ತಕವನ್ನು ಉಲ್ಲೇಖಿಸಿ ಬಾಲಕಿಯ ಮದುವೆಯನ್ನು ಮಾನ್ಯ ಮಾಡಿ ಜೂನ್ 13ರಂದು ಹೈಕೋರ್ಟ್ ಆದೇಶ ನೀಡಿತ್ತು.

ಇದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿರುವ ಎನ್‌ಸಿಪಿಸಿಆರ್, ಮಕ್ಕಳನ್ನು ಲೈಂಗಿಕ ಅಪರಾಧದಿಂದ ರಕ್ಷಿಸುವ ಕಾಯ್ದೆ ನೀಡಿರುವ ನಿಬಂಧನೆಗಳ ಹೊರತಾಗಿಯೂ 15 ವರ್ಷ ಅಥವಾ ಪ್ರೌಢಾವಸ್ಥೆಗೆ ಬಂದಿರುವ ಮುಸ್ಲಿಂ ಹುಡುಗಿ ಮದುವೆ ಆಗಲು ಅಡ್ಡಿ ಇಲ್ಲ ಎಂಬ ಅಂಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ ಎಂದಿದೆ.

ಎನ್‌ಸಿಪಿಸಿಆರ್ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಈ ಅರ್ಜಿಯನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದರು. ಮುಸ್ಲಿಂ ದಂಪತಿಗೆ ನೀಡಿರುವ ರಕ್ಷಣೆ ವಿರುದ್ಧವಾಗಿ ತಾವು ಇಲ್ಲ. ಆದರೆ ಕಾನೂನು ನಿಬಂಧನೆಗೆ ವಿರುದ್ಧವಾಗಿ ಕೋರ್ಟ್ ಆದೇಶ ನೀಡಿರುವುದರಿಂದ ಇದೊಂದು ಮುಖ್ಯ ಸಮಸ್ಯೆಯಾಗಿದೆ ಎಂದರು.

ಬಾಲ್ಯವಿವಾಹ ನಿಷೇಧ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ (ಪೋಸ್ಕೊ) ಮೇಲೆ ಈ ಆದೇಶವು ಗಂಭೀರ ಪರಿಣಾಮ ಬೀರುತ್ತದೆ ಎಂದ ಮೆಹ್ತಾ ಅವರು, ಹೈಕೋರ್ಟ್ ಆದೇಶದಲ್ಲಿರುವ ಎರಡು ಪ್ಯಾರಾಗಳಿಗೆ ತಡೆ ನೀಡುವಂತೆ ಅವರು ಕೋರ್ಟ್‌ಗೆ ಮನವಿ ಮಾಡಿದರು.

ಈ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರ ಮತ್ತು ಸಂಬಂಧಪಟ್ಟ ಇತರರಿಗೆ ನೋಟಿಸ್ ನೀಡುವುದಾಗಿ ಮತ್ತು ಹಿರಿಯ ವಕೀಲ ರಾಜಶೇಖರ್ ರಾವ್ ಅವರನ್ನು ಈ ಮೊಕದ್ದಮೆಯಲ್ಲಿ ಅಮಿಕಸ್ ಕ್ಯೂರಿಯನ್ನಾಗಿ ನೇಮಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ. ಜೊತೆಗೆ, ನವೆಂಬರ್ 7ರಂದು ಅರ್ಜಿಯನ್ನು ಪರಿಶೀಲಿಸುವುದಾಗಿ ಹೇಳಿದೆ.

ಉತ್ತರ ಪ್ರದೇಶ: ಶಿಕ್ಷಕಿ ಮೇಲೆ ಸಾಮೂಹಿಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಲಖನೌ: ಮನೆಪಾಠದ ಶಿಕ್ಷಕಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ ಎನ್ನಲಾದ ಘಟನೆಯು ಉತ್ತರ ಪ್ರದೇಶ ರಾಜಧಾನಿ ಲಖನೌನಲ್ಲಿ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇಲ್ಲಿಯ ಚಿನ್ಹಾಟ್ ಪ್ರದೇಶದಲ್ಲಿ ಶನಿವಾರ ಮನೆಪಾಠ ತರಗತಿ ನೀಡಿ ಮನೆಗೆ ಆಟೊದಲ್ಲಿ ವಾಪಸ್ಸಾಗುತ್ತಿದ್ದರು. ಆಗ ಆಟೊ ಚಾಲಕ ಅವರನ್ನು ಮಾಲ್ ಹಿಂಬದಿ ನಿರ್ಜನ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದಾನೆ. ಅಲ್ಲಿ ಚಾಲಕ ಮತ್ತು ಆಟೊದಲ್ಲಿ ಕುಳಿತಿದ್ದ ಮತ್ತೊಬ್ಬ ವ್ಯಕ್ತಿ ಶಿಕ್ಷಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ.

ಸಂತ್ರಸ್ತೆಯ ದೇಹದ ಮೇಲೆ ಗಾಯದ ಕಲೆಗಳಿವೆ. ಸಹ ಪ್ರಯಾಣಿಕ ಆಕಾಶ್ ತಿವಾರಿಯನ್ನು ಬಂಧಿಸಲಾಗಿದೆ. ಆಟೋ ಚಾಲಕ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಕುರಿತು ಮಾಹಿತಿ ನೀಡಿರುವ ಶಿಕ್ಷಕಿ, 'ಅವರಿಬ್ಬರು ಭಾರವಾದ ವಸ್ತು ಬಳಸಿ ನನಗೆ ಅವರು ಬಲವಾಗಿ ಹೊಡೆದರು ಮತ್ತು ನನ್ನ ಫೋನ್‌ಅನ್ನು ಕಸಿದುಕೊಂಡರು. ಬಳಿಕ ಪ್ರಜ್ಞಾಹೀನಳಾಗಿದ್ದೆ. ಗೋಮ್ತಿ ನಗರದಲ್ಲಿ ನನ್ನನ್ನು ಬಿಟ್ಟು ಹೋಗಿದ್ದರು. ಘಟನೆ ನಡೆದ ರಾತ್ರಿಯೇ ದೂರು ದಾಖಲಿಸುವ ಸಲುವಾಗಿ ಮೂರು ಪೊಲೀಸ್ ಠಾಣೆಗಳು ಮತ್ತು ಒಂದು ಪೊಲೀಸ್ ಹೊರಠಾಣೆಗೆ ಹೋಗಿದ್ದೆ. ಆದರೆ ಎಲ್ಲಿಯೂ ದೂರು ದಾಖಲಿಸಿಕೊಳ್ಳಲಿಲ್ಲ' ಎಂದಿದ್ದಾರೆ.

ಈ ಘಟನೆ ಕುರಿತ ಮಾಹಿತಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬಳಿಕ ಎಫ್‌ಐಆರ್ ದಾಖಲಿಸಲಾಗಿದೆ. ಕರ್ತವ್ಯ ಲೋಪದ ಕಾರಣಕ್ಕಾಗಿ ಪೊಲೀಸ್ ಹೊರಠಾಣೆಯ ಉಸ್ತುವಾರಿ ಅಧಿಕಾರಿಯನ್ನು ಅಮಾನತು ಮಾಡಲಾಗಿದೆ, ಇತರ 3 ಪೊಲೀಸ್ ಠಾಣೆಗಳ ಹಿರಿಯ ಪೊಲೀಸರಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ.

ಅಂಕಿತಾ ಪ್ರಕರಣ: ಅತ್ಯಾಚಾರ ಆರೋಪ ತಳ್ಳಿಹಾಕಿದ ವಿಧಿ ವಿಜ್ಞಾನ ವರದಿ

ಡೆಹ್ರಾಡೂನ್ (ಪಿಟಿಐ) : ಹತ್ಯೆಗೀಡಾದ ರೆಸಾರ್ಟ್ ಸ್ವಾಗತಕಾರಿಣಿ ಅಂಕಿತಾ ಭಂಡಾರಿ ಅವರ ಮೇಲೆ ಅತ್ಯಾಚಾರ ನಡೆದಿಲ್ಲ ಎಂದು ವಿಧಿವಿಜ್ಞಾನ ಪರೀಕ್ಷೆಯ ಪ್ರಾಥಮಿಕ ವರದಿ ಹೇಳಿದೆ ಎಂದು ಪೊಲೀಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

'ಅಂಕಿತಾ ಮೇಲೆ ಅತ್ಯಾಚಾರ ನಡೆದಿಲ್ಲ ಎಂದು ರಿಷಿಕೇಶ್‌ನ ಏಮ್ಸ್ ಆಸ್ಪತ್ರೆಯಲ್ಲಿ ನಡೆದಿದ್ದ ಮರಣೋತ್ತರ ಪರೀಕ್ಷೆಯ ವರದಿಯಲ್ಲೂ ಹೇಳಲಾಗಿತ್ತು' ಎಂದೂ ಹೇಳಿದ್ದಾರೆ.

ಬಿಜೆಪಿ ಮುಖಂಡನ ಪುತ್ರ ಹಾಗೂ ರೆಸಾರ್ಟ್ ಮಾಲೀಕ ಪುಲ್ಕಿತ್ ಆರ್ಯ ಹಾಗೂ ಆತನ ಇಬ್ಬರು ಸಹಚರರು ಸೇರಿ ಅಂಕಿತಾ ಅವರನ್ನು ಹತ್ಯೆ ಮಾಡಿದ್ದರು ಎಂದು ಆರೋಪಿಸಲಾಗಿತ್ತು. ಈ ಮೂವರನ್ನು ಈಗಾಗಲೇ ಬಂಧಿಸಲಾಗಿದೆ. ಪ್ರಕರಣದ ಕುರಿತು ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿದೆ.

50ನೇ ಸಿಜೆಐ ಆಗಿ ಡಿ.ವೈ. ಚಂದ್ರಚೂಡ್ ನೇಮಕ



ನವದೆಹಲಿ: ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರನ್ನು ಸುಪ್ರೀಂ ಕೋರ್ಟ್‌ನ 50ನೇ ಮುಖ್ಯ ನ್ಯಾಯಮೂರ್ತಿ ಆಗಿ ರಾಷ್ಟ್ರಪತಿ ಸೋಮವಾರ ನೇಮಕ ಮಾಡಿದ್ದಾರೆ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

ನವೆಂಬರ್ 9 ರಂದು ಚಂದ್ರಚೂಡ್ ಅವರು ಪ್ರತಿಜ್ಞೆ ಸ್ವೀಕರಿಸುವರು. 2024 ನವೆಂಬರ್ 10ರಂದು ಅವರು ನಿವೃತ್ತರಾಗುವರು.

ಅತ್ಯಾಚಾರ ಆರೋಪ: ಹಿರಿಯ ಐಎಎಸ್ ಅಧಿಕಾರಿ ಅಮಾನತು

ನವದೆಹಲಿ (ಪಿಟಿಐ): ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆಸಿದ ಆರೋಪ ಎದುರಿಸುತ್ತಿರುವ ಹಿರಿಯ ಐಎಎಸ್ ಅಧಿಕಾರಿ ಜಿತೇಂದ್ರ ನಾರಾಯಣ್ ಅವರನ್ನು ಕೇಂದ್ರ ಸರ್ಕಾರ ಸೋಮವಾರ ಅಮಾನತುಗೊಳಿಸಿದೆ.



ಜಿತೇಂದ್ರ ನಾರಾಯಣ್

'ಅಂಡಮಾನ್ ಮತ್ತು ನಿಕೋಬಾರ್‌ನ ಮುಖ್ಯ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆಸಿರುವ ಆರೋಪ ಜಿತೇಂದ್ರ ಅವರ ಮೇಲಿದೆ. ಈ ಸಂಬಂಧ ಅಲ್ಲಿನ ಪೊಲೀಸರು ಭಾನುವಾರ ಗೃಹ ಸಚಿವಾಲಯಕ್ಕೆ ವರದಿ ಸಲ್ಲಿಸಿದ್ದಾರೆ. ಜಿತೇಂದ್ರ ಅವರು ಅಧಿಕಾರ ದುರ್ಬಳಕೆ ಮಾಡಿಕೊಂಡಿರುವ ಸಾಧ್ಯತೆ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಪ್ರಕಟಣೆ ವಿವರಿಸಿದೆ.

'ಜಿತೇಂದ್ರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅಂಡಮಾನ್ ಮತ್ತು ನಿಕೋಬಾರ್‌ನ ವಿಶೇಷ ತನಿಖಾ ತಂಡವು ಕ್ರಿಮಿನಲ್ ಪ್ರಕರಣದ ತನಿಖೆ ನಡೆಸಲಿದೆ' ಎಂದೂ ಹೇಳಲಾಗಿದೆ.

2 ವಾರ ಕಾಲಾವಕಾಶ ನೀಡಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಲಖೀಂಪುರ ಖೀರಿ ಹಿಂಸಾಚಾರದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರು ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯ ಸಂಬಂಧ ಪ್ರತಿಕ್ರಿಯೆ ಸಲ್ಲಿಸಲು ಸುಪ್ರೀಂ ಕೋರ್ಟ್ ಸೋಮವಾರ ಉತ್ತರಪ್ರದೇಶ ಸರ್ಕಾರಕ್ಕೆ 2 ವಾರ ಕಾಲಾವಕಾಶ ನೀಡಿದೆ.

ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮ ಪ್ರದೇಶ

ರಾಜ್ಯಗಳ ತಕರಾರು: ಕೇಂದ್ರ ಅಸಹಾಯಕತೆ

• ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ವಿಶೇಷ

ನವದೆಹಲಿ: 'ಕರ್ನಾಟಕ, ಕೇರಳ, ಗೋವಾ, ತಮಿಳುನಾಡು, ಗುಜರಾತ್, ಮಹಾರಾಷ್ಟ್ರ ರಾಜ್ಯಗಳಲ್ಲಿ ವ್ಯಾಪಿಸಿರುವ ಪಶ್ಚಿಮ ಘಟ್ಟ ಪ್ರದೇಶದ 56,825 ಚದರ ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಲು ಕೇಂದ್ರ ಸರ್ಕಾರ ಎಲ್ಲ ಪ್ರಯತ್ನಗಳನ್ನು ಮಾಡಿದೆ. ಆದರೆ, ರಾಜ್ಯ ಸರ್ಕಾರಗಳ ತಕರಾರಿನಿಂದಾಗಿ ಕರಡು ಅಧಿಸೂಚನೆ ಅಂತಿಮಗೊಳಿಸಲು ಸಾಧ್ಯವಾಗಿಲ್ಲ' ಎಂದು ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯ ಅಸಹಾಯಕತೆ ವ್ಯಕ್ತಪಡಿಸಿದೆ.

ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶ ಘೋಷಣೆಯಲ್ಲಿ ಅನಗತ್ಯ ವಿಳಂಬವಾಗುತ್ತಿದೆ ಎಂದು ಆರೋಪಿಸಿ 'ಗೋವಾ ಫೌಂಡೇಷನ್' ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಮೆಟ್ಟಿಲೇರಿದೆ. ಈ ಕರಡು ಅಧಿಸೂಚನೆಯನ್ನು ಆರು ತಿಂಗಳಲ್ಲಿ ಅಂತಿಮಗೊಳಿಸಬೇಕು ಎಂದು ನ್ಯಾಯಮಂಡಳಿಯ ಪ್ರಧಾನ ಪೀಠವು ಈ ಹಿಂದೆ ಪರಿಸರ ಸಚಿವಾಲಯಕ್ಕೆ ಸೂಚಿಸಿತ್ತು. ಈ ಸಂಬಂಧ ಕೈಗೊಂಡ ಕ್ರಮಗಳ ಪ್ರಮಾಣಪತ್ರವನ್ನು ಪರಿಸರ ಸಚಿವಾಲಯವು ಎನ್‌ಜಿಟಿಗೆ ಸೋಮವಾರ ಸಲ್ಲಿಸಿದೆ.

ಪ್ರಮಾಣಪತ್ರದಲ್ಲಿ ಏನಿದೆ: ಪಶ್ಚಿಮ ಘಟ್ಟ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರೊ. ಮಾಧವ ಗಾಡ್ಗೀಳ್ ಸಮಿತಿ 2010ರ ಮಾರ್ಚ್ 4ರಂದು ವರದಿ ಸಲ್ಲಿಸಿತ್ತು. ಬಳಿಕ 2012ರಲ್ಲಿ ಡಾ.ಕೆ.ಕಸ್ತೂರಿರಂಗನ್ ನೇತೃತ್ವದ ಉನ್ನತಾಧಿಕಾರಿ ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿಯ ಶಿಫಾರಸಿನ ಮೇರೆಗೆ ಪರಿಸರ ಸೂಕ್ಷ್ಮ ಪ್ರದೇಶದ ಕರಡು ಅಧಿಸೂಚನೆಯನ್ನು 2018ರಲ್ಲಿ ಪ್ರಕಟಿಸಲಾಗಿತ್ತು. ಈ ಕರಡು ಅಧಿಸೂಚನೆಯನ್ನು 2022ರ ಜೂನ್ 30ರೊಳಗೆ ಅಂತಿಮಗೊಳಿಸಬೇಕಿತ್ತು. ರಾಜ್ಯಗಳು ಅಭಿಪ್ರಾಯ ನೀಡದ ಕಾರಣ ಅಂತಿಮಗೊಳ್ಳಲಿಲ್ಲ. ಪರಿಸರ ಸಚಿವಾಲಯವು ಜುಲೈ 6ರಂದು ಮತ್ತೆ ಕರಡು ಅಧಿಸೂಚನೆಯನ್ನುಹೊರಡಿಸಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಿದೆ. ಕರಡು ಅಧಿಸೂಚನೆಯನ್ನು ಅಂತಿಮಗೊಳಿಸಲು ರಾಜ್ಯ ಸರ್ಕಾರಗಳ ಜತೆಗೆ ನಿರಂತರ ಸಮಾಲೋಚನೆ ನಡೆಸಲಾಗುತ್ತಿದೆ.

ರಾಜ್ಯವಾರು ಪರಿಸರ ಸೂಕ್ಷ್ಮ ಪ್ರದೇಶದ ವಿಸ್ತೀರ್ಣ (ಚ.ಕಿ.ಮೀಗಳಲ್ಲಿ)

ರಾಜ್ಯಗಳು	ವಿಸ್ತೀರ್ಣ
ಗುಜರಾತ್	449
ಮಹಾರಾಷ್ಟ್ರ	17,340
ಗೋವಾ	1,461
ಕರ್ನಾಟಕ	20,668
ತಮಿಳುನಾಡು	6,914
ಕೇರಳ	9,993

ರಾಜ್ಯಗಳ ಜತೆಗೆ ಚರ್ಚೆ: ರಾಜ್ಯಗಳ ಆಕ್ಷೇಪದ ಬಗ್ಗೆ ಪರಿಶೀಲನೆ ನಡೆಸಲು ಸಚಿವಾಲಯದ ನಿವೃತ್ತ ಮಹಾನಿರ್ದೇಶಕರ ನೇತೃತ್ವದಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿ ವರದಿ ನೀಡುವ ಗಡುವನ್ನು 2023ರ ಜೂನ್ 30ರ ವರೆಗೆ ವಿಸ್ತರಿಸಲಾಗಿದೆ. ಈ ಸಮಿತಿಯು ಕರ್ನಾಟಕ ಹಾಗೂ ಗೋವಾದ ಪಶ್ಚಿಮ ಘಟ್ಟಗಳಿಗೆ ಮೇ 14 ಹಾಗೂ ಮೇ 15ಕ್ಕೆ ಭೇಟಿ ನೀಡಿ ಸ್ಥಳೀಯರೊಂದಿಗೆ ಸಮಾಲೋಚಿಸಿ ಪ್ರಾಥಮಿಕ ಮಾಹಿತಿ ಪಡೆದಿದೆ. ಕರ್ನಾಟಕ, ತಮಿಳುನಾಡು, ಗೋವಾ ಹಾಗೂ ಗುಜರಾತ್ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಇಲಾಖೆಗಳ ಮುಖ್ಯಸ್ಥರ ಜತೆಗೆ ಮುಂದಿನ ತಿಂಗಳಲ್ಲಿ ಸಭೆಗಳನ್ನು ನಡೆಸಲಿದೆ. ಜತೆಗೆ, ಪಶ್ಚಿಮ ಘಟ್ಟಗಳಿಗೆ ಭೇಟಿ ನೀಡಿ ಅಹವಾಲು ಆಲಿಸಿ ವಾಸ್ತವ ಸಂಗತಿಗಳನ್ನು ಅರಿಯಲಿದೆ. ಬಳಿಕ ಶಿಫಾರಸುಗಳನ್ನು ಸಲ್ಲಿಸಲಿದೆ ಎಂದು ಸಚಿವಾಲಯವು ಪ್ರಮಾಣಪತ್ರದಲ್ಲಿ ತಿಳಿಸಿದೆ.

'41 ಕೋಟಿ ಭಾರತೀಯರು ಬಡತನದಿಂದ ಮುಕ್ತ'

ವಿಶ್ವಸಂಸ್ಥೆ (ಪಿಟಿಐ): ಭಾರತದಲ್ಲಿ 2005 ಮತ್ತು 2021ರ ನಡುವಿನ ಅವಧಿಯಲ್ಲಿ 41.5 ಕೋಟಿ ಜನರು ಬಡತನದಿಂದ ಮುಕ್ತರಾಗಿದ್ದಾರೆ ಎಂದು ವಿಶ್ವಸಂಸ್ಥೆ ಸೋಮವಾರ ಹೇಳಿದೆ. ಇದನ್ನು ಐತಿಹಾಸಿಕ ಬದಲಾವಣೆ ಎಂದು ಕರೆದಿದೆ.

'ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ' (ಯುಎನ್‌ಡಿಪಿ) ಹಾಗೂ 'ಆಕ್ಸ್‌ಫರ್ಡ್ ಬಡತನ ಮತ್ತು ಮಾನವ ಅಭಿವೃದ್ಧಿ ಕಾರ್ಯಕ್ರಮ' ಜಂಟಿಯಾಗಿ ತಯಾರಿಸಿರುವ 'ಬಹುಆಯಾಮ ಬಡತನ ಸೂಚ್ಯಂಕ' (ಎಂಪಿಐ) ವರದಿಯನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಬಿಡುಗಡೆ ಮಾಡಲಾಯಿತು.

ಸುಸ್ಥಿರ ಅಭಿವೃದ್ಧಿ ಗುರಿ ಕಾರ್ಯಕ್ರಮಗಳಿಂದಾಗಿ ಇದು ಸಾಧ್ಯವಾಗಿದೆ ಎಂದು ವಿಶ್ವಸಂಸ್ಥೆ ಹೇಳಿದೆ. ಬಡತನದಲ್ಲಿರುವ ಎಲ್ಲ ವಯೋಮಾನದ ಮಹಿಳೆಯರು, ಮಕ್ಕಳು ಹಾಗೂ ಪುರುಷರ ಪ್ರಮಾಣವನ್ನು 2030ರೊಳಗೆ ಅರ್ಧದಷ್ಟಾದರೂ ತಗ್ಗಿಸುವ ಗುರಿ ಹಾಕಿಕೊಳ್ಳಲಾಗಿದೆ. 2030ರೊಳಗೆ ಈ ಗುರಿಯನ್ನು ತಲುಪುವುದು ಸಾಧ್ಯವಿದೆ ಎಂದು ತಿಳಿಸಿದೆ.

ಸುಸ್ಥಿರ ಅಭಿವೃದ್ಧಿ ಗುರಿ ವಿಚಾರದಲ್ಲಿ, ಭಾರತದ ಪ್ರಕರಣವು ಪ್ರಮುಖ ಅಧ್ಯಯನ ವಸ್ತುವಾಗಿದೆ ಎಂದು ವರದಿ ಅಭಿಪ್ರಾಯಪಟ್ಟಿದೆ.

ಮುಖ್ಯಾಂಶಗಳು

- ಭಾರತದಲ್ಲಿ ಈಗಲೂ ಬಡತನದಲ್ಲಿದ್ದಾರೆ 9.7 ಕೋಟಿ ಮಕ್ಕಳು
- ಜಗತ್ತಿನಾದ್ಯಂತ 120 ಕೋಟಿ ಜನರು ಬಹುಆಯಾಮದ ಬಡತನದಲ್ಲಿದ್ದಾರೆ

2020ರ ಭಾರತದ ಜನಸಂಖ್ಯೆ ಆಧರಿಸಿ ಈ ವರದಿಯನ್ನು ತಯಾರಿಸಲಾಗಿದೆ. ಜಗತ್ತಿನ ಹೆಚ್ಚು ಸಂಖ್ಯೆಯ ಬಡವರು ಭಾರತದಲ್ಲಿದ್ದು, (22.8 ಕೋಟಿ) ನಂತರದ ಸ್ಥಾನದಲ್ಲಿ ನೈಜೀರಿಯಾ (9.6 ಕೋಟಿ) ಇದೆ. 2019–21ರ ಅವಧಿಯಲ್ಲಿ, 22.8 ಕೋಟಿ ಜನರನ್ನು ಬಡತನದಿಂದ ಮೇಲೆತ್ತುವ ಯತ್ನಗಳಿಗೆ ಹಲವು ಸವಾಲುಗಳು ಎದುರಾಗಿದ್ದವು ಎಂದು ವರದಿ ಹೇಳಿದೆ. ವರದಿಗಾಗಿ ದತ್ತಾಂಶಗಳನ್ನು ಸಂಗ್ರಹಿಸುತ್ತಿದ್ದ ಈ ಅವಧಿಯಲ್ಲಿ, ಬಡತನದಲ್ಲಿ ಏರಿಕೆಯ ಪ್ರವೃತ್ತಿ ಕಂಡುಬಂದಿತ್ತು ಎಂದಿದೆ.

'ಈ ಸುಧಾರಣೆಯ ಹೊರತಾಗಿಯೂ ಕೋವಿಡ್ ಪರಿಣಾಮಗಳು, ಬೆಲೆ ಏರಿಕೆ ಹಾಗೂ ಇಂಧನ ಬೆಲೆ ಏರಿಕೆಗಳು ಜನರ ಮೇಲೆ ಪರಿಣಾಮ ಬೀರುತ್ತಿವೆ. ಇದರಿಂದ ಹೊರಬರಬೇಕಾದರೆ, ಪೌಷ್ಟಿಕಾಂಶ ಹಾಗೂ ಇಂಧನ ಬಿಕ್ಕಟ್ಟುಗಳನ್ನು ಆದ್ಯತೆಯಾಗಿ ಪರಿಗಣಿಸಿ, ಸಮಗ್ರ ನೀತಿಗಳನ್ನು ರೂಪಿಸಬೇಕಿದೆ' ಎಂದು ವರದಿ ಅಭಿಪ್ರಾಯಪಟ್ಟಿದೆ.

'ಗುಜರಾತ್, ಹಿಮಾಚಲ ಪ್ರದೇಶದಲ್ಲಿ ಸ್ಪರ್ಧೆ'

ನವದೆಹಲಿ: ಮುಂಬರುವ ಗುಜರಾತ್ ಮತ್ತು ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ 'ಲೋಕ ಜನಶಕ್ತಿ ಪಕ್ಷ (ಎಲ್‌ಜೆಪಿ, ರಾಮ್ ವಿಲಾಸ್)' ಸ್ಪರ್ಧಿಸಲಿದೆ ಎಂದು ಪಕ್ಷದ ಅಧ್ಯಕ್ಷ ಚಿರಾಗ್ ಪಾಸ್ವಾನ್ ಸೋಮವಾರ ಘೋಷಿಸಿದ್ದಾರೆ.

ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಈ ನಿರ್ಧಾರ ಕೈಗೊಂಡಿದ್ದು, ಎಷ್ಟು ಸ್ಥಾನಗಳಲ್ಲಿ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ ಎಂಬುದರ ಬಗ್ಗೆ ಶೀಘ್ರ ತೀರ್ಮಾನಿಸಲಾಗುವುದು ಎಂದಿದ್ದಾರೆ.

ಗುಜರಾತ್: ಕುಲಪತಿ ನೇಮಕ ವಿರೋಧಿಸಿ ಟ್ರಸ್ಟಿಗಳ ರಾಜೀನಾಮೆ

ಅಹಮದಾಬಾದ್: ಮಹಾತ್ಮ ಗಾಂಧಿ ಅವರು 1920ರಲ್ಲಿ ಸ್ಥಾಪಿಸಿರುವ ಡೀಮ್ಡ್ ವಿಶ್ವವಿದ್ಯಾಲಯದ ನೂತನ ಕುಲಪತಿಯನ್ನಾಗಿ ಗುಜರಾತ್‌ನ ರಾಜ್ಯಪಾಲ ಆಚಾರ್ಯ ದೇವವ್ರತ ಅವರನ್ನು ನೇಮಕ ಮಾಡಿರುವುದನ್ನು ವಿರೋಧಿಸಿ ಗುಜರಾತ್ ವಿದ್ಯಾಪೀಠ ಟ್ರಸ್ಟ್‌ನ ಒಂಬತ್ತು ಟ್ರಸ್ಟಿಗಳು ಸೋಮವಾರ ರಾಜೀನಾಮೆ ನೀಡಿದ್ದಾರೆ.

ಈ ಕುರಿತು ಜಂಟಿ ಹೇಳಿಕೆ ಬಿಡುಗಡೆ ಮಾಡಿರುವ ಟ್ರಸ್ಟಿಗಳು 'ಗಾಂಧಿ ಅವರ ಮೌಲ್ಯಗಳು, ಗಾಂಧಿವಾದದ ಆಚರಣೆಗಳನ್ನು ಸಂಪೂರ್ಣವಾಗಿ ಕಡೆಗಣಿಸಿ, ತೀವ್ರ ರಾಜಕೀಯ ಒತ್ತಡದಿಂದ ದೇವವ್ರತ ಅವರನ್ನು ಕುಲಪತಿಯನ್ನಾಗ ನೇಮಕ ಮಾಡಲಾಗಿದೆ' ಎಂದು ದೂರಿದ್ದಾರೆ.

ಗುಜರಾತ್ ವಿದ್ಯಾಪೀಠದ ಆಡಳಿತ ಮಂಡಳಿಯು ಟ್ರಸ್ಟಿಗಳ ರಾಜೀನಾಮೆ ಅಂಗೀಕರಿಸದಿರಲು ಸೋಮವಾರ ನಡೆದ ಸಭೆಯಲ್ಲಿ ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಿದೆ.

ನಾಮಪತ್ರ ಹಿಂಪಡೆದ ಬಿಜೆಪಿ ಅಭ್ಯರ್ಥಿ

ಮುಂಬೈ (ಪಿಟಿಐ): ಬಿಜೆಪಿ ಅಭ್ಯರ್ಥಿ ಮುರ್ಜಿ ಪಟೇಲ್ ಅವರು ಅಂಧೇರಿ ಪೂರ್ವ ವಿಧಾನಸಭೆ ಕ್ಷೇತ್ರದ ಉಪ ಚುನಾವಣಾ ಕಣದಿಂದ ಹಿಂದೆ ಸರಿದಿದ್ದಾರೆ.

ಪಕ್ಷದ ವರಿಷ್ಠರ ಸೂಚನೆ ಮೇರೆಗೆ ಅವರು ಸೋಮವಾರ ನಾಮಪತ್ರ ಹಿಂಪಡೆದಿದ್ದಾರೆ. ಹೀಗಾಗಿ ಉದ್ಧವ್ ಠಾಕ್ರೆ ಬಣದ ಅಭ್ಯರ್ಥಿ ರುತುಜಾ ಲಟ್ಕೆ ಅವಿರೋಧವಾಗಿ ಆಯ್ಕೆಯಾಗುವುದು ನಿಶ್ಚಿತವಾಗಿದೆ.

ಶಿವಸೇನಾ ಶಾಸಕ ರಮೇಶ್ ಲಟ್ಕೆ ಅವರ ಅಕಾಲಿಕ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನವೆಂಬರ್ 3 ರಂದು ಚುನಾವಣೆ ನಿಗದಿಯಾಗಿತ್ತು. ಉದ್ಧವ್ ಬಣದಿಂದ ರಮೇಶ್ ಪತ್ನಿ ರುತುಜಾ ಸ್ಪರ್ಧಿಸಿದ್ದರು. ಅವರಿಗೆ ಎನ್‌ಸಿಪಿ ಬೆಂಬಲ ಸೂಚಿಸಿತ್ತು. ಬಿಜೆಪಿಯು ಮುರ್ಜಿ ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿತ್ತು. ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ, ಕಣದಿಂದ ಹಿಂದೆ ಸರಿಯುವಂತೆ ಬಿಜೆಪಿಗೆ ಮನವಿ ಮಾಡಿದ್ದರು. ರುತುಜಾ ಅವರ ಅವಿರೋಧ ಆಯ್ಕೆಗೆ ಎಲ್ಲಾ ಪಕ್ಷಗಳು ಸಹಕರಿಸಬೇಕೆಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಕೂಡ ಮನವಿ ಮಾಡಿದ್ದರು.




ಸುಭಾಷಿತ

ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಗೆ ಹತ್ತಿರವಾಗುವುದು ಅವರ ಆಪ್ತಭಾವದಿಂದಲೇ ವಿನಾ ಶಬ್ದಾಡಂಬರದಿಂದ ಅಲ್ಲ.

–ರೂಮಿ

ಗುಜರಾತ್ ಚುನಾವಣೆ: ದಿನಾಂಕ ಘೋಷಿಸದೇ ಇರಲು ಕಾರಣವೇನು?

ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸಿ, ಗುಜರಾತ್ ವಿಧಾನಸಭೆ ಚುನಾವಣೆಯ ವೇಳಾಪಟ್ಟಿಯನ್ನು ಚುನಾವಣಾ ಆಯೋಗವು ಪ್ರಕಟಿಸದೇ ಇರುವುದು ಆಯೋಗದ ನಡೆಯ ಕುರಿತು ಹಲವು ಪ್ರಶ್ನೆಗಳು ಏಳುವಂತೆ ಮಾಡಿದೆ. ಹಿಮಾಚಲ ಪ್ರದೇಶದಲ್ಲಿ ನವೆಂಬರ್ 13ರಂದು ಮತದಾನ ನಡೆದು ಡಿಸೆಂಬರ್ 8ರಂದು ಮತ ಎಣಿಕೆ ನಡೆಯಲಿದೆ. ಗುಜರಾತ್ ವಿಧಾನಸಭೆಗೂ ಕೆಲವೇ ವಾರಗಳಲ್ಲಿ ಚುನಾವಣೆ ನಡೆಯಬೇಕಿದೆ. ಹಿಮಾಚಲ ಪ್ರದೇಶ ವಿಧಾನಸಭೆಯ ಅವಧಿಯು ಮುಂದಿನ ವರ್ಷ ಜನವರಿಯಲ್ಲಿ ಪೂರ್ಣಗೊಳ್ಳಲಿದೆ. ಗುಜರಾತ್ ವಿಧಾನಸಭೆಯ ಅವಧಿಯು ಫೆಬ್ರುವರಿಯಲ್ಲಿ ಕೊನೆಗೊಳ್ಳಲಿದೆ. ವಿಧಾನಸಭೆಗಳ ಅವಧಿಯು ಆರು ತಿಂಗಳೊಳಗೆ ಪೂರ್ಣಗೊಳ್ಳುವುದಿದ್ದರೆ ಮತದಾನದ ದಿನಾಂಕಗಳು ಬೇರೆ ಬೇರೆ ಇದ್ದರೂ ಚುನಾವಣೆಯ ವೇಳಾಪಟ್ಟಿಯನ್ನು ಒಟ್ಟಾಗಿಯೇ ಪ್ರಕಟಿಸುವ ಕ್ರಮವನ್ನು ಅನುಸರಿಸಿಕೊಂಡು ಬರಲಾಗಿದೆ. ಆದರೆ, ಹಿಮಾಚಲ ಪ್ರದೇಶ ಮತ್ತು ಗುಜರಾತ್ ಚುನಾವಣೆಯ ವಿಚಾರದಲ್ಲಿ ಈ ಕ್ರಮವನ್ನು ಅನುಸರಿಸಿಲ್ಲ ಏಕೆ? ಈ ಕ್ರಮವನ್ನು ಅನುಸರಿಸದೇ ಇರುವುದಕ್ಕೆ ಆಯೋಗವು ಕೊಟ್ಟ ಕಾರಣವು ತೃಪ್ತಿಕರ ಅಲ್ಲವೇ ಅಲ್ಲ.



ಚುನಾವಣಾ ಆಯೋಗದ ಇಂತಹ ನಡವಳಿಕೆಯು ಚುನಾವಣಾ ವ್ಯವಸ್ಥೆಯ ಬಗ್ಗೆ ಇರುವ ವಿಶ್ವಾಸಾರ್ಹತೆಯೇ ಕುಸಿಯುವಂತೆ ಮಾಡುತ್ತದೆ

ಹಿಮಾಚಲ ಪ್ರದೇಶ ಮತ್ತು ಗುಜರಾತ್ ವಿಧಾನಸಭೆಗೆ ಅವಧಿ ಪೂರ್ಣಗೊಳ್ಳುವುದರ ನಡುವೆ 40 ದಿನಗಳ ಅಂತರ ಇದೆ. ಹಾಗಾಗಿ, ಯಾವುದೇ ನಿಯಮವನ್ನು ಆಯೋಗವು ಉಲ್ಲಂಘಿಸಿಲ್ಲ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಹೇಳಿದ್ದಾರೆ. ಒಂದು ರಾಜ್ಯದ ಫಲಿತಾಂಶವು ಇನ್ನೊಂದರ ಮೇಲೆ ಪರಿಣಾಮ ಬೀರದೇ ಇರಲು ಕನಿಷ್ಠ 30 ದಿನಗಳ ಅಂತರ ಇರಬೇಕು. ಇದೊಂದು ತಾಂತ್ರಿಕವಾದ ವಾದ ಮಾತ್ರ. ಉತ್ತರಪ್ರದೇಶ, ಪಂಜಾಬ್, ಗೋವಾ, ಮಣಿಪುರ ಮತ್ತು ಉತ್ತರಾಖಂಡ ಚುನಾವಣಾ ದಿನಾಂಕಗಳನ್ನು ಈ ವರ್ಷದ ಆರಂಭದಲ್ಲಿ ಒಮ್ಮೆಲೇ ಘೋಷಿಸಲಾಗಿತ್ತು. ಕೆಲವು ವಿಧಾನಸಭೆಗಳ ಅವಧಿ ಪೂರ್ಣಗೊಳ್ಳುವ ನಡುವಣ ಅಂತರವು 60 ದಿನಗಳಿದ್ದವು. ಹಿಮಾಚಲ ಪ್ರದೇಶ ಮತ್ತು ಗುಜರಾತ್‌ನಲ್ಲಿ 2017ರಲ್ಲಿ ಚುನಾವಣೆ ನಡೆದಾಗಲೂ ಚುನಾವಣಾ ಆಯೋಗವು ಹೀಗೆಯೇ ಮಾಡಿ ಟೀಕೆಗೆ ಗುರಿಯಾಗಿತ್ತು. ಜನರಿಗೆ ಹೆಚ್ಚು ಕೊಡುಗೆಗಳನ್ನು ಪ್ರಕಟಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಕ್ಕೆ ಅನುಕೂಲ ಆಗಲಿ ಎಂಬ ಕಾರಣಕ್ಕೆ ಗುಜರಾತ್ ಚುನಾವಣಾ ದಿನಾಂಕಗಳನ್ನು ಪ್ರಕಟಿಸಿಲ್ಲ ಎಂಬ ಟೀಕೆ ಆಗ ಕೇಳಿಬಂದಿತ್ತು. ಚುನಾವಣಾ ಆಯೋಗವು ಈ ಬಾರಿ ನಡೆದುಕೊಂಡ ರೀತಿಗೂ ಇದೇ ಟೀಕೆ ಅನ್ವಯ ಆಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್‌ಗೆ ಹಲವು ಯೋಜನೆಗಳನ್ನು ಈಗಾಗಲೇ ಪ್ರಕಟಿಸಿದ್ದಾರೆ. ರಾಜ್ಯ ಸರ್ಕಾರವೂ ಹಲವು ಯೋಜನೆಗಳನ್ನು ಘೋಷಿಸಿದೆ. ಇನ್ನಷ್ಟು ಯೋಜನೆಗಳು ಮುಂದಿನ ದಿನಗಳಲ್ಲಿ ಘೋಷಣೆ ಆಗುವುದರಲ್ಲಿ ಅನುಮಾನವೇನೂ ಇಲ್ಲ. ಮತದಾನದ ದಿನಾಂಕ ಪ್ರಕಟವಾಗಿ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಬಳಿಕ ಹೊಸ ಯೋಜನೆಗಳನ್ನು ಘೋಷಿಸಲು ಅವಕಾಶ ಇರುವುದಿಲ್ಲ.

ಮತದಾನ ನಡೆದು ಫಲಿತಾಂಶ ತಿಳಿಯಲು ಹಿಮಾಚಲ ಪ್ರದೇಶದ ಜನರು ಮೂರು ವಾರಗಳಿಗೂ ಹೆಚ್ಚು ಕಾಲ ಕಾಯಬೇಕು. ಇದು ಸಮಂಜಸ ಅಲ್ಲವೇ ಅಲ್ಲ. ಏಕೆಂದರೆ, ಇಷ್ಟು ದಿನಗಳ ಕಾಲ ಅಲ್ಲಿ ಸರ್ಕಾರವೇ ಇಲ್ಲದಂತಹ ಸ್ಥಿತಿ ನಿರ್ಮಾಣ ಆಗುತ್ತದೆ. ಗುಜರಾತ್ ಚುನಾವಣೆಯ ದಿನಾಂಕವನ್ನು ಪ್ರಕಟಿಸುವುದಕ್ಕೆ ಅವಕಾಶ ಬೇಕು ಎಂಬ ಕಾರಣಕ್ಕಾಗಿ ಹಿಮಾಚಲ ಪ್ರದೇಶದ ಮತದಾನ ಮತ್ತು ಮತ ಎಣಿಕೆ ನಡುವೆ ಮೂರು ವಾರಕ್ಕೂ ಹೆಚ್ಚು ಅಂತರ ಉಳಿಸಿಕೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಈ ವಿಳಂಬಕ್ಕೆ ಬೇರೇನೂ ಕಾರಣ ಇಲ್ಲದಿರುವುದರಿಂದ ಇದು ನಿಜವೇ ಆಗಿರಬಹುದು. ಚುನಾವಣಾ ಆಯೋಗವು ಎಲ್ಲ ಪಕ್ಷಗಳನ್ನು ಸಮಾನವಾಗಿ ಕಾಣಬೇಕು ಮತ್ತು ಅದು ಎಲ್ಲರಿಗೂ ಮನವರಿಕೆಯೂ ಆಗುವಂತಿರಬೇಕು. ಆದರೆ, ಆಯೋಗದ ನಡೆಯನ್ನು ಗಮನಿಸಿದರೆ ಅದು ಬಿಜೆಪಿಯ ಪರವಾಗಿ ಇದ್ದಂತೆ ಕಾಣುತ್ತದೆ. ಇಂತಹ ನಡವಳಿಕೆಯು ಚುನಾವಣಾ ಆಯೋಗ ಮತ್ತು ಚುನಾವಣಾ ವ್ಯವಸ್ಥೆಯ ಬಗ್ಗೆ ಇರುವ ವಿಶ್ವಾಸಾರ್ಹತೆಯೇ ಕುಸಿಯುವಂತೆ ಮಾಡುತ್ತದೆ. ಇದಕ್ಕೆ ಸಂಬಂಧಿಸಿದ ಟೀಕೆಗಳಿಗೆ ಆಯೋಗದಿಂದ ಯಾವ ಸ್ಪಂದನವೂ ಬಂದಿಲ್ಲ. ತನ್ನ ನಡವಳಿಕೆಯನ್ನು ಸರಿಪಡಿಸಿಕೊಳ್ಳುವ ಯಾವ ಪ್ರಯತ್ನವನ್ನೂ ಆಯೋಗ ನಡೆಸಿಲ್ಲ.

ದಿನದ ಟ್ವೀಟ್

ಬೇಕು ಆಂತರಿಕ ಪ್ರಜಾಪ್ರಭುತ್ವ



ಕಾಂಗ್ರೆಸ್‌ನಿಂದ ಅತ್ಯುತ್ತಮ ನಡೆ... ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ... ಪ್ರತಿಯೊಂದು ಪಕ್ಷವೂ ಆಂತರಿಕ ಪ್ರಜಾಪ್ರಭುತ್ವವನ್ನು ಹೊಂದಿರಬೇಕು... ವಾಸ್ತವವಾಗಿ, ಅದಕ್ಕಾಗಿ ಕಾನೂನನ್ನು ರೂಪಿಸಬೇಕು... ಆಂತರಿಕ ಪ್ರಜಾಪ್ರಭುತ್ವ ಮತ್ತು ಪಾರದರ್ಶಕವಾಗಿ ದೇಣಿಗೆ ಪಡೆಯುವ ವ್ಯವಸ್ಥೆ ಇದ್ದರೆ ಮಾತ್ರ ಯಾವುದೇ ಪಕ್ಷಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬೇಕು...

ಕರ್ನಲ್ ಅಶೋಕ್ ಸಿಂಗ್

ಕಿಡಿನುಡಿ



‘ಹಿಂದಿ ಚೀನಿ ಭಾಯಿ ಭಾಯಿ’ ಎಂದು ಟಾಮ್ ಟಾಮ್ ಮಾಡಿದ ನಂತರ, 1962ರಲ್ಲಿ ಚೀನೀಯರು ಅಕ್ಸಾಯ್ ಚಿನ್, ಅರುಣಾಚಲ ಅತಿಕ್ರಮಿಸಿಕೊಂಡಿದ್ದನ್ನು ಮರೆಮಾಚಿದ ಪರಿಣಾಮವಾಗಿ ನೆಹರೂ ಅವರು ಕಾಂಗ್ರೆಸ್ಸಿನ ನೈತಿಕತೆಯನ್ನು ನಾಶ ಮಾಡಿದರು. ಈಗ 2022ರಲ್ಲಿ ಮೋದಿ ಅವರು ಕೂಡ ನೆಹರೂ ಅವರಂತೆಯೇ ಸತ್ಯವನ್ನು ಮರೆಮಾಚುವ ಸ್ಥಿತಿಯಲ್ಲಿ ಇದ್ದಾರೆ. ನಾವು ರಾಷ್ಟ್ರೀಯವಾದಿಗಳಾಗಿರುವ ಕಾರಣ ಬಿಜೆಪಿಯ ನೈತಿಕತೆಯನ್ನು ತಗ್ಗಿಸಲು ಅವಕಾಶ ಕೊಡಲಾಗದು. ಮುಂದೇನು ಮಾಡಬೇಕು?

ಡಾ. ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 18-10-1997

• **ಗುಜ್ರಾಲ್ ಟೀಕೆಗೆ ಬೇಸರ: ಕೇಂದ್ರ ಕೃಷಿ ಸಚಿವ ಮಿಶ್ರ ರಾಜೀನಾಮೆ**

ನವದೆಹಲಿ, ಅ. 17– ಕೃಷಿ ಸಚಿವಾಲಯದ ಆಡಳಿತದ ಬಗೆಗೆ ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಅತೃಪ್ತಿ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ನೊಂದಿರುವ ಕೃಷಿ ಸಚಿವ ಚತುರಾನನ ಮಿಶ್ರಾ ಅವರು ಸಂಪುಟಕ್ಕೆ ರಾಜೀನಾಮೆ ನೀಡಿದ್ದಾರೆ.

ಆದರೆ, ರಾಜೀನಾಮೆ ಪತ್ರವನ್ನು ಹಿಂತೆಗೆದುಕೊಳ್ಳುವಂತೆ ಪ್ರಧಾನಿ ಅವರು ಸಚಿವ ಮಿಶ್ರಾ ಅವರ ಮನವೊಲಿಸುವ ಪ್ರಯತ್ನ ನಡೆಸಿದ್ದಾರೆ. ಪಂಜಾಬ್ ಪ್ರವಾಸದಲ್ಲಿರುವ ಪ್ರಧಾನಿ ಅವರು ಮಿಶ್ರಾ ಅವರ ರಾಜೀನಾಮೆ ಪತ್ರ ತಮ್ಮ ಕಾರ್ಯಾಲಯಕ್ಕೆ ತಲುಪಿದ ಸುದ್ದಿ ತಿಳಿದು ರಾಜೀನಾಮೆ ಪತ್ರವನ್ನು ಹಿಂತೆಗೆದುಕೊಳ್ಳುವಂತೆ ಮನವಿ ಮಾಡಿದ್ದಾರೆ.

• **ಇಬ್ಬರು ಒತ್ತೆಯಾಳುಗಳ ಸ್ಥಿತಿ ಗಂಭೀರ**

ಮೈಸೂರು, ಅ. 17– ಕಾಡುಗಳ್ಳ ವೀರಪ್ಪನ್ ಒತ್ತೆಯಾಳಾಗಿ ಇಟ್ಟುಕೊಂಡಿರುವ ವಿಜ್ಞಾನಿ ಡಾ. ಮೈಥಿ ಮತ್ತು ಅರಣ್ಯ ಇಲಾಖೆಯ ರಾಜು (57) ಅವರ ಸ್ಥಿತಿ ಚಿಂತಾಜನಕವಾಗಿದ್ದು ಅವರನ್ನು ಅರಣ್ಯದಲ್ಲಿರುವ ಆದಿವಾಸಿಗಳ ಗುಡಿಸಲೊಂದರಲ್ಲಿ ವೀರಪ್ಪನ್ ಇರಿಸಿರುವುದಾಗಿ ನಂಬಲರ್ಹ ಮೂಲಗಳು ತಿಳಿಸಿವೆ.

ನಿತ್ಯವೂ ವೀರಪ್ಪನ್ ತಂಡದ ಜೊತೆ 30–40 ಕಿ.ಮೀ. ಕ್ರಮಿಸುತ್ತಿದ್ದ ಇವರಿಬ್ಬರ ಕಾಲು ಊದಿಕೊಂಡು ನಡೆಯುವುದು ಸಾಧ್ಯವಾಗಲಿಲ್ಲ ಎನ್ನಲಾಗಿದೆ.

ಜೊತೆಗೆ ಇತರ ತೊಂದರೆಗಳೂ ಕಾಣಿಸಿಕೊಂಡು ಇಬ್ಬರೂ ತಂಡದ ಜತೆ ಸಾಗುವುದು ಕಷ್ಟವಾಯಿತೆಂದೂ, ಇದರಿಂದ ಬೇಸರಗೊಂಡ ವೀರಪ್ಪನ್ ಇವರಿಬ್ಬರನ್ನು ಪ್ರತ್ಯೇಕಗೊಳಿಸಿ ತನ್ನ ನಂಬಿಕೆಗೆ ಅರ್ಹರಾದ, ಅರಣ್ಯದಲ್ಲಿ ವಾಸಿಸುವ ಒಂದು ಆದಿವಾಸಿ ಕುಟುಂಬದ ಜೊತೆಯಲ್ಲಿರಲು ಬಿಟ್ಟಿದ್ದು ಇವರ ಕಾವಲಿಗೆ ತನ್ನ ಅನುಚರರನ್ನು ಬಿಟ್ಟಿದ್ದಾನೆ ಎನ್ನಲಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 18-10-1972

• **ಏಷ್ಯಾದ ದಾರಿದ್ರ್ಯ ನಿವಾರಣೆಗೆ ರಾಷ್ಟ್ರಪತಿ ಕರೆ**

ನವದೆಹಲಿ, ಅ. 17– ಏಷ್ಯಾ ಹಾಗೂ ದೂರಪ್ರಾಚ್ಯ ರಾಷ್ಟ್ರಗಳಲ್ಲಿ ಸತತವಾಗಿ ಉಲ್ಬಣಗೊಳ್ಳುತ್ತಿರುವ ಹಸಿವು ಹಾಗೂ ಪೌಷ್ಟಿಕ ಆಹಾರ ಅಭಾವ ಪರಿಸ್ಥಿತಿಯನ್ನು ಸಂಪೂರ್ಣವಾಗಿ ನಿವಾರಿಸಲು ‘ಒಮ್ಮತದ ಬೃಹತ್ ಪ್ರಯತ್ನ’ ನಡೆಸಬೇಕೆಂದು ರಾಷ್ಟ್ರಪತಿ ವಿ.ವಿ. ಗಿರಿ ಅವರು ಇಂದು ಅಂತರರಾಷ್ಟ್ರೀಯ ಸಮುದಾಯವನ್ನು ಆಗ್ರಹಪಡಿಸಿದರು.

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ 11ನೇ ಪ್ರಾದೇಶಿಕ ಸಮ್ಮೇಳನವನ್ನು ಇಂದು ಇಲ್ಲಿ ಉದ್ಘಾಟಿಸಿದ ಗಿರಿ ಅವರು, ಮಾನವನ ಆರ್ಥಿಕ ಅಭಿವೃದ್ಧಿಗೆ ಇರುವ ಸಾಮರ್ಥ್ಯ ಹಾಗೂ ವಿಶ್ವದ ಈ ಭಾಗದಲ್ಲಿ ನೂರಾರು ಕೋಟಿ ಜನರು ನಡೆಸುತ್ತಿರುವ ಜೀವನ ವಿಧಾನಗಳ ಮಧ್ಯೆ ಇರುವ ಹಾಗೂ ನಿರಂತರ ವೃದ್ಧಿಸುತ್ತಿರುವ ಭಾರಿ ಅಂತರವು ‘ಮಾನವನ ಆತ್ಮಕ್ಕೆ ಭಯಭ್ರಾಂತಿ ಮತ್ತು ವ್ಯಸನ ತರುವಂತಹದಾಗಿದೆ’ ಎಂದರು.

• **ಡಿಎಂಕೆ ಬಿಕ್ಕಟ್ಟು ಉಲ್ಬಣ: ಎಂಜಿಆರ್ ಬೆಂಬಲಿಗರಿಂದ ಹೊಸ ಪಕ್ಷ ರಚನೆ**

ಮದರಾಸು, ಅ. 17– ಡಿಎಂಕೆ ಪಕ್ಷದಿಂದ ಸಸ್ಪೆಂಡ್ ಮಾಡಲಾದ ಎಂ.ಜಿ. ರಾಮಚಂದ್ರನ್ ಅವರ ಬೆಂಬಲಿಗರು ನೂತನ ಪಕ್ಷವೊಂದನ್ನು ಸ್ಥಾಪಿಸಿದ್ದಾರೆ. ಇಂದಿನಿಂದ ಅಸ್ತಿತ್ವಕ್ಕೆ ಬಂದ ನೂತನ ಪಕ್ಷದ ಹೆಸರು ‘ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ’.

ಎಂಜಿಆರ್ ಅವರನ್ನು ಬೆಂಬಲಿಸುವ ಡಿಎಂಕೆ ಪಕ್ಷದ ಎಲ್ಲ ಶಾಖೆಗಳವರೂ ಅವುಗಳನ್ನು ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ ಪಕ್ಷದ ಶಾಖೆಗಳಾಗಿ ಪರಿವರ್ತಿಸಬೇಕೆಂದು ಡಿಎಂಕೆಯ ಎಂಜಿಆರ್ ಬೆಂಬಲಿಗರ ಸಮಿತಿ ಅಧ್ಯಕ್ಷ ಸಿ. ರಾಮಲಿಂಗಂ ಕರೆ ನೀಡಿದ್ದಾರೆ.

ದಲಿತರ ಮನೆಯ ಕೇಸರಿಬಾತ್‌ನಲ್ಲಿ ಅವರ ಸಂಕಷ್ಟಗಳೇ ದ್ರಾಕ್ಷಿ–ಗೋಡಂಬಿ

ರೂಪಾಯಿ ಸಂಕಟ ಡಾಲರ್ ಬಲ್ಲುದೆ?



ಪಡಸಾಲೆ

ರಘುನಾಥ ಚ.ಹ.

‘ರೂಪಾಯಿ ಬಡವಾಗುತ್ತಿಲ್ಲ, ಡಾಲರ್ ಕೊಬ್ಬು ಹೆಚ್ಚುತ್ತಿದೆಯಷ್ಟೇ’ ಎನ್ನುವ ಅರ್ಥದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಮಾತು, ‘ವಿಶ್ವಗುರು’ ಪೋಷಾಕಿನ ಭಾರತದ ವೈರುಧ್ಯಗಳನ್ನು ಹಿಡಿದಿಡುವ ‘ಅಧಿಕಾರ ಭಾಷೆ’ಯ ಅತ್ಯುತ್ತಮ ರೂಪಕ. ಈ ಮಾದರಿಯನ್ನು ಬಳಸಿಕೊಂಡು ಮತ್ತಷ್ಟು ಹೇಳಿಕೆಗಳನ್ನು ರೂಪಿಸಬಹುದು: ಜನಸಾಮಾನ್ಯರ ಬದುಕು ದುರ್ಬರವೇನೂ ಆಗುತ್ತಿಲ್ಲ, ಬದಲಿಗೆ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ; ಭಾರತದಲ್ಲಿ ಆಹಾರದ ಸಮಸ್ಯೆಯೇನೂ ಇಲ್ಲ, ಹಸಿವು ಹೆಚ್ಚುತ್ತಿದೆಯಷ್ಟೇ; ಕೊರೊನಾ ಬಿಕ್ಕಟ್ಟನ್ನು ಭಾರತ ಯಶಸ್ವಿಯಾಗಿ ನಿಭಾಯಿಸಿತು, ಸಾವು ನೋವು ಸಹಜವಷ್ಟೇ– ಹೀಗೆ ಎಷ್ಟು ಬೇಕಾದರೂ ಹೇಳಿಕೆಗಳನ್ನು ಜೋಡಿಸಬಹುದು.

ಜನಸಾಮಾನ್ಯರ ಸಂಕಷ್ಟಗಳಿಗೆ ರೂಪಕಭಾಷೆಯ ಮುಲಾಮನ್ನು ಹಚ್ಚುವಲ್ಲಿ ನಿಸ್ಸೀಮರಾಗಿರುವ ನಿರ್ಮಲಾ ಮೇಡಂ, 2020ರ ಕೊರೊನಾ ಬಿಕ್ಕಟ್ಟಿನ ಸಂದರ್ಭದ ಆರ್ಥಿಕ ಸಂಕಷ್ಟವನ್ನು ‘ದೇವರ ಆಟ’ ಎಂದು ಬಣ್ಣಿಸಿದ್ದರು. ಈ ರೂಪಕ ಸಾಮ್ರಾಜ್ಞಿ, ರಾಜ್ಯಸಭೆಗೆ ಕರ್ನಾಟಕದ ಕೊಡುಗೆ. ಬೆಲೆ ಏರಿಕೆ, ಹಣಕಾಸಿನ ಮುಗ್ಗಟ್ಟಿನಿಂದ ಜನಸಾಮಾನ್ಯರು ಹತಾಶರಾಗದಂತೆ, ಸಂಕಷ್ಟದ ಇನ್ನೊಂದು ಬದಿಯಲ್ಲಿನ ಜೀವನಸೌಂದರ್ಯದ ಬಗ್ಗೆ ಮೇಡಂ ಆಗಾಗ ಸಮಾಜದ ಗಮನಸೆಳೆಯುತ್ತಾರೆ; ಬದುಕನ್ನು ಸಕಾರಾತ್ಮಕವಾಗಿ ನೋಡುವ ಜೀವನಕಲೆಯನ್ನು ಬೋಧಿಸುತ್ತಿರುತ್ತಾರೆ. ಈ ಧನಾತ್ಮಕ ದೃಷ್ಟಿಕೋನದ ಹೊಸ ಹೊಳಹು: ರೂಪಾಯಿ ಸಹಿಷ್ಣುತೆಯೂ ಡಾಲರ್‌ನ ಅಧಿಕಪ್ರಸಂಗವೂ. ಅವರು ಈ ಹೊಳಹನ್ನು ಹಂಚಿಕೊಂಡಿರುವ ಆಸುಪಾಸಿನಲ್ಲೇ ‘ಜಾಗತಿಕ ಹಸಿವು ಸೂಚ್ಯಂಕ–2022’ ಪ್ರಕಟವಾಗಿದೆ. ಈ ಪಟ್ಟಿಯಲ್ಲಿರುವ 121 ದೇಶಗಳಲ್ಲಿ ಭಾರತ 107ನೇ ಸ್ಥಾನದಲ್ಲಿದೆ. ನೆರೆಯ ದೇಶಗಳಾದ ಬಾಂಗ್ಲಾ, ಪಾಕಿಸ್ತಾನ, ನೇಪಾಳವು ಭಾರತಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿವೆ. ಆರ್ಥಿಕ ಬಿಕ್ಕಟ್ಟಿನಿಂದ ನಾಗರಿಕ ವ್ಯವಸ್ಥೆಯೇ ಕುಸಿದುಹೋಗಿದೆ ಎಂದು ಭಾರತೀಯರ ಮರುಕಕ್ಕೆ ಪಾತ್ರವಾಗಿದ್ದ ಶ್ರೀಲಂಕಾ ಜಾಗತಿಕ ಹಸಿವು ಸೂಚ್ಯಂಕದಲ್ಲಿ 64ನೇ ಸ್ಥಾನದಲ್ಲಿದೆ! ಈ ಸೂಚ್ಯಂಕವೇನು ದೇವರ ಆಟವೋ ಅಥವಾ ಭಾರತದ ವಿರುದ್ಧದ ಪಿತೂರಿಯೋ– ಮೇಡಂ ಅವರೇ ವಿಶ್ಲೇಷಣೆಯ ಬೆಳಕು ಚೆಲ್ಲಬೇಕು.

ಬಿಕ್ಕಟ್ಟಿನ ಸಂದರ್ಭಗಳನ್ನು ಅತ್ಯಂತ ಧನಾತ್ಮಕವಾಗಿ ನೋಡುವ ಕಲೆಯನ್ನು ನಮ್ಮ ಜನಸಾಮಾನ್ಯರ ಭಾಷೆಯಲ್ಲಿ ಪಲಾಯನವಾದ, ಬೇಜವಾಬ್ದಾರಿ ಎನ್ನಲಾಗುತ್ತದೆ. ಆರ್ಥಿಕ ಹಿಂಜರಿತ ಭಾರತಕ್ಕಷ್ಟೇ ಸೀಮಿತವಾದ ವಿದ್ಯಮಾನವಲ್ಲ ಎನ್ನುವುದು ನಿಜವಾದರೂ, ಬಿಕ್ಕಟ್ಟಿನ ಸಂದರ್ಭವನ್ನು ‘ದೇವರ ಆಟ’ವನ್ನಾಗಿ ಭಾವಿಸುವ ಕಲೆಗಾರಿಕೆಯು ಭಾರತೀಯ ರಾಜಕಾರಣಿಗಳು ರೂಢಿಸಿಕೊಂಡಿರುವ ವಿಶೇಷ ಶಕ್ತಿ. ಈ ಕಲೆಗಾರಿಕೆಯ ನೆರವಿನಿಂದ ಯಥಾಸ್ಥಿತಿವಾದವನ್ನು ಮುಂದುವರಿಸಲಾಗುತ್ತದೆ, ದೊಡ್ಡ ಗಾಯವನ್ನು ತೋರಿಸಿ ಸಣ್ಣ ನೋವನ್ನು ನಿರ್ಲಕ್ಷಿಸುವ ಮನಃಸ್ಥಿತಿ ಸೃಷ್ಟಿಸಲಾಗುತ್ತದೆ. ಇದಕ್ಕೆ ನಿದರ್ಶನದ ರೂಪದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹೊಸಪೇಟೆ ಸಮೀಪದ ಕಮಲಾಪುರ ಗ್ರಾಮದ ದಲಿತ ಕುಟುಂಬದ ಮನೆಯಲ್ಲಿ ಉಪಾಹಾರ ಸೇವಿಸಿದ ಘಟನೆಯನ್ನು ಗಮನಿಸಬಹುದು. ದಲಿತರ ಮನೆಯಲ್ಲಿ ಮಂಡಕ್ಕಿ, ಕೇಸರಿಬಾತ್ ಸವಿಯುವ ಮೂಲಕ ಮುಖ್ಯಮಂತ್ರಿ ನೀಡಿದ ಸಂದೇಶವೇನು? ಅವರು ಪ್ರದರ್ಶಿಸಿದ್ದು ಜಾತ್ಯತೀತ ನಿಲುವನ್ನೇ? ದಲಿತರ ಬಗೆಗಿನ ಪ್ರೀತಿಯನ್ನೇ? ಸರಳತೆಯನ್ನೇ?

ದಲಿತರ ಮನೆಯಲ್ಲಿ ಆಹಾರ ಸೇವಿಸಿದ ಅನೇಕ ರಾಜಕಾರಣಿಗಳನ್ನು ಈ ನಾಡು ಕಂಡಿದೆ. ದಲಿತರ ಮನೆಗಳಲ್ಲಿ ಪಾದಪೂಜೆ ಮಾಡಿಸಿಕೊಂಡ ಸ್ವಾಮೀಜಿಗಳೂ ನಾಡಿಗೆ ಗೊತ್ತು. ಇಂಥ ಪ್ರಸಂಗಗಳೆಲ್ಲವೂ ದಲಿತರ ಸಹಾನುಭೂತಿ ಗಿಟ್ಟಿಸಿಕೊಳ್ಳುವ ಪ್ರಚಾರತಂತ್ರಗಳಾಗಿ ಕೊನೆಗೊಂಡಿವೆಯೇ ಹೊರತು, ಅವರ ಬದುಕನ್ನು ಕಿಂಚಿತ್ತೂ ಹಸನಾಗಿಸಿಲ್ಲ. ಈ ಘಟನೆಗಳು ಜಾತೀಯತೆಯ ಯಥಾಸ್ಥಿತಿಯನ್ನು ಮುಂದುವರಿಸಿವೆ. ಜಾತಿ ಕಾರಣದಿಂದಾಗಿ ಯಾರ ಜೊತೆಗಾದರೂ ಊಟ ಮಾಡಲು ನಿರಾಕರಿಸಿದಷ್ಟೇ, ಜಾತಿ ಕಾರಣದಿಂದಾಗಿ ಯಾರ ಮನೆಯಲ್ಲಾದರೂ ಆಹಾರ ಸೇವಿಸುವುದು ಕೂಡ ಕೊಳಕುತನವೇ.

ದಲಿತರ ಮನೆಯಲ್ಲಿ ನಡೆಯುವ ಆಹಾರಕೂಟಗಳ ವರದಿಗಳಲ್ಲಿ, ಹೋಟೆಲ್‌ನಿಂದ ಸರಬರಾಜಾಗುವ ತಿಂಡಿತೀರ್ಥದ ವಿವರಗಳೂ ಇರುವುದು ಏನನ್ನು ಸೂಚಿಸುತ್ತದೆ? ಕಮಲಾಪುರ ಗ್ರಾಮದ ಘಟನೆಯಲ್ಲಿ ‘ಬ್ರ್ಯಾಂಡೆಡ್ ಟೀ ಪುಡಿ’ ಬಳಸುವಂತೆ ದಲಿತ ಕುಟುಂಬವನ್ನು ಅಧಿಕಾರಿಗಳು ಒತ್ತಾಯಿಸಿರುವುದು ಏನನ್ನು ಸೂಚಿಸುತ್ತದೆ? ಶಬರಿಯ ಎಂಜಲು ಹಣ್ಣುಗಳನ್ನು ತಿಂದ ರಾಮಚಂದ್ರನನ್ನು ಆರಾಧಿಸುವವರು, ಊಟದ ವಿಷಯದಲ್ಲಿ ನಾಟಕವಾಡಬಾರದು.

ದಲಿತರ ಮನೆಯಲ್ಲಿ ಊಟ ಮಾಡುವುದು, ದಲಿತರ ಮನೆಗಳಲ್ಲಿ ಪಾದಪೂಜೆ ಮಾಡಿಸಿಕೊಳ್ಳುವುದು– ಇವೆಲ್ಲ ಅಮಾನವೀಯ ಮಾತ್ರವಲ್ಲ, ಸದ್ಯದ ಸಂದರ್ಭದಲ್ಲಿ ಅನಾಗರಿಕವೂ ಹೌದು. ತುಟಿಯುಪಚಾರದ ನಡವಳಿಕೆಗಳು ದಲಿತರ ಬದುಕನ್ನು ಯಾವ ರೀತಿಯಿಂದಲೂ ಸಹ್ಯಗೊಳಿಸುವುದಿಲ್ಲ. ಇಷ್ಟಕ್ಕೂ ಮುಖ್ಯಮಂತ್ರಿಯೊಬ್ಬರು ದಲಿತರ ಮನೆಯಲ್ಲಿ ಯಾಕಾಗಿ ಊಟ ಮಾಡಬೇಕು? ಅವರೇನು ಆಹ್ವಾನಿಸಿದ್ದರೆ? ಹೌದೇ ಆದಲ್ಲಿ, ಆಹ್ವಾನಿಸಿದವರೆಲ್ಲರ ಮನೆಗೆ ಮುಖ್ಯಮಂತ್ರಿ ಊಟಕ್ಕೆ ಹೋಗುವರೆ?

ಆಡಳಿತ ಸೂತ್ರಗಳನ್ನು ವಹಿಸಿಕೊಂಡ ನಾಯಕರು ಜನಸಾಮಾನ್ಯರ ಮನೆಗೆ ಭೇಟಿ ಕೊಡುವುದು ಅಸಹಜವೇನಲ್ಲ. ಇಂಥ ಭೇಟಿಗಳ ಹಿಂದೆ ಸಾಮಾನ್ಯವಾಗಿ ಎರಡು ಉದ್ದೇಶಗಳಿರುತ್ತವೆ: ಒಂದು, ಜನಸಾಮಾನ್ಯರ ತವಕತಲ್ಲಣಗಳನ್ನು ಅರಿಯುವುದು. ಮತ್ತೊಂದು, ಸಂಕಷ್ಟದ ಸಂದರ್ಭದಲ್ಲಿ ಅವರಿಗೆ ಮನೋಬಲ ತುಂಬುವುದು. ಬೊಮ್ಮಾಯಿ ಅವರ ನಡವಳಿಕೆಗೆ ಈ ಎರಡೂ ಸಾಧ್ಯತೆಗಳು ಹೊಂದುವುದಿಲ್ಲ. ಕರಾವಳಿಯಲ್ಲಿ ಕೊಲೆಯಾದ ಹಿಂದೂ ಯುವಕನ ಮನೆಗೆ ಹೋಗಿ ಸಾಂತ್ವನ ಹೇಳಿದವರಿಗೆ, ಸಮೀಪದ ಮುಸ್ಲಿಂ ಸಮುದಾಯದ ಸಾವಿನ ಮನೆ ದೂರವೆನ್ನಿಸುತ್ತದೆ. ಹಿಜಾಬ್ ಕಾರಣದಿಂದಾಗಿ ತರಗತಿ ಕಳೆದುಕೊಂಡ ಹೆಣ್ಣುಮಕ್ಕಳ ಬಳಿಗೆ ಹೋಗಿ ಅವರ ಮನಸ್ಸಿನ ಮಾತು ಆಲಿಸಬೇಕೆಂದು ಅವರಿಗೆ ಅನ್ನಿಸಲಿಲ್ಲ. ರಾಮಾಯಣ–ಮಹಾಭಾರತಗಳಿಂದ ಸಂಸ್ಕಾರಗೊಂಡ ಮನಸ್ಸುಗಳಿಗೆ, ತುಂಬಿದ ಸಭೆಯಲ್ಲಿ ದ್ರೌಪದಿಯ ಸೀರೆ ಸೆಳೆದ ಪ್ರಸಂಗ ಉಂಟುಮಾಡುವ ನೋವಷ್ಟೇ, ಶಾಲೆಯ ಮುಂಭಾಗದಲ್ಲಿ ಹಿಜಾಬ್ ಕಳಚುವಂತೆ ಒತ್ತಾಯಕ್ಕೆ ಒಳಗಾದ ಹೆಣ್ಣುಮಕ್ಕಳ ಬೇಗುದಿಯೂ ತಳಮಳ ಹುಟ್ಟಿಸಬೇಕು. ಅಂಥ ತಳಮಳ ಮುಖ್ಯಮಂತ್ರಿಯವರಲ್ಲಾಗಲೀ ಅವರ ಪಕ್ಷದ ಪ್ರತಿನಿಧಿಗಳಲ್ಲಾಗಲೀ ಕಾಣಿಸದಿರುವುದು ದುರದೃಷ್ಟಕರ.

ಕಳೆದೊಂದು ತಿಂಗಳ ಅವಧಿಯಲ್ಲಿ ದಲಿತರ ದೌರ್ಜನ್ಯಕ್ಕೆ ಸಂಬಂಧಿಸಿದ ಅನೇಕ ಘಟನೆಗಳು ರಾಜ್ಯದ ವಿವಿಧ ಭಾಗಗಳಿಂದ ವರದಿಯಾಗಿವೆ. ಕೋಲಾರ ಜಿಲ್ಲೆಯ ಉಳ್ಳೇರಹಳ್ಳಿಯಲ್ಲಿ ದೇವರ ಗುಜ್ಜುಕೋಲನ್ನು ಮುಟ್ಟಿದ ಕಾರಣಕ್ಕಾಗಿ ಪರಿಶಿಷ್ಟ ಜಾತಿಯ ಬಾಲಕನ ಮೇಲೆ ಹಲ್ಲೆ ನಡೆಸಲಾಗಿತ್ತು ಹಾಗೂ ಬಾಲಕನ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರದ ಬೆದರಿಕೆ ಒಡ್ಡಲಾಗಿತ್ತು. ಮುಖ್ಯಮಂತ್ರಿಯವರು ದಲಿತ ಕುಟುಂಬದ ಮನೆಯಲ್ಲಿ ನಾಷ್ಟಾ ಮಾಡಿದ ಬೆನ್ನಲ್ಲೇ, ಪರಿಶಿಷ್ಟ ಜಾತಿಗೆ ಸೇರಿದ ಒಂದೇ ಕುಟುಂಬದ ಹತ್ತು ಮಂದಿಯನ್ನು ಎಸ್ಟೇಟ್‌ನಲ್ಲಿ ಕೂಡಿಹಾಕಿ ಹಿಂಸಿಸಿದ ಘಟನೆ ಚಿಕ್ಕಮಗಳೂರು ಜಿಲ್ಲೆಯಿಂದ ವರದಿಯಾಗಿದೆ. ಸಮಾಜದ ಕಟ್ಟಕಡೆಯ ಜನರ ಬಗ್ಗೆ ಕಳಕಳಿಯುಳ್ಳ ನಾಯಕ ಭೇಟಿಯಾಗಬೇಕಾದುದು ಇಂಥ ಜನರನ್ನು ಅಲ್ಲವೇ? ಸಂತ್ರಸ್ತರ ಮನೆಗಳಿಗೆ ಹೋಗಿ ಧೈರ್ಯ ತುಂಬುವ ಮಾತಿರಲಿ, ಆ ಘಟನೆಗಳನ್ನು ಕಠಿಣ ಮಾತುಗಳಲ್ಲಿ ಖಂಡಿಸುವ ಗೋಜಿಗೂ ಹೋಗದವರು, ಊಟದ ಮೂಲಕ ಸಾಮಾಜಿಕ ಸೌಹಾರ್ದದ ಅಥವಾ ದಲಿತರ ಏಳಿಗೆಯ ಕುರಿತು ಸಂದೇಶ ನೀಡಲು ಪ್ರಯತ್ನಿಸುವುದು ತಮಾಷೆಯಾಗಿ ಕಾಣಿಸುತ್ತದೆ. ಈ ವಿಕಟ ವಿನೋದದ ಮುಂದುವರಿಕೆಯ ಭಾಗವಾಗಿ, ಶಾಸಕ ಶಿವನಗೌಡ ನಾಯಕ ಅವರ ಕಣ್ಣಿಗೆ ಬೊಮ್ಮಾಯಿ ಅವರು ‘ಎರಡನೇ ಅಂಬೇಡ್ಕರ್’ ಆಗಿ ಕಂಡಿದ್ದಾರೆ. ಅಭಿನವ ಮಹಾತ್ಮ, ಅಭಿನವ ಅಂಬೇಡ್ಕರ್ ಎಂದು ಯಾರು ಯಾರನ್ನು ಬೇಕಾದರೂ ಕರೆಯಬಹುದಾದ ಕಾಲಘಟ್ಟವೇ ಗಾಂಧಿ, ಬಾಬಾಸಾಹೇಬರನ್ನು ನಾವು ಎಷ್ಟು ಗಂಭೀರವಾಗಿ ಪರಿಗಣಿಸಿದ್ದೇವೆ ಎನ್ನುವುದರ ಸೂಚನೆಯಂತಿದೆ. ಇಂಥ ಭಟ್ಟಂಗಿತನವನ್ನು ಬಣ್ಣನೆಗೊಳಗಾದವರು ತಕ್ಷಣ ವಿರೋಧಿಸಬೇಕು. ಮೌನವಾಗಿ ಉಳಿಯುವುದು ವಿದೂಷಕರಿಗೆ ನೀಡುವ ಪ್ರೋತ್ಸಾಹ ಹಾಗೂ ಅಂಬೇಡ್ಕರ್ ಅವರಿಗೆ ಮಾಡುವ ಅವಮಾನ.

ರೂಪಾಯಿ ಮತ್ತು ಡಾಲರ್ ನಂಟನ್ನು ನಾವು ನೋಡಬೇಕಾದುದು ಹೀಗೆ: ಭಾರತದ ಜನಸಾಮಾನ್ಯರು ರೂಪಾಯಿ ರೂಪವಾದರೆ, ಜನಪ್ರತಿನಿಧಿಗಳು ಡಾಲರ್ ಇದ್ದಂತೆ. ರೂಪಾಯಿ ಸಂಕಟ ಡಾಲರ್‌ಗೆ ಅರ್ಥವಾಗುವುದುಂಟೆ?



ಚುರುಮುರಿ



ಕೋಟ್ಯಧೀಶರ ನಾಡಿನಲ್ಲಿ...

• ಸುಮಂಗಲಾ

ಬೆಕ್ಕಣ್ಣ ತನ್ನ ಹಿಂಗಾಲಿನ ಪಂಜಗಳಿಗೆ ಅಂಟಿದ ದೂಳನ್ನು ಭಾರಿ ಸೂಕ್ಷ್ಮವಾಗಿ, ಹಲ್ಲುಜ್ಜುವ ಬ್ರಶ್‌ನಿಂದ ಕೆರೆದು ತೆಗೆದು ಪೇಪರಿನ ಮೇಲೆ ಹಾಕಿತು. ಆಮೇಲೆ ಅದನ್ನು ಒಂದು ಚಿಕ್ಕ ಸ್ಟೀಲಿನ ಕರಡಿಗೆಯಲ್ಲಿ ಹಾಕಿತು. ‘ಇದನ್ನ ಲಾಕರಿನಲ್ಲಿ ಜೋಪಾನವಾಗಿ ಇಡು’ ಎಂದು ಅಪ್ಪಣೆ ಮಾಡಿತು! ನಾನು ಕಕಮಕ ಮುಖ ನೋಡಿದೆ.

‘ಮುಂದೆ ನಾ ನಮ್ಮ ಮಾರ್ಜಾಲಗಳ ಸಿಎಮ್ಮೋ, ಪ್ರಧಾನಿಯೋ ಆಗತೀನಿ. ಮಂದಿ ಸುಮ್ ಸುಮ್ನೆ ಬೇರೆಯವ್ರ ಪಾದದೂಳಿಗೆ ನನ್ನ ಪಾದದೂಳಿಯ ಹೋಲಿಕೆ ಮಾಡತಾರ. ಅದಕ್ಕೇ ನನ್ನ ಪಾದದೂಳಿಯ ಸ್ಯಾಂಪಲ್ ಎತ್ತಿಡಾಕೆ ಹತ್ತೀನಿ’ ಎಂದು ಅಷ್ಟೇ ಘನ ಗಂಭೀರವಾಗಿ ನುಡಿಯಿತು.

‘ಮಂಗ್ಯಾನಂಥವ್ನೇ... ಅದು ರೂಪಕವಾಗಿ ಹೇಳೂದಲೇ. ಹೊಂಡಗುಂಡಿ ರಸ್ತೆವಳಗೆ ನಡೆದಾಡೂ ಎಲ್ಲ ಮಂದಿ ಪಾದದೂಳಿ ಒಂದೇ ಥರ ಇರತೈತೆ’.

ಬೈದಿದ್ದನ್ನು ಕಿವಿಗೇ ಹಾಕಿಕೊಳ್ಳದೆ ಬೆಕ್ಕಣ್ಣ, ‘ಮೋದಿಮಾಮನ ಪಾದದೂಳಿಗೆ ಯಾರೂ ಸರಿಸಮಾನರಿಲ್ಲ ಅಂತ ಕಮಲಕ್ಕನ ಮನ್ಯಾವ್ರೆಲ್ಲ ಘೋಷಣೆ ಮಾಡ್ಯಾರ. ನೆಹರೂ ಪಾದದೂಳಿಗೆ ಯಾರು ಸರಿಸಮಾನ ಅಂತ ಕಾಂಗಿಗಳ ಪ್ರಶ್ನೆ. ಪಾದದೂಳಿ ವಿಶ್ಲೇಷಣೆ ಮಾಡಾಕೆ ಏನಾರ ಹೊಸ ಟೆಕ್ನಾಲಜಿ ಕಂಡುಹಿಡಿಬೇಕು. ಆದರ ನೆಹರೂ ಪಾದದೂಳಿ ಎಲ್ಲಿ ಸಿಗತದ?’ ಎಂದಿತು.

‘ಹೊಸ ಟೆಕ್ನಾಲಜಿ... ನಿನ್ ತಲೆ! ನಮ್ಮ ದೇಶ ಹಸಿವಿನ ಸೂಚ್ಯಂಕದಾಗೆ ಇನ್ನಷ್ಟು ಕುಸಿದೈತೆ, 121 ದೇಶಗಳ ಪಟ್ಟಿಯಲ್ಲಿ ನಮ್ಮದು 107ನೇ ಸ್ಥಾನ. ದಿವಾಳಿ ಎದ್ದಿರೋ ಶ್ರೀಲಂಕಾ 64ನೇ ಸ್ಥಾನದಾಗೆ, ಬಾಂಗ್ಲಾ 84, ಪಾಕಿಸ್ತಾನ ಸಹಿತ 99ನೇ ಸ್ಥಾನದಾಗೆ ಐತೆ... ಇದನ್ನು ಮೊದಲು ಸುಧಾರಿಸಬೇಕು ಕಣಲೇ’ ಎಂದು ನಾನು ಉದ್ದ ಭಾಷಣ ಕುಟ್ಟಿದೆ.

‘ಅದೆಲ್ಲ ವಿರೋಧ ಪಕ್ಷದ ಹುನ್ನಾರ. ನಮ್ಮ ದೇಶದ ಹಸಿವಿನ ಸೂಚ್ಯಂಕ ಅಳೆಯಕ್ಕೆ ಅವರು ಯಾರು? ಅದಾನಿ, ಅಂಬಾನಿಯಂಥ ಸಹಸ್ರ ಕೋಟ್ಯಧಿಪತಿಗಳ ಪಾದದೂಳಿಯಿಂದ ಪಾವನವಾದ ನಮ್ಮ ದೇಶದಲ್ಲಿ ಹಂಗೆಲ್ಲ ಹಸಿವೆ ಇರಾಕೆ ಸಾಧ್ಯಾನೇ ಇಲ್ಲ’ ಬೆಕ್ಕಣ್ಣ ಗುರುಗುಟ್ಟಿತು!

ಸಂಗತ

ಆಲಿಸುವವರಿಲ್ಲ, ಉಲಿಯುವವರೇ ಎಲ್ಲ!

ಮನಸ್ಸಿಟ್ಟು ಕೇಳುವುದರಿಂದ ಎದುರಾಳಿಗಳಿಗಿಂತಲೂ ಹೆಚ್ಚಾಗಿ ಸ್ವತಃ ನಮ್ಮನ್ನು ನಾವೇ ವ್ಯಾಖ್ಯಾನಿಸಿಕೊಂಡಿರುತ್ತೇವೆ

• ಬಿ.ಎಸ್.ಭಗವಾನ್

ಬಹಳಷ್ಟು ಪೋಷಕರು ತಮ್ಮ ಮಕ್ಕಳು ಶಾಲೆಗೆ ಹೋಗಿ ತರಗತಿಗಳಲ್ಲಿ ಕುಳಿತರಾಯಿತು, ಅವರು ಕಲಿತಂತೆಯೆ ಎಂದು ಭಾವಿಸುವುದಿದೆ. ಆದರೆ, ವಾಸ್ತವ ಬೇರೆಯೇ ಇದೆ. ಹಲವು ಮಕ್ಕಳಿಗೆ ಏಕಾಗ್ರತೆಯ ಅಭಾವ, ಪಾಠದತ್ತ ಗಮನ ಕಡಿಮೆ. ಸಹಜವಾಗಿಯೇ ಅಂಥ ಮಕ್ಕಳು ಬೋಧನೆಯತ್ತ ನಿರಾಸಕ್ತಿ ತಳೆಯುತ್ತಾರೆ. ಹಾಗಾಗಿ ಮಾಹಿತಿಯನ್ನು ಸಮರ್ಥವಾಗಿ ಮನನ ಮಾಡಿಕೊಳ್ಳುವ ಸಾಧ್ಯತೆ ಕಡಿಮೆ.

‘ಆಲಿಸಿ, ಅರ್ಥೈಸಿಕೊಳ್ಳಿ ಮತ್ತು ಆಡಿ’- ಈ ಮೂರು ಸೂತ್ರಗಳನ್ನು ಮಕ್ಕಳು ಪಾಲಿಸಬೇಕಿದೆ. ಪಾಠವನ್ನು ಶ್ರದ್ಧಾಸಕ್ತಿಯಿಂದ ಆಲಿಸುವ ಮಕ್ಕಳು ಸಹಜವಾಗಿಯೇ ಚೆನ್ನಾಗಿ ಕಲಿಯುತ್ತಾರೆ. ಇಲ್ಲವಾದರೆ ಬಾಯಿಪಾಠಕ್ಕೆ ಅವರು ಮಾರುಹೋಗುವುದೊಂದೇ ದಾರಿ. ಉಭಯಕುಶಲೋಪರಿಯಲ್ಲಿ ‘ನಿಮ್ಮ ಮಕ್ಕಳು ಏನು ಓದುತ್ತಿದ್ದಾರೆ?’ ಎನ್ನುವುದಕ್ಕಿಂತ ‘ಏನು ಅರ್ಥೈಸಿಕೊಳ್ಳುತ್ತಿದ್ದಾರೆ?’ ಎನ್ನುವುದೇ ಸರಿ.

ಇಂಗ್ಲಿಷ್‌ನ ‘ಫನಲ್’ ಪದಕ್ಕೆ ಕನ್ನಡದಲ್ಲಿ ಸಂವಾದಿಯಾಗಿ ‘ಆಲಿಕೆ’ ಎಂಬ ಪದವಿದೆ. ಆಲಿಸುವಿಕೆ ಎಂದರೆ ಶ್ರದ್ಧಾಸಕ್ತಿ ವಹಿಸಿ ಕೇಳುವುದು. ವಾಸ್ತವವಾಗಿ ‘ಬುದ್ಧಿವಂತ’ ಎಂದೂ ಕರೆಯಲಾಗುವ ‘ಫನಲ್’ನ ಕಾರ್ಯವೂ ಅದೇ ತಾನೆ. ದ್ರವವಸ್ತುವನ್ನು ಆಸ್ಥೆಯಿಂದ ಒಂದು ಪಾತ್ರೆಯಿಂದ ಕಿರಿಯ ಬಾಯುಳ್ಳ ಇನ್ನೊಂದಕ್ಕೆ ಅಚ್ಚುಕಟ್ಟಾಗಿ ಅದು ವರ್ಗಾಯಿಸುವುದು. ಈ ಸಲಕರಣೆಯು ಕಿವಿಯನ್ನೇ ಹೋಲುವುದು. ಕನ್ನಡ ಪದಗಳ ಅರ್ಥಗೌರವಕ್ಕೆ ಇದೊಂದು ಅತ್ಯುತ್ತಮ ನಿದರ್ಶನ. ಆಡುವುದಕ್ಕಿಂತಲೂ ಆಲಿಸುವುದರಿಂದಲೇ ಅಧಿಕ ಲಾಭ. ಕಿವಿಗೊಡದ ವಿನಾ ನಮ್ಮ ಸುತ್ತಮುತ್ತಲ ವಿದ್ಯಮಾನಗಳ ಪರಿಚಯವಾಗದು.

ಸಮಾಜದಲ್ಲಿ ವ್ಯಕ್ತಿಯ ಏಳಿಗೆ ಮತ್ತು ಸುಸ್ಥಿರತೆಗಾಗಿ ತನ್ಮಯ ಆಲಿಸುವಿಕೆ, ತನ್ಮೂಲಕ ವಿಶ್ಲೇಷಣೆ. ಸಹಿಷ್ಣುತೆಯು ನುಡಿಗೂ ಮೀರಿ ಕೇಳುವ ಕೌಶಲವನ್ನು ಆಧರಿಸಿದೆ. ಶಿಸ್ತಾಗಿ ಕಿವಿಗೊಟ್ಟರೆ ವೇದಿಕೆಗೆ ಅದಕ್ಕೂ ಹಿರಿದಾದ ಉಡುಗೊರೆ ಏನಿದೆ? ಸಭೆಯ ತಲ್ಲೀನತೆಯ ಕೊರತೆಯು ಧ್ವನಿವರ್ಧಕ ಹಿಡಿದವರನ್ನು ನಿಸ್ತೇಜಗೊಳಿಸುವುದು ಖಂಡಿತ. ಪ್ರಕೃತಿ ಸದಾ ನಮ್ಮೊಂದಿಗಿರುತ್ತದೆ. ಆಲಿಸುವುದರಿಂದ ಆಜೂಬಾಜಿನ ಪರಿವೆ ಮೊನಚಾಗುತ್ತದೆ. ಆದರೆ ಹೆಡ್‌ಫೋನ್ ಬದಿಗಿಟ್ಟು ಹಕ್ಕಿಗಳ ಚಿಲಿಪಿಲಿ, ಹೊಳೆಯ ಜುಳುಜುಳು, ಮರದ ಎಲೆ, ಮೇಘ ಗರ್ಜನೆ, ಗರಿಗಳ ಸೊಂಯ್... ಎಲ್ಲವನ್ನೂ ಕಿವಿ ತುಂಬಿಕೊಳ್ಳಬೇಕಷ್ಟೆ.

ಮನುಷ್ಯನನ್ನೂ ಒಳಗೊಂಡಂತೆ ಪ್ರಾಣಿಗಳಿಗೆ ಎರಡು ಕಿವಿಗಳು, ಒಂದೇ ಬಾಯಿ. ಅಂದರೆ ನಾವು ಮಾತನಾಡುವುದರ ಎರಡು ಪಟ್ಟು ಕೇಳುವ ಅಗತ್ಯವನ್ನು ನಿಸರ್ಗವೇ ನಿರ್ದೇಶಿಸಿದೆ! ಮಾತನಾಡುವುದಕ್ಕಿಂತ ಆಲಿಸುವುದಕ್ಕೇ ಹೆಚ್ಚಿನ ಪ್ರಾಮುಖ್ಯ ಫಲಕಾರಿ. ಆಲಿಸುವ ಕಲೆ ಪರರ ಹೃದಯಕ್ಕೆ ರಾಜಮಾರ್ಗ. ಕುತೂಹಲದ ಆಲಿಸುವಿಕೆ, ಪ್ರಾಮಾಣಿಕತೆಯ ನುಡಿ ಒಂದು ಮಾದರಿ. ಮಂದಿ ಕೇಳಲ್ಪಡಲು ಹಾತೊರೆಯುತ್ತಾರೆ. ಅವರ ಬಳಿ ನಿವೇದಿಸಿಕೊಳ್ಳಲು ಅಪಾರ ಸರಕು. ಸುಮ್ಮನೆ ಕೂತು ತದೇಕಚಿತ್ತದಿಂದ ಆಲಿಸುವ ಪ್ರತಿಯೊಬ್ಬರೂ ಅವರ ಪಾಲಿಗೆ ಪರಮಾಪ್ತರು.

ಮನಸ್ಸಿಟ್ಟು ಕೇಳುವುದರಿಂದ ಎದುರಾಳಿಗಳಿಗಿಂತಲೂ ಹೆಚ್ಚಾಗಿ ಸ್ವತಃ ನಮ್ಮನ್ನು ನಾವೇ ವ್ಯಾಖ್ಯಾನಿಸಿಕೊಂಡಿರುತ್ತೇವೆ. ಹಾಗಾಗಿ ಕಿವಿಗೊಟ್ಟು ಕೇಳುವುದರಿಂದ ಮನುಷ್ಯ ಸಂಬಂಧಗಳು ಶಕ್ತಿಯುತಗೊಳ್ಳುತ್ತವೆ. ಗಮನವಿರಿಸಿ ಆಲಿಸಿದರೆ ಮಾತನಾಡುವುದು ಮಾತ್ರವಲ್ಲ, ಮಾತನಾಡದ್ದೂ ಕೇಳುತ್ತದೆ.



ಮೊಬೈಲ್, ವಿಡಿಯೊ, ಜಿಪಿಎಸ್ ವಗೈರೆ ಸಂಪರ್ಕ ಸೇತುಗಳನ್ನು ನಾವು ಆಳುತ್ತಿಲ್ಲ, ಅವೇ ನಮ್ಮನ್ನಾಳುತ್ತಿವೆ. ಸಂವಹನದ ಅತಿವೃಷ್ಟಿಯು ಆಲಿಸುವಿಕೆಯನ್ನು ಬಲಹೀನಗೊಳಿಸಿದೆ. ಎಲ್ಲರೂ ಮಾತಾಡುವ, ಯಾರೂ ಆಲಿಸದ ಅಯೋಮಯ! ಇದರಿಂದ ಸಭೆ, ಸಂವಾದ, ಚರ್ಚೆಗಳು ಬಹುತೇಕ ನಿರರ್ಥಕ. ಅರ್ಥೈಸಿಕೊಳ್ಳಲು ಅಲ್ಲದೆ ಪ್ರತಿಕ್ರಿಯಿಸಲಷ್ಟೇ ಆಲಿಸುವುದು ಸಂಧಾನದ ವೈಫಲ್ಯಕ್ಕೆ ಮೂಲ. ಆದಕಾರಣ ಸಾವಧಾನದ ಆಲಿಕೆಯೇ ವಾಗ್ವಾದ ನ್ಯೂನತೆಗೆ ಲಸಿಕೆ.

ಕಣ್ಣಲ್ಲಿ ಕಣ್ಣಿಟ್ಟು ಪರರ ಗ್ರಹಿಕೆಗಳಿಗೆ ಕಿವಿಗೊಟ್ಟರೆ ಅವರಿಗೆ ಅದಕ್ಕಿಂತ ಸಲ್ಲಿಸುವ ಗೌರವ ಇನ್ನೊಂದಿಲ್ಲ. ಆಲಿಸುವಿಕೆ ಸೊಗಸಾಗಿದ್ದವರ ಪಾಲಿಗೆ ಅವರಾಡುವ ನುಡಿಯೂ ಸೊಗಸಾಗಿರುತ್ತದೆ. ‘ಆಲಿಸದವರನ್ನು ಕಾಡುವ ಕಿವುಡು ಬೇರೆ ಯಾರಿಗೂ ಇರಲಾರದು’ ಎಂಬ ಮಾತುಂಟು.

ಆಲಿಸುವಿಕೆಯು ಕಲಿಕೆಯ ಅವಿನಾಭಾವ ಅಂಗ. ಶಿಕ್ಷಣ ತಜ್ಞರು, ಪೋಷಕರು, ಶಿಕ್ಷಕರು, ವಿದ್ಯಾಸಂಸ್ಥೆಯ ಮುಖ್ಯಸ್ಥರು ಮಕ್ಕಳ ಆಲಿಸುವ ಸಾಮರ್ಥ್ಯ ಕುರಿತು ಆಗಿಂದಾಗ್ಗೆ ಚರ್ಚಿಸಬೇಕಿದೆ. ಕೆಲವು ಅಧ್ಯಾಪಕರು ಮಕ್ಕಳ ನಿಗಾ ಪರೀಕ್ಷಿಸಲು ‘ಹೇಳಿ, ಪಾಠದಲ್ಲಿ ನಾನೆಲ್ಲಿ ಇದ್ದೆ ಅಂತ?’ ಎನ್ನುವುದುಂಟು. ಅಂದಹಾಗೆ ತತ್ಪರ ಆಲಿಸುವಿಕೆ ಸಾಧ್ಯವಾದರೆ ಟ್ಯೂಷನ್ ಎಂಬ ಹೆಚ್ಚುವರಿ ತರಗತಿ ಏಕೆ? ಅದಕ್ಕೆ ಖರ್ಚು ಹಾಗಿರಲಿ, ತಗಲುವ ಅಮೂಲ್ಯ ಸಮಯವೇನು ಕಿಂಚಿತ್ತೇ? ಅಲ್ಲೂ ಪಾಠ ಆಲಿಸದೆ ಮನನವಾಗದಿದ್ದರೆ ಎಂಬ ಪ್ರಶ್ನೆ ಇದ್ದಿದ್ದೆ! ಎಂದಮೇಲೆ ವಿದ್ಯಾಲಯಗಳಲ್ಲಂತೂ ಮಕ್ಕಳಿಗೆ ಆಲಿಸುವಿಕೆಯ ಮಹತ್ವ ಮನದಟ್ಟಾಗಿಸಲು ‘ಆಲಿಸುವಿಕೆಯ ದಿನ’ ಅವಶ್ಯವಾಗಿ ಕಳೆಗಟ್ಟಲೇಬೇಕಿದೆ.

ಜಗತ್ತಿನ ಎಲ್ಲ ಭಾಷೆಗಳಲ್ಲೂ ಮೌಖಿಕ ಪರಂಪರೆಯಲ್ಲೇ ಅದೆಷ್ಟು ಕಾವ್ಯ, ಕಥನಗಳು, ನುಡಿಗಟ್ಟುಗಳು, ಪ್ರಮೇಯಗಳು ದೇಶ, ಕಾಲ ದಾಟಿ ಪಯಣಿಸಿ ಬಂದವು, ನಮಗೆ ದಕ್ಕಿದವು. ಶ್ರವಣೇಂದ್ರಿಯಗಳು ತೆರೆದುಕೊಂಡ ತೀಕ್ಷ್ಣತೆಯೇ ಒಂದು ಅದ್ಭುತ. ಆ ಅತಿಶಯದ ರವಷ್ಟಾದರೂ ಅಂಶ ಮನುಷ್ಯನಲ್ಲಿ ಮತ್ತೆ ವಿಜೃಂಭಿಸಬೇಕಿದೆ.

ವಾಚಕರ ವಾಣಿ

ಮೊಬೈಲ್ ಸದ್ದು ದಂಡಕ್ಕೆ ಆಹ್ವಾನ!

ಗಂಭೀರ ಪಿಡುಗಾಗಿರುವ ಶಬ್ದಮಾಲಿನ್ಯಕ್ಕೆ ಸ್ಮಾರ್ಟ್‌ಫೋನ್‌ಗಳು ಇನ್ನಷ್ಟು ಕೊಡುಗೆ ನೀಡುತ್ತಿವೆ. ಅದರಲ್ಲಿಯೂ ಬಸ್ ನಿಲ್ದಾಣ, ಹೋಟೆಲ್, ಬಸ್‌ಗಳಲ್ಲಿ ಈ ಪಿಡುಗು ಮೇರೆಮೀರಿದೆ. ಇದೇ ಕಾರಣಕ್ಕೆ ಇಂತಹ ಸ್ಥಳಗಳಲ್ಲಿ ಆಗಾಗ ಜಗಳಗಳು ಆಗುತ್ತಿರುತ್ತವೆ.

ಸರ್ಕಾರಿ ಬಸ್‌ಗಳಲ್ಲಿ ‘ಟಿಕೆಟ್ ಇಲ್ಲದ ಪ್ರಯಾಣ ದಂಡಕ್ಕೆ ಆಹ್ವಾನ’ ಎಂದು ಬರೆದಿರುವ ರೀತಿಯಲ್ಲಿಯೇ ‘ಮೊಬೈಲ್ ಸದ್ದು ದಂಡಕ್ಕೆ ಆಹ್ವಾನ’ ಎಂದು ಸಾರ್ವಜನಿಕ ಸ್ಥಳಗಳು ಮತ್ತು ಸರ್ಕಾರಿ ಬಸ್‌ಗಳಲ್ಲಿ ಬರೆಸಲು ಕ್ರಮ ಕೈಗೊಳ್ಳಬೇಕು. ಈ ರೀತಿ ತೊಂದರೆ ಕೊಡುವವರಿಂದ ದಂಡ ವಸೂಲು ಮಾಡಲು ಸಂಬಂಧಪಟ್ಟವರಿಗೆ ಅಧಿಕಾರ ನೀಡಬೇಕು.

ರಾಜಶೇಖರ ಮೂರ್ತಿ, ಬೆಳಗನಹಳ್ಳಿ, ಎಚ್.ಡಿ.ಕೋಟೆ

ಕೀಳು ಅಭಿರುಚಿಯ ವ್ಯಂಗ್ಯ

ರಾಹುಲ್ ಗಾಂಧಿ ಅವರ ‘ಭಾರತ್ ಜೋಡೊ’ ಯಾತ್ರೆಯನ್ನು ಬಿಜೆಪಿ ಸತತವಾಗಿ ವ್ಯಂಗ್ಯ ಮಾಡುತ್ತಿದೆ, ಟೀಕಿಸುತ್ತಿದೆ. ಟೀಕಿಸುವ ಹಕ್ಕು ಎಲ್ಲರಿಗೂ ಇರುವಂತೆ ಬಿಜೆಪಿಗೂ ಇದೆ. ಆದರೆ, ಅದು ಆರೋಗ್ಯಕರ ರೀತಿಯಲ್ಲಿ ಇರಬೇಕು. ಕಾಂಗ್ರೆಸ್ ಪಕ್ಷ ಏನೇ ಹೇಳಿದರೂ ಭಾರತ್ ಜೋಡೊ ಯಾತ್ರೆಗೆ ರಾಜಕೀಯ ಉದ್ದೇಶ ಇದ್ದೇ ಇದೆ. ಅದು ಕೂಡ ತಪ್ಪಲ್ಲ. ಆದರೆ ಇಡೀ ದೇಶವನ್ನು ಪಾದಯಾತ್ರೆ ಮೂಲಕ ದರ್ಶಿಸುವ ರಾಹುಲ್ ಅವರ ಉದ್ದೇಶ ಮತ್ತು ಅವರು ನೀಡುವ ಕೋಮು ಸೌಹಾರ್ದದ ಸಂದೇಶದ ಬಗೆಗೆ ಅಪಸ್ವರ ತೆಗೆಯುವಂತಹುದು ಏನೂ ಇಲ್ಲ.

ನಮ್ಮ ದೇಶ ವೈವಿಧ್ಯಕ್ಕೆ ಹೆಸರಾದುದು. ಅನೇಕ ಭಾಷೆಗಳನ್ನು ಮತ್ತು ವಿವಿಧ ಸಂಸ್ಕೃತಿಗಳನ್ನು ಒಳಗೊಂಡಿದೆ. ಇಂತಹ ದೇಶವನ್ನು ಅರ್ಥ ಮಾಡಿಕೊಳ್ಳಲು ಮತ್ತು ದೇಶವಾಸಿಗಳ ಕಷ್ಟ ನಷ್ಟಗಳನ್ನು ಅರಿಯಲು ಪಾದಯಾತ್ರೆ ಮಾಡುವುದು ಸ್ವಾಗತಾರ್ಹ. ಕಾಂಗ್ರೆಸ್ ನಾಯಕರ ಭಾಷಣಗಳ ಬಗೆಗೆ ತಕರಾರು ಇದ್ದರೆ ಅದನ್ನು ಆರೋಗ್ಯಕರ ನೆಲೆಯಲ್ಲಿ ಟೀಕಿಸಲಿ. ಅದನ್ನು ಬಿಟ್ಟು ರಾಹುಲ್ ಅವರನ್ನು ಆ್ಯನಿಮೇಷನ್ ಮೂಲಕ ಸಿನಿಮಾದ ಹಾಸ್ಯಪಾತ್ರಗಳಿಗೆ ಜೋಡಿಸಿ ವ್ಯಂಗ್ಯವಾಡುತ್ತಿರುವುದು ಕೀಳು ಅಭಿರುಚಿಯನ್ನು ಮತ್ತು ರಾಜಕೀಯ ಹತಾಶೆಯನ್ನು ತೋರಿಸುತ್ತದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಪದಗಳ ಲಾಲಿತ್ಯ!

ರೂಪಾಯಿ ಮೌಲ್ಯ ಕುಸಿಯುತ್ತಿಲ್ಲ
ಡಾಲರ್ ಮೌಲ್ಯ ವೃದ್ಧಿಸುತ್ತಿದೆ ಎಂದಿದ್ದಾರೆ
ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್.
ಇದೇ ಧಾಟಿಯಲ್ಲಿ ಪರಿಭಾವಿಸುವುದಾದರೆ,
ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ
ಭಾರತದ ಸ್ಥಾನ ಕುಸಿದಿಲ್ಲ,
ಇತರ ರಾಷ್ಟ್ರಗಳ ಜನ ಹೊಟ್ಟೆ
ಬಿರಿಯುವಂತೆ ತಿನ್ನುತ್ತಿದ್ದಾರೆ.
ದೇಶದಲ್ಲಿ ನಿರುದ್ಯೋಗ ಮಿತಿಮೀರಿಲ್ಲ
ಇತರ ದೇಶಗಳ ಜನ ಉದ್ಯೋಗ
ಗಳಿಸುವಲ್ಲಿ ಸಕ್ಷಮರಾಗುತ್ತಿದ್ದಾರೆ.
ದೇಶದಲ್ಲಿ ಧಾರ್ಮಿಕ ಅಸಹಿಷ್ಣುತೆ ಹೆಚ್ಚುತ್ತಿಲ್ಲ
ಇತರ ದೇಶಗಳ ಜನ ಸಹಿಷ್ಣುತೆಯಿಂದ
ಒಂದಾಗಿ ಬಾಳುತ್ತಿದ್ದಾರೆ...

ಆನಂದ ರಾಮತೀರ್ಥ, ಜಮಖಂಡಿ

ಚಿಲ್ಲರೆ ಕೊಡಿ ಸ್ವಾಮಿ ಚಿಲ್ಲರೆ

ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಚಿಲ್ಲರೆ ಸಮಸ್ಯೆಯು ಪ್ರಯಾಣಿಕರಿಗೆ ವಿಪರೀತ ಕಿರಿಕಿರಿ ಉಂಟುಮಾಡುತ್ತದೆ. ದಿನದ ಮೊದಲ ಟ್ರಿಪ್‌ಗೆ ಬರುವ ಕೆಲವು ನಿರ್ವಾಹಕರು ಚಿಲ್ಲರೆ ಸಮಸ್ಯೆಯಿಂದ ಸಾರ್ವಜನಿಕರೊಂದಿಗೆ ಜಗಳವಾಡುವುದನ್ನು ದಿನನಿತ್ಯ ನೋಡಬಹುದು. ಗ್ರಾಮೀಣ ಭಾಗದಲ್ಲಿ ಸಂಚರಿಸುವ ಬಸ್ಸುಗಳಲ್ಲಂತೂ ಪರಿಸ್ಥಿತಿ ಕೆಲವೊಮ್ಮೆ ವಿಕೋಪಕ್ಕೆ ಹೋಗುವ ಸಂದರ್ಭಗಳೂ ಉಂಟು. ಕೆಲವು ನಿಲ್ದಾಣಗಳಲ್ಲಿ ಇಬ್ಬರು– ಮೂವರಿಗೆ ಚಿಲ್ಲರೆ ಹಂಚಿಕೊಳ್ಳುವಂತೆ ತಿಳಿಸಿ, ಒಬ್ಬರ ಕೈಗೆ ಹಣ ಕೊಟ್ಟಾಗ ಪ್ರಯಾಣಿಕರು ಪರದಾಡುವ ಸ್ಥಿತಿ ಉಂಟಾಗುತ್ತದೆ.

ಕೆಲವರು ಕೆಲಸಕ್ಕೆ ತಡವಾಗುತ್ತಿದೆ ಎಂದು ಚಿಲ್ಲರೆಯನ್ನು ಬಿಟ್ಟುಹೋಗುತ್ತಾರೆ. ಅದೇ ದುಡ್ಡಿನಲ್ಲಿ ಬೇರೊಂದು ಬಸ್ಸಿಗೆ ಹೋಗಬೇಕಾದವರು ಚಿಲ್ಲರೆಗಾಗಿ ಅಂಗಡಿ ಮುಂದೆ ಬೇಡುತ್ತಾ ನಿಲ್ಲುತ್ತಾರೆ. ಪ್ರತಿದಿನ ಕೆಲಸಕ್ಕೆ ಬರುವ ನಿರ್ವಾಹಕರಿಗೆ ಡಿಪೊದಿಂದ ಬರುವಾಗಲೇ ನೂರರಿಂದ ಇನ್ನೂರು ರೂಪಾಯಿಯಷ್ಟು ಚಿಲ್ಲರೆಯನ್ನು ಕೊಟ್ಟು ಕಳುಹಿಸಬಾರದೇಕೆ?

ಸೋಮಶೇಖರ ಯು.ಟಿ., ಮೈಸೂರು

ಯಕ್ಷಗಾನ ಗುರು ಕೃತಿ ಮಾಹಿತಿಗೆ ಮನವಿ

ಯಕ್ಷಗಾನ ಗುರು, ಪ್ರಸಂಗಕರ್ತ, ಚಿಂತಕ ಹೊಸ್ತೋಟ ಮಂಜುನಾಥ ಭಾಗವತರು ತಮ್ಮ ಜೀವಮಾನವನ್ನೆಲ್ಲ ಯಕ್ಷಗಾನ ಶಿಕ್ಷಣ, ತರಬೇತಿ, ಶೋಧನೆ, ಸಂಶೋಧನೆಯಲ್ಲಿಯೇ ಪರಿವ್ರಾಜಕರಂತೆ ಸವೆಸಿದವರು. ಅವರು ಬಿಟ್ಟುಹೋಗಿರುವ ಜ್ಞಾನರಾಶಿಯು ನಾಡಿನಾದ್ಯಂತ ಅವರ ಶಿಷ್ಯರ, ಅಭಿಮಾನಿಗಳ, ಯಕ್ಷಪ್ರೇಮಿಗಳ ಮನೆಗಳಲ್ಲಿ ಚದುರಿಹೋಗಿವೆ. ಯಕ್ಷಲೋಕದ ಮುಂದಿನ ಪೀಳಿಗೆಗೆ, ಸಂಶೋಧಕರಿಗೆ, ಆಸಕ್ತರಿಗೆ ಅವುಗಳ ಪ್ರಯೋಜನ ಸಿಗಬೇಕೆಂಬ ಉದ್ದೇಶದಿಂದ ನಾವು ಅವರ ಅಭಿಮಾನಿಗಳು, ಶಿಷ್ಯರು, ಯಕ್ಷಪ್ರೇಮಿಗಳು ಕೆಲವರು ಸೇರಿ ಅವರ ಕುರಿತು ಕೃತಿಯೊಂದನ್ನು ತರುತ್ತಿದ್ದೇವೆ.

ಅದು ಅವರ ಕೃತಿಗಳ ಅವಲೋಕನ, ಮಹತ್ವ ನಿರ್ಣಯ ಹಾಗೂ ಮಾಹಿತಿ ಸಂಗ್ರಹಗಳನ್ನು ಹೊಂದಿರುವುದು. ಆದರೆ ಅವರ ಎಲ್ಲ ಕೃತಿಗಳೂ ಸಿಗುತ್ತಿಲ್ಲ. ನಮ್ಮ ಕೈಗೆ ಸಿಗದಿದ್ದರೂ ಅವು ಯಾರಲ್ಲಾದರೂ ಇದ್ದರೆ ಆ ಪ್ರತಿಗಳ ವಿವರ ಸ್ಥಿತಿ, ಉಳ್ಳವರ ಫೋನ್ ನಂಬರ್ ನೀಡಿದರೂ ಸಹಾಯವಾಗುತ್ತದೆ. ಇಂತಹ ಮಾಹಿತಿಗಳನ್ನು ಕೆಳಗಿನ ಸಂಪರ್ಕ ಸಂಖ್ಯೆಗಳ ಮೂಲಕ ನೀಡಬೇಕೆಂದು ಮನವಿ. ಡಾ. ವಿಜಯನಳಿನಿ ರಮೇಶ– 6360345757, ಸುಬ್ರಾಯ ಹೆಗಡೆ ಕೆರೆಕೊಪ್ಪ, 9482133366.

ಡಾ. ವಿಜಯನಳಿನಿ ರಮೇಶ, ಶಿರಸಿ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತವು 107ನೇ ಸ್ಥಾನಕ್ಕೆ ಕುಸಿದಿದೆ ಎಂದು ಹೇಳಿರುವ ಗ್ಲೋಬಲ್ ಹಂಗರ್ ಇಂಡೆಕ್ಸ್–2022 (ಜಿಎಚ್‌ಐ) ವರದಿಗೆ ಕೇಂದ್ರ ಸರ್ಕಾರವು ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಆದರೆ, ಪೌಷ್ಟಿಕ ಆಹಾರದ ಕೊರತೆಯನ್ನು ಸೂಚಿಸುವ ಹಲವು ಸೂಚಿಗಳಲ್ಲಿ ಭಾರತವು ಋಣಾತ್ಮಕ ಪ್ರಗತಿ ಸಾಧಿಸಿದೆ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ವರದಿಗಳೇ ಹೇಳುತ್ತವೆ


ಜಾಗತಿಕ ಹಸಿವು ಸೂಚ್ಯಂಕ
ಭಾರತದ ಸ್ಥಾನ ಕುಸಿದದ್ದೇಕೆ?

ಪ್ರಜಾವಾಣಿ ವಾರ್ತೆ

ಜಿಎಚ್‌ಐನಲ್ಲಿ ಭಾರತದ ಸ್ಥಾನವನ್ನು ನಿರ್ಧರಿಸುವಲ್ಲಿ ಅಪೌಷ್ಟಿಕತೆ, ಮಕ್ಕಳ ಕುಂಠಿತ ಬೆಳವಣಿಗೆ, ಮಕ್ಕಳ ಮರಣ ಪ್ರಮಾಣ ಮತ್ತು ಕಡಿಮೆ ತೂಕದ ಮಕ್ಕಳ ಪ್ರಮಾಣವನ್ನು ಪರಿಗಣಿಸಲಾಗಿದೆ. ಈ ಎಲ್ಲಾ ಸೂಚಿಗಳಲ್ಲಿ ಭಾರತವು ಉತ್ತಮ ಸ್ಥಿತಿಯಲ್ಲಿ ಇಲ್ಲ. ಕೆಲವು ಸೂಚಿಗಳಲ್ಲಿ ಭಾರತವು ಅಪಾಯಕಾರಿ ಸ್ಥಿತಿಯಲ್ಲಿ ಇದೆ ಎಂದು ಜಿಎಚ್‌ಐನಲ್ಲಿ ವಿವರಿಸಲಾಗಿದೆ. ಕೇಂದ್ರ ಆರೋಗ್ಯ ಸಚಿವಾಲಯವು ಬಿಡುಗಡೆ ಮಾಡಿರುವ 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5'ರ (ಎನ್‌ಎಫ್‌ಎಚ್‌ಎಸ್) ವರದಿಯಲ್ಲೂ, ಈ ಸೂಚಿಗಳನ್ನು ವಿವರಿಸಲಾಗಿದೆ. ದೇಶದಲ್ಲಿ ಅಪೌಷ್ಟಿಕತೆಯು ಅಪಾಯಕಾರಿ ಮಟ್ಟದಲ್ಲಿದೆ ಎಂಬುದನ್ನು ಈ ವರದಿಯ ದತ್ತಾಂಶಗಳೇ ಹೇಳುತ್ತವೆ. ಕೆಲವು ಸೂಚಿಗಳಲ್ಲಿ ಪ್ರಗತಿ ಸಾಧಿಸಲಾಗಿದೆಯಾದರೂ, ಕೆಲವು ಸೂಚಿಗಳಲ್ಲಿ ಹಿಮ್ಮುಖ ಪ್ರಗತಿ ದಾಖಲಾಗಿದೆ. ಅಂತಹ ಸೂಚಿಗಳಲ್ಲಿ ಈ ಹಿಂದಿಗಿಂತ, ಕೆಟ್ಟ ಸ್ಥಿತಿಗೆ ಹೋಗಿದ್ದೇವೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ. ಜಿಎಚ್‌ಐನಲ್ಲಿ ವಿವರಿಸಲಾಗಿರುವ ಅಂಶಗಳನ್ನೇ ಎನ್‌ಎಫ್‌ಎಚ್‌ಎಸ್ ದತ್ತಾಂಶಗಳು ಪ್ರತಿಧ್ವನಿಸುತ್ತವೆ. ಒಟ್ಟಾರೆ ಈ ದತ್ತಾಂಶಗಳೆಲ್ಲವೂ ಭಾರತದಲ್ಲಿ ಪೌಷ್ಟಿಕಾಂಶಯುಕ್ತ ಆಹಾರದ ಕೊರತೆ ಇದೆ ಎಂಬುದನ್ನೇ ಹೇಳುತ್ತವೆ.




ರಕ್ತಹೀನತೆ ಗ್ರಾಮಗಳಲ್ಲೇ ಅಧಿಕ



ರಕ್ತಹೀನತೆ: ಭಾರಿ ಏರಿಕೆ

ಅಪೌಷ್ಟಿಕತೆ ಅಥವಾ ಪೌಷ್ಟಿಕಾಂಶಯುಕ್ತ ಆಹಾರದ ಕೊರತೆ ಇದೆ ಎಂಬುದನ್ನು ರಕ್ತಹೀನತೆಯು ಸೂಚಿಸುತ್ತದೆ ಎನ್ನುತ್ತದೆ ವಿಶ್ವ ಆರೋಗ್ಯ ಸಂಸ್ಥೆ. ಹೀಗಾಗಿ ದೇಶದಲ್ಲಿನ ಅಪೌಷ್ಟಿಕತೆಯ ಪ್ರಮಾಣವನ್ನು ನಿರ್ಧರಿಸಲು ರಕ್ತಹೀನತೆಯನ್ನು ಪರಿಗಣಿಸಲಾಗುತ್ತದೆ. ಭಾರತದಲ್ಲಿ ರಕ್ತಹೀನತೆಯ ಪ್ರಮಾಣ ಅತ್ಯಧಿಕ ಮಟ್ಟದಲ್ಲಿದೆ ಮತ್ತು ಅದು ಏರಿಕೆಯಾಗುತ್ತಿದೆ ಎಂದು ಎನ್‌ಎಫ್‌ಎಚ್‌ಎಸ್ ದತ್ತಾಂಶಗಳು ಹೇಳುತ್ತವೆ.

ದೇಶದ ಎಲ್ಲಾ ವಯಸ್ಸಿನ ಮತ್ತು ಲಿಂಗದ ಜನರಲ್ಲಿ ರಕ್ತಹೀನತೆ ದೊಡ್ಡ ಪ್ರಮಾಣದಲ್ಲೇ ಇದೆ. ಪುರುಷರಿಗೆ ಹೋಲಿಸಿದರೆ, ರಕ್ತಹೀನತೆಯಿಂದ ಬಳಲುತ್ತಿರುವ ಮಹಿಳೆಯರ ಪ್ರಮಾಣ ಒಂದು ಪಟ್ಟು ಹೆಚ್ಚು. ಎಲ್ಲಕ್ಕಿಂತ ಮುಖ್ಯವಾಗಿ ದೇಶದಲ್ಲಿನ 6 ತಿಂಗಳಿಂದ 59 ತಿಂಗಳ ವಯಸ್ಸಿನ ಮಕ್ಕಳಲ್ಲಿ ರಕ್ತಹೀನತೆಯು ವಿಪರೀತ ಪ್ರಮಾಣದಲ್ಲಿದೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ. ಒಟ್ಟಾರೆ ಇವು ಅಪೌಷ್ಟಿಕತೆ ಅಥವಾ ಪೌಷ್ಟಿಕಾಂಶಯುಕ್ತ ಆಹಾರದ ಕೊರತೆ ಅಥವಾ ಹಸಿವಿನ ಪ್ರಮಾಣವನ್ನು ಸೂಚಿಸುತ್ತವೆ.




- ಈ ವಯಸ್ಸಿನ ಮಕ್ಕಳಲ್ಲಿ ರಕ್ತಹೀನತೆಯು ಅತ್ಯಧಿಕ ಪ್ರಮಾಣದಲ್ಲಿದೆ. 2015–16ರಲ್ಲಿ ಶೇ 58.6ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದರೆ, 2019–21ರಲ್ಲಿ ಇಂತಹ ಮಕ್ಕಳ ಪ್ರಮಾಣ ಶೇ 67.1ಕ್ಕೆ ಏರಿಕೆಯಾಗಿದೆ. ಈ ವಯಸ್ಸಿನ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಸಲು, ಸರ್ಕಾರವು ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಈ ಕಾರ್ಯಕ್ರಮಗಳ ಮೂಲಕ ಕಬ್ಬಿಣಾಂಶ ಹೆಚ್ಚಿಸುವ ಮಾತ್ರೆಗಳು, ಪೌಷ್ಟಿಕ ಆಹಾರ, ಹಾಲು–ಮೊಟ್ಟೆಗಳನ್ನು ನೀಡಲಾಗುತ್ತಿದೆ. ಆದರೂ, ಈ ವಯಸ್ಸಿನ ಮಕ್ಕಳಲ್ಲಿ ರಕ್ತಹೀನತೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ
- 15–49 ವರ್ಷದ ಮಹಿಳೆಯರು ಮತ್ತು ಗರ್ಭಿಣಿಯರಲ್ಲಿ ರಕ್ತಹೀನತೆಯು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಆಹಾರ ಪೂರೈಕೆ ಮಾಡಲು ಹಲವು ಕಾರ್ಯಕ್ರಮಗಳನ್ನು ಸರ್ಕಾರ ನಡೆಸುತ್ತಿದೆ. ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಮೂಲಕ ಇದನ್ನು ಒದಗಿಸಲಾಗುತ್ತಿದೆ. ಆದರೆ, ಇವು ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ ಎಂಬುದನ್ನು ರಕ್ತಹೀನತೆ ಪ್ರಮಾಣದಲ್ಲಿ ಆಗಿರುವ ಏರಿಕೆಯು ಸೂಚಿಸುತ್ತದೆ
- ಮಕ್ಕಳು ಮತ್ತು ಮಹಿಳೆಯರಿಗೆ ಹೋಲಿಸಿದರೆ, ಪುರುಷರಲ್ಲಿ ರಕ್ತಹೀನತೆಯು ಕಡಿಮೆ ಇದೆ. ಆಹಾರ ಭದ್ರತಾ ಕಾಯ್ದೆ ಅಡಿ ಒದಗಿಸಲಾಗುತ್ತಿರುವ ಪಡಿತರದ ಫಲಾನುಭವಿಗಳಲ್ಲಿ ಈ ಪುರುಷರೂ ಬರುತ್ತಾರೆ. ಆದರೆ, ಈ ಅವಧಿಯಲ್ಲಿ ಪುರುಷರಲ್ಲೂ ರಕ್ತಹೀನತೆ ಪ್ರಮಾಣ ಏರಿಕೆಯಾಗಿದೆ. ಪೌಷ್ಟಿಕ ಆಹಾರ ಪೂರೈಕೆಗೆ ಮತ್ತು ರಕ್ತಹೀನತೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ ಎಂಬುದನ್ನು ಇದು ಸೂಚಿಸುತ್ತದೆ

ಆಧಾರ: ಎನ್‌ಎಫ್‌ಎಚ್‌ಎಸ್ ವರದಿಗಳು, ಜಾಗತಿಕ ಹಸಿವು ಸೂಚ್ಯಂಕ ವರದಿಗಳು, ಪಿಟಿಐ

ದೇಶಕ್ಕೆ ಸವಾಲಾದ ಅಪೌಷ್ಟಿಕತೆ

ದೇಶದ 5 ವರ್ಷದೊಳಗಿನ ಮಕ್ಕಳು ಗಂಭೀರ ಸ್ವರೂಪದ ಅಪೌಷ್ಟಿಕತೆ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂಬುದನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್) 2019–21ರ ವರದಿಯ ದತ್ತಾಂಶಗಳು ದೃಢಪಡಿಸುತ್ತವೆ. ಈ ಹಿಂದಿನ 2015–16ನೇ ಸಾಲಿನ ಸಮೀಕ್ಷೆಯ ದತ್ತಾಂಶಗಳ ಜೊತೆ 2019–21ನೇ ಸಾಲಿನ ಸಮೀಕ್ಷೆಯ ದತ್ತಾಂಶಗಳನ್ನು ಹೋಲಿಸಿದರೆ, ಅಪೌಷ್ಟಿಕತೆ ನಿವಾರಣೆಯಲ್ಲಿ ಸುಧಾರಣೆ ಕಂಡುಬಂದಿದೆ. ಆದರೆ, ಅದು ಅಲ್ಪ ಪ್ರಮಾಣದ್ದು ಎಂಬುದು ಗಮನಾರ್ಹ

5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ–2019–21 (ಪ್ರತಿ 1,000 ಮಕ್ಕಳಿಗೆ)	ಒಟ್ಟು	ನಗರ	ಗ್ರಾಮೀಣ
	41.9	31.5	45.7



- ದೇಶದಲ್ಲಿ ಜನಿಸುವ ಪ್ರತಿ 1,000 ಮಕ್ಕಳ ಪೈಕಿ ಸರಿಸುಮಾರು 42 ಮಕ್ಕಳು ಅಪೌಷ್ಟಿಕತೆಯ ಕಾರಣಕ್ಕೆ ಪ್ರಾಣ ಕಳೆದುಕೊಳ್ಳುತ್ತಿವೆ. ಈ ಮಕ್ಕಳಿಗೆ ತಮ್ಮ ಐದನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಸಂಖ್ಯೆಯು ಗ್ರಾಮೀಣ ಭಾಗದಲ್ಲಿ ಹೆಚ್ಚು. ಗ್ರಾಮೀಣ ಪ್ರದೇಶದ ಐದು ವರ್ಷದೊಳಗಿನ 1,000 ಮಕ್ಕಳ ಪೈಕಿ ಸರಿಸುಮಾರು 46 ಮಕ್ಕಳು ಪ್ರಾಣ ಕಳೆದುಕೊಳ್ಳುತ್ತಿವೆ. ಸರಿಯಾದ ಆಹಾರ, ಪೋಷಣೆ, ಆರೈಕೆ ಸಿಗದ ಕಾರಣ ಮಕ್ಕಳು ಜೀವ ಬಿಡುತ್ತಿವೆ. ಇದು ಗಣನೀಯವಾಗಿ ಕಡಿಮೆಯಾದಾಗ ಮಾತ್ರ, ಅಪೌಷ್ಟಿಕತೆ ನೀಗಿದೆ ಎಂಬ ತೀರ್ಮಾನಕ್ಕೆ ಬರಬಹುದು
- ಮಕ್ಕಳು ತಮ್ಮ ವಯಸ್ಸಿಗೆ ತಕ್ಕಷ್ಟು ಎತ್ತರಕ್ಕೆ ಬೆಳೆಯಲಿಲ್ಲ ಎಂದಾದರೆ, ಅದನ್ನೂ ಅಪೌಷ್ಟಿಕತೆ ಎಂದು ಪರಿಗಣಿಸಲಾಗುತ್ತದೆ. ದೇಶದ ಐದು ವರ್ಷದೊಳಗಿನ ಶೇ 35.5ರಷ್ಟು ಮಕ್ಕಳು ಈ ಸಮಸ್ಯೆ ಎದುರಿಸುತ್ತಿದ್ದಾರೆ ಎಂಬುದು ಪರಿಸ್ಥಿತಿಯ ಗಂಭೀರತೆಯನ್ನು ವಿವರಿಸುತ್ತದೆ. ಅಪೌಷ್ಟಿಕತೆಯ ಕಾರಣಕ್ಕೆ, ಗ್ರಾಮೀಣ ಭಾಗದ ಶೇ 37ರಷ್ಟು ಮಕ್ಕಳು ದೈಹಿಕವಾಗಿ ಎತ್ತರ ಬೆಳೆಯಲು ಸಾಧ್ಯವಾಗುತ್ತಿಲ್ಲ. 2005–06ನೇ ಸಾಲಿನಲ್ಲಿ ಶೇ 48ರಷ್ಟು ಮಕ್ಕಳು ಈ ಸಮಸ್ಯೆ ಎದುರಿಸುತ್ತಿದ್ದರು. ಅಲ್ಲಿಂದ ಹತ್ತು ವರ್ಷಗಳಲ್ಲಿ ಈ ಪ್ರಮಾಣ ಶೇ 38ಕ್ಕೆ ಕುಸಿದಿದೆ
- ಮಕ್ಕಳು ತಮ್ಮ ಎತ್ತರಕ್ಕೆ ತಕ್ಕಷ್ಟು ತೂಕ ಹೊಂದಿಲ್ಲದಿರುವುದೂ ಅಪೌಷ್ಟಿಕತೆಯ ವ್ಯಾಪ್ತಿಯಲ್ಲಿ ಬರುತ್ತದೆ. ದೇಶದಲ್ಲಿ 5 ವರ್ಷದೊಳಗಿನ ಶೇ 19.3ರಷ್ಟು ಮಕ್ಕಳು ಈ ಸ್ವರೂಪದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎಂದು ಎನ್‌ಎಫ್‌ಎಚ್‌ಎಸ್ ಸಮೀಕ್ಷಾ ವರದಿ ಅಭಿಪ್ರಾಯಪಟ್ಟಿದೆ. ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗದಿರುವ ಪರಿಸ್ಥಿತಿ ಉಂಟಾದಾಗ, ಆ ಮಕ್ಕಳು ಸಹಜವಾಗಿಯೇ ಸಣಕಲಾಗಿ ಕಾಣಿಸುತ್ತವೆ. ವಯಸ್ಸಿಗೆ ತಕ್ಕಂತೆ ದೈಹಿಕವಾಗಿ ಎತ್ತರ ಬೆಳೆದರೂ, ದೇಹದ ತೂಕ ಕಡಿಮೆಯಿರುತ್ತದೆ. ಇದು ಗಂಭೀರ ಅಪೌಷ್ಟಿಕತೆ ಸಮಸ್ಯೆ

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು



ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಭಾಗವಾಗಿ ಆಯಾ ರಾಜ್ಯಗಳ ಸ್ಥಳೀಯ ಭಾಷೆಯಲ್ಲಿ ವೈದ್ಯಕೀಯ ಶಿಕ್ಷಣ ನೀಡಲು ಕೇಂದ್ರ ಸರ್ಕಾರ ಮುಂದಾಗಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 252

ಕಲ್ಯಾಣಕ್ಕೆ ಮುಹೂರ್ತ

ಪದ್ಮಾದೇವಿಯ ಪಾತಿವ್ರತ್ಯವನ್ನು ಪರೀಕ್ಷಿಸಲು ಹೋಗಿ ಶಾಪಗ್ರಸ್ತನಾದ ಧರ್ಮಪುರುಷ, ಅವಳ ಪಾತಿವ್ರತ್ಯಕ್ಕೆ ಸಂತುಷ್ಟನಾದ. ಆದರೆ ಸಾಧ್ವಿ ಪದ್ಮಾದೇವಿಗೆ ಪಶ್ಚಾತ್ತಾಪವಾಯಿತು. 'ಓ ಧರ್ಮಪುರುಷ, ನೀನು ಎಲ್ಲ ಕರ್ಮಗಳಿಗೂ ಸಾಕ್ಷಿ. ಹೀಗಾಗಿ ನಿನ್ನ ಪರೀಕ್ಷೆಯಿಂದ ನನಗೇನು ನೋವಾಗಲಿಲ್ಲ. ಆದರೆ ನಾನು ಶಪಿಸಿದ್ದರಿಂದ ನೋವಾಗಿದೆ. ನಾನು ಕೊಟ್ಟ ಶಾಪ ಎಂದೆಂದಿಗೂ ಶಮನವಾಗಲಾರದು. ನನ್ನ ಶಾಪದ ತಾಪವನ್ನು ನೀನು ಅನುಭವಿಸಲೇಬೇಕು; ಆದರೆ ನಿನ್ನ ಅಸ್ತಿತ್ವ ನಾಶವಾಗಬಾರದು. ಏಕೆಂದರೆ, ನೀನಿಲ್ಲದೆ ಜಗವಿಲ್ಲ. ಹೀಗಾಗಿ, ನೀನು ಕೃತಯುಗದಲ್ಲಿ ನಾಲ್ಕು ಪಾದಗಳಿಂದ ಪೂರ್ಣನಾಗಿ ಹುಣ್ಣಿಮೆಯ ಚಂದ್ರನಂತೆ ವಿರಾಜಿಸು. ಆದರೆ ತ್ರೇತಾಯುಗದಲ್ಲಿ ನಿನ್ನ ಒಂದು ಪಾದವು ನಾಶವಾಗುತ್ತೆ. ದ್ವಾಪರದಲ್ಲಿ ಎರಡು ಪಾದಗಳು ಕ್ಷಯಿಸುತ್ತವೆ. ಕಲಿಯುಗದಲ್ಲಿ ಮೂರನೆಯ ಪಾದವೂ ಕ್ಷಯಿಸುತ್ತದೆ. ಕಲಿಯುಗದ ಕೊನೆಯಲ್ಲಿ ನಿನ್ನ ನಾಲ್ಕನೇ ಪಾದವೂ ನಾಶವಾಗುವುದು. ನಾಲ್ಕು ಯುಗಗಳು ಕೊನೆಗೊಂಡು, ಮತ್ತೆ ಹೊಸ ಕೃತಯುಗ ಬಂದಾಗ ನೀನು ನಾಲ್ಕು ಪಾದಗಳುಳ್ಳವನಾಗಿ ಪರಿಪೂರ್ಣನಾಗುವೆ. ಕೃತಯುಗದಲ್ಲಿ ಎಲ್ಲೆಲ್ಲಿಯೂ ನೀನು ಧರ್ಮವನ್ನು ಹರಡುವೆ. ಮಿಕ್ಕ ಯುಗಗಳಲ್ಲಿ ಅಷ್ಟು ವ್ಯಾಪಕತೆ ನಿನಗಿರುವುದಿಲ್ಲ' ಎಂದಳು.

ಪದ್ಮಾದೇವಿಯ ಮಾತನ್ನು ಕೇಳಿ ಧರ್ಮಪುರುಷ 'ಎಲೈ ಸಾಧ್ವಿ, ಪತಿಭಕ್ತಳಾದ ನಿನಗೆ ಮಂಗಳವಾಗಲಿ. ನಿನ್ನ ಪತಿಗೆ ವರವನ್ನು ಕೊಡುವೆ. ನಿನ್ನ ಪತಿಯು ಯುವಕನಾಗಲಿ, ರತಿಯಲ್ಲಿ ಸಮರ್ಥನೂ, ನೀತಿಯಲ್ಲಿ ಧಾರ್ಮಿಕನೂ ಆಗಲಿ. ರೂಪವಂತನಾಗಿ, ಗುಣವಂತನಾಗಿ ಅವನ ಯೌವನ ಸ್ಥಿರವಾಗಿರಲಿ. ಹಾಗೆಯೇ, ನಿನ್ನ ಪತಿಯು ಮಾರ್ಕಂಡೇಯನಿಗಿಂತಲೂ ಚಿರಂಜೀವಿಯಾಗಲಿ, ಕುಬೇರನಿಗಿಂತಲೂ ಧನವಂತನಾಗಲಿ, ಇಂದ್ರನಿಗಿಂತಲೂ ಐಶ್ವರ್ಯವಂತನಾಗಲಿ. ಹರಿಯಂತೆ ಶಿವಭಕ್ತನಾಗಿರಲಿ, ಕಪಿಲನಿಗಿಂತಲೂ ಶ್ರೇಷ್ಠಸಿದ್ಧನಾಗಿರಲಿ, ಬುದ್ಧಿಯಲ್ಲಿ ಬೃಹಸ್ಪತಿಯಂತಾಗಲಿ. ವಿಧಿಯಂತೆ ಸರ್ವಸಮತೆಯುಳ್ಳವನಾಗಲಿ. ನೀನು ಜೀವಮಾನಪರ್ಯಂತ ಪತಿಸೌಭಾಗ್ಯವುಳ್ಳವಳಾಗು. ನಿನ್ನ ಯೌವನ ಸಹ ನಿನ್ನ ಪತಿಯಂತೆ ಸ್ಥಿರವಾಗಿರಲಿ. ನೀನು ಹತ್ತು ಮಕ್ಕಳ ತಾಯಿಯಾಗುವೆ. ಆ ಮಕ್ಕಳು ಗುಣಶೀಲರೂ, ಬಹಳ ಕಾಲ ಬದುಕುವವರೂ ಆಗುವರು. ತಂದೆಗಿಂತಲೂ ಉತ್ತಮರಾಗುವರು' ಎಂದು ವರವನ್ನಿತ್ತ.

ಮುಂದೆ ಪದ್ಮಾದೇವಿಯು ಯುವಕನಾದ ಪತಿ ಪಿಪ್ಪಲಾದನೊಡನೆ ಏಕಾಂತದಲ್ಲಿ ಯಥೇಚ್ಛೆಯಾಗಿ ವಿಹರಿಸಿದಳು. ಅವಳಿಗೆ ಗುಣವಂತರಾದ ಮಕ್ಕಳು ಜನಿಸಿದರು. ಪದ್ಮಾ ಪಿಪ್ಪಲಾದ ದಂಪತಿಗಳು ಇಹಪರಗಳೆರಡರಲ್ಲೂ ಸುಖಪಡೆಯುವಂತಹ ಕರ್ಮವನ್ನು ಮಾಡಿದರು ಎಂದು ಅನರಣ್ಯನ ಕಥೆಯನ್ನ ಹೇಳಿದ ವಸಿಷ್ಠ, 'ಎಲೈ ಹಿಮವಂತ, ಪದ್ಮಾ ಪಿಪ್ಪಲಾದ ದಂಪತಿಗಳ ಇತಿಹಾಸವನ್ನು ವಿಸ್ತಾರವಾಗಿ ಹೇಳಿರುವೆ. ಪಾರ್ವತಿಯನ್ನು ಶಂಕರನಿಗೆ ಮದುವೆ ಮಾಡಿಕೊಡು. ಈ ವಿಷಯದಲ್ಲಿ ಹಠವನ್ನು ಬಿಡಿ. ಇಂದಿಗೆ ಏಳು ದಿವಸ ಕಳೆದು ಎಂಟನೆಯ ದಿನದಲ್ಲಿ ಸೋಮವಾರ ಬರುವುದು. ಕರ್ಕಾಟಕ ಲಗ್ನ, ಲಗ್ನಾಧಿಪತಿಯಾದ ಚಂದ್ರನು ಲಗ್ನದಲ್ಲಿಯೇ ಬುಧನೊಡನೆ ಇರಬೇಕು. ಚಂದ್ರನಕ್ಷತ್ರವಾದ ರೋಹಿಣಿಯೊಡನೆ ಕೂಡಿದ್ದು, ಚಂದ್ರನು ಶುದ್ಧನಾಗಿ ಮುದಿತಾವಸ್ಥೆಯಲ್ಲಿರಬೇಕು. ಶುಭಗ್ರಹಗಳ ದೃಷ್ಟಿ ಅಥವಾ ಸಂಬಂಧವು ಲಗ್ನಕ್ಕಿರಬೇಕು. ಪಾಪಗ್ರಹದೃಷ್ಟಿ ಇರಬಾರದು. ಪುತ್ರಕಾರಕನಾದ ಗುರುವು ಕೇಂದ್ರದಲ್ಲಿರಬೇಕು. ಇಂತಹ ಪುತ್ರಪ್ರದವೂ ಪತಿಸೌಭಾಗ್ಯಕರವೂ ಆದ ಮುಹೂರ್ತದಲ್ಲಿ ಪಾರ್ವತಿಯನ್ನು ಪರಮೇಶ್ವರನಿಗೆ ಧಾರೆಯೆರೆದುಕೊಟ್ಟು ನೀನು ಕೃತಕೃತ್ಯನಾಗು' ಎಂದ.

ಇಲ್ಲಿಗೆ ಪಾರ್ವತೀಖಂಡದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇದೇ 8ರಂದು ಚೆನ್ನೈನ ಮಾರುಕಟ್ಟೆಯಲ್ಲಿ ತರಕಾರಿ ಖರೀದಿಸಿದ ವಿಡಿಯೊ ವೈರಲ್ ಆಗಿತ್ತು. ಮಹಾರಾಷ್ಟ್ರದ ಕಾಂಗ್ರೆಸ್ ಸೇವಾದಳ ಘಟಕ ಮಾಡಿರುವ ಟ್ವೀಟ್‌ನಲ್ಲಿ ನಿರ್ಮಲಾ ಅವರು ಈರುಳ್ಳಿ ಖರೀದಿಸುತ್ತಿರುವ ಚಿತ್ರವಿದೆ. 'ಬೆಲೆ ಏರಿಕೆ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಸುವಾಗ ಈರುಳ್ಳಿ ಸೇವಿಸುವುದಿಲ್ಲ ಎಂದು ಹೇಳಿದ್ದ ನಿರ್ಮಲಾ ಅವರು ಮಾರುಕಟ್ಟೆಯಲ್ಲಿ ಈರುಳ್ಳಿ ಖರೀದಿಸಿದ್ದಾರೆ' ಎಂದು ಹೇಳಿದೆ. ಹಲವು ಸಾಮಾಜಿಕ ಜಾಲತಾಣ ಬಳಕೆದಾರರೂ ಇದೇ ವಾದ ಮಂಡಿಸಿದ್ದಾರೆ.



Image Comparision (Credit: Twitter)

ವೈರಲ್ ಆಗಿರುವ ಚಿತ್ರವನ್ನು ತಿರುಚಲಾಗಿದೆ ಎಂದು ಲಾಜಿಕಲ್ ಇಂಡಿಯನ್ ಜಾಲತಾಣವು ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಸಚಿವರ ಅಧಿಕೃತ ಟ್ವಿಟರ್ ಖಾತೆಯಲ್ಲಿ ಹಾಕಲಾಗಿರುವ ಮೂಲ ವಿಡಿಯೊ ಪರಿಶೀಲಿಸಲಾಗಿದೆ. ನಿರ್ಮಲಾ ಅವರು ಕೆಸುವಿನ ಗೆಡ್ಡೆಯನ್ನು ಬುಟ್ಟಿಗೆ ಹಾಕುತ್ತಿರುವ ದೃಶ್ಯವನ್ನು ತಿರುಚಿ, ಅವರು ಈರುಳ್ಳಿ ಖರೀದಿಸಿದಂತೆ ತೋರುವ ಹಾಗೆ ಮಾರ್ಪಡಿಸಲಾಗಿದೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು — ಗುರುರಾಜ ಕರಜಗಿ



ಋಣಭಾರ ಕರಗುವಿಕೆ

ಎಂದಿಗಾನುಂ ನಿನ್ನ ಪೂರ್ವಋಣಗಳ ಲೆಕ್ಕ |
ನೊಂದಬೇಕೆಂದಿರ್ದೊಡಿಂದೆ ಮೊದಲನಿಡು ||
ಅಂದಿಸಿಕೊ ಹೆರರೆನಿಪರನು ಹೃದಯವಿಸ್ತರದೆ |
ಹೊಂದು ವಿಶ್ವಾತ್ಮತೆಯ – ಮಂಕುತಿಮ್ಮ || 737 |

ಪದ-ಅರ್ಥ: ಎಂದಿಗಾನುಂ = ಎಂದಿಗಾದರೂ, ಲೆಕ್ಕನೊಂದಬೇಕೆಂದಿರ್ದೊಡೆಂದ = ಲೆಕ್ಕನು + ಒಂದಬೇಕೆಂದಿರ್ದೊಡೆ(ಮುಗಿಸಬೇಕೆಂದಿದ್ದರೆ) + ಇಂದೆ, ಅಂದಿಸಿಕೊ = ಜೋಡಿಸಿಕೊ, ಹೆರರೆನಿಪರನು = ಹೆರರು(ಪರಕೀಯರು) + ಎನಿಪರನು(ಎನ್ನುವ ವರನ್ನು), ಹೃದಯವಿಸ್ತರದೆ = ಹೃದಯವೈಶಾಲ್ಯದಿಂದ.

ವಾಚ್ಯಾರ್ಥ: ಎಂದಿಗಾದರೂ ನಿನಗೆ ಪೂರ್ವಕರ್ಮಗಳ ಲೆಕ್ಕವನ್ನು ಮುಗಿಸಬೇಕು ಎಂದುಕೊAಡಿದ್ದರೆ, ಇಂದೇ ಮೊದಲ ಹೆಜ್ಜೆ ಇಡು. ಪರಕೀಯರು ಎನ್ನುವವರನ್ನೆಲ್ಲ ನಿನ್ನ ಬದುಕಿಗೆ ಹೊಂದಿಸಿಕೋ. ವಿಶ್ವಾತ್ಮತೆಯನ್ನು ಪಡೆ.

ವಿವರಣೆ: ನಮ್ಮೆಲ್ಲ ಶಾಸ್ತ್ರಗಳ ಸಾರಂಶವನ್ನು ಗಮನಿಸಿದರೆ, ಅವುಗಳ ಧ್ಯೇಯದ ಅಥವಾ ಗುರಿಯ ಮಾತನ್ನು ಹೀಗೆಂದು ಹೇಳಬಹುದು. "ಯಾವ ಮನುಷ್ಯನು ಸಮಸ್ತ ಜೀವಜಂತುಗಳೂ ತನ್ನೊಳಗೇ, ತನ್ನ ಅಂಶವಾಗಿಯೇ, ಸೇರಿಕೊಂಡಿವೆಯೆಂಬಂತೆ, ಅಭೇದ ಬುದ್ಧಿಯಿಂದ ನಡೆದುಕೊಳ್ಳುತ್ತಾನೋ ಮತ್ತು ಯಾರು ತನ್ನ ಒಳಗಿರುವ ಆತ್ಮವನ್ನೇ ಸಮಸ್ತ ಜೀವಜಂತುಗಳಲ್ಲಿಯೂ ಕಾಣುತ್ತ ಅವುಗಳ ಅನುಭವದಲ್ಲಿ ಸಹಭಾಗಿಯಾಗಿರುತ್ತಾನೋ, ಅವನಿಗೆ ಶೋಕವಿರದು, ಅವನನ್ನು ಪಾಪ ಸೋಕದು". ಯಾಕೆ ಶಾಸ್ತ್ರಗಳು ಹೀಗೆ ಹೇಳುತ್ತವೆ? ನಮ್ಮ ಪರಂಪರೆಯಲ್ಲಿ ಒಂದು ನಂಬಿಕೆ ಇದೆ. ಅದೆಂದರೆ ಪ್ರತಿಯೊಬ್ಬ ಮನುಷ್ಯ ಒಂದು ಋಣದ ಹೊರೆಯನ್ನೇ ಹೊತ್ತು ಬಂದಿರುತ್ತಾನೆ. ಅದು ಪೂರ್ವಜನ್ಮದ ಕರ್ಮಫಲವೋ, ಈ ಜನ್ಮದಲ್ಲಿ ತಿಳಿದೋ, ತಿಳಿಯದೆಯೋ ಮಾಡಿದ ಕರ್ಮಫಲವೋ ಆಗಿದ್ದೀತು. ನಾವು ಆ ಋಣಭಾರವನ್ನು ಕಡಿಮೆಮಾಡಿಕೊಂಡಷ್ಟೂ ನಮಗೇ ಕ್ಷೇಮ. ಇದಕ್ಕಾಗಿ ಕಗ್ಗ ಒಂದು ಸೂತ್ರವನ್ನು ಹೇಳುತ್ತದೆ. ಋಣವನ್ನು ಕಳೆದುಕೊಳ್ಳುವ ಮೊದಲ ಹೆಜ್ಜೆಯೆಂದರೆ, ಹೃದಯ ವೈಶ್ಯಾಲತೆಯಿಂದ, ಬೇರೆಯವರು ಎನ್ನಿಸಿಕೊಳ್ಳುವ ಎಲ್ಲರನ್ನೂ, ನನ್ನವರೆಂದು ತಿಳಿದು ಸರ್ವಾತ್ಮತೆಯನ್ನು ಹೊಂದಬೇಕು. ನಮಗೆ ಇಂದು ಲಭ್ಯವಿರುವ ಜಲಮೂಲ, ಹಿರಿಯರು ಹುಡುಕಿದ್ದು, ನಮ್ಮ ಆಹಾರ ವಿಧಾನಗಳು, ಕೃಷಿಪದ್ಧತಿಗಳು, ಹಿಂದಿನಿಂದ ಬಂದವುಗಳು, ನಮಗೆ ದೊರಕಿದ ಜ್ಞಾನ ಹಿಂದಿನವರು, ಹಿರಿಯರು, ಜ್ಞಾನಿಗಳು ನೀಡಿದ ದಾನ. ಅಂದರೆ, ಇಂದು ನಾವು ನಮ್ಮದು ಎನ್ನುವುದೆಲ್ಲ ಬೇರೆಯವರ ಕೃಪೆ, ಕರುಣೆಯಿಂದ ದಕ್ಕಿದ್ದು. ಆ ಋಣ ನಮ್ಮ ಮೇಲೆ ಸದಾಕಾಲ ಇರುತ್ತದೆ. ಅದನ್ನು ತೀರಿಸುವುದಕ್ಕೆ ಒಂದೇ ಹಾದಿಯೆಂದರೆ, ನಮಗೆ ದಕ್ಕಿದ್ದನ್ನು, ಪ್ರೀತಿಯಿಂದ, ಉದಾರತೆಯಿಂದ ಎಲ್ಲರಿಗೂ ಹಂಚಿಬಿಡುವುದು. ಅಗತ್ಯವಿರುವವರಿಗೆ ತನು, ಮನ, ಧನಗಳಿಂದ ನೀಡುತ್ತ ಬರಬೇಕು. ಅದಕ್ಕೆ, ಎಲ್ಲರೂ ನಮ್ಮವರೇ ಎಂಬ ವಿಶ್ವಾತ್ಮತೆಯ ಭಾವ ಬರಬೇಕು. ಹಾಗಾಗುವುದಕ್ಕೆ ಹೃದಯ ವಿಸ್ತಾರವಾಗಬೇಕು. ಹಾಗೆ ಸದಾಕಾಲ ಪ್ರಪಂಚಕ್ಕಾಗಿ ದುಡಿದ ಜನ ಋಣಕ್ಷಯಕ್ಕೆ ಮಾರ್ಗದರ್ಶಿಯಾಗಿದ್ದಾರೆ ವಿಜ್ಞಾನಿಗಳು, ಶ್ರೇಷ್ಠ ಎಂಜಿನಿಯರ್‌ಗಳು, ಸಂತರು, ಪ್ರಾಮಾಣಿಕ ರಾಜಕಾರಣಿಗಳು, ಸಮಾಜಸೇವಕರು, ಕಲಾವಿದರು ಇವರೆಲ್ಲ ಕೇವಲ ತಮ್ಮ ಸ್ವಾರ್ಥವನ್ನು ಗಮನಿಸದೆ ಪ್ರಪಂಚಕ್ಕೆ ಒಳ್ಳೆಯದಾಗಲಿ ಎಂದುದುಡಿದದ್ದು ಅವರ ಋಣಗಳ ಲೆಕ್ಕವನ್ನು ಕರಗಿಸುವ ಪ್ರಯತ್ನ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಅಕ್ಟೋಬರ್ 18, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಅಷ್ಟಮಿ ಗಂ. 11-58 ನಕ್ಷತ್ರ: ಪುಷ್ಯ ಅಹೋರಾತ್ರ ಯೋಗ: ಸಿದ್ಧ ಗಂ. 16-52, ಕರಣ: ಕೌಲವ ಗಂ. 11-58, ಕನ್ಯಾ ಮಾಸದ 31 ನೇ ದಿನ.
ರಾಹುಕಾಲ : ಮಧ್ಯಾಹ್ನ 03-00 – 04:30 ಸೂರ್ಯೋದಯ : 06-25 ಸೂರ್ಯಾಸ್ತ : 06-06, ಮುಸ್ಲಿಂ ದಿನಾಂಕ : 21 ರಬೀಉಲ್ಲಾವಲ್
ದಿನ ವಿಶೇಷ : ಕಾವೇರಿ ಸಂಕ್ರಮಣ ಸ್ನಾನ, ಅಹೋಯಿ ಅಷ್ಟಮಿ, ಕಾರಾಷ್ಟಮಿ
ಅದೃಷ್ಟ ಸಂಖ್ಯೆ : 5, 11

ಮೇಷ: ಚಿನ್ನ ಬೆಳ್ಳಿ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಅಧಿಕ ಲಾಭ ಇರಲಿದೆ. ದಿನಾಂತ್ಯದಲ್ಲಿ ಆಭರಣ ಅಥವಾ ಕಲಾವಸ್ತುಗಳನ್ನು ಖರೀದಿಸು ಮನಸ್ಸು ಬರಲಿದೆ. ನೂತನ ಸಂಸ್ಥೆಯೊಂದರಲ್ಲಿ ಉದ್ಯೋಗ ಪಡೆದು ಕೊಳ್ಳುವಿರಿ.

ವೃಷಭ: ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೂ ಸುಲಭವಾಗಿ ಪರಿಹಾರ ಸಿಗಲಿದೆ. ಅವಿವಾಹಿತರಿಗೆ ಕಂಕಣ ಯೋಗವಿದೆ. ಕೆಲಸ ಕಾರ್ಯಗಳಲ್ಲಿ ಅತಿ ಹೆಚ್ಚಿನ ಉತ್ಸಾಹವನ್ನು ಕಾಣುವಿರಿ.

ಮಿಥುನ: ಯಾವುದೇ ಕಟ್ಟುಪಾಡಿಗೆ, ಒತ್ತಡಗಳಿಗೆ ಸಿಲುಕಬೇಡಿ. ಸಹೋದ್ಯೋಗಿಗಳಲ್ಲಿ ಪ್ರೀತಿಯಿಂದ ವರ್ತಿಸುವುದರಿಂದ ನಿಮ್ಮ ಕೆಲಸ ಸರಾಗವಾಗಿ ಸಾಗಲಿದೆ. ಗೃಹ ನಿರ್ಮಾಣ ಕಾರ್ಯಗಳ ಚಿಂತನೆ ಕಾರ್ಯಗತವಾಗಲಿದೆ.

ಕರ್ಕಾಟಕ: ಬಹುದಿನಗಳ ನಿರೀಕ್ಷೆಯ ವಿಚಾರಗಳು ಕಾರ್ಯ ರೂಪಕ್ಕೆ ತರಲು ಪ್ರಯತ್ನಿಸಿದಲ್ಲಿ ಲಾಭ ಕಾಣುವಿರಿ. ನವದಂಪತಿಗೆ ಸಂತಾನ ಭಾಗ್ಯದ ಫಲ ದೊರೆಯಲಿದೆ. ಮಕ್ಕಳ ವಿದ್ಯಾಭ್ಯಾಸವು ಒಳ್ಳೆಯ ಹಂತವನ್ನು ತಲುಪುವುವು.

ಸಿಂಹ: ಸಹೋದರರ ಬಗ್ಗೆ ನಿಮ್ಮಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳುವ ಪ್ರಯತ್ನಮಾಡಿ. ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆರಡೂ ಇರುವಿಕೆಯನ್ನು ತಿಳಿಸಲಿದೆ. ಯಂತ್ರೋಪಕರಣಗಳ ಮಾರಾಟದಿಂದ ಲಾಭ.

ಕನ್ಯಾ: ಸಹೋದರರಲ್ಲಿನ ಕೋರ್ಟು ವ್ಯವಹಾರಗಳನ್ನು ರಾಜಿ ಸಂಧಾನ ಮೂಲಕ ಬಗೆ ಹರಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದು ಒಳ್ಳೆಯದು. ನಿಮ್ಮ ಕರ್ತವ್ಯದ ಕೊರತೆಯು ಮೇಲಧಿಕಾರಿಗಳಿಗೆ ಎದ್ದು ಕಾಣಲಿದೆ.

ತುಲಾ: ಉದ್ಯೋಗಕ್ಕಾಗಿ ನಡೆಸಿದ ತೀವ್ರ ಪ್ರಯತ್ನ ಈ ದಿನ ಫಲ ನೀಡಲಿದೆ. ವ್ಯವಸಾಯಗಾರರಿಗೆ ಹೆಚ್ಚಿನ ಬೆಳೆ ಕೈ ಸೇರುವ ನಿರೀಕ್ಷೆ ಇದೆ. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗೂ ಮೀರಿದ ಆದಾಯವಿದೆ.

ವೃಶ್ಚಿಕ: ಅಣ್ಣ-ತಮ್ಮಂದಿರ ವರ್ಗದವರ ಮನೆಯಲ್ಲಿನ ಶುಭಕಾರ್ಯಗಳಲ್ಲಿ ಜವಾಬ್ದಾರಿ ವಹಿಸುವಿರಿ. ಸಮೀಪವರ್ತಿಗಳ ಆಶ್ವಾಸನೆ ದೊರೆತು ಶುಭಕಾರ್ಯಗಳತ್ತ ಗಮನ ಹರಿಸುವಿರಿ. ಅಗತ್ಯ ವಸ್ತುಗಳ ಖರೀದಿಗೆ ಆಗುವುದು.

ಧನು: ಅಪರೂಪದ ಅತಿಥಿಯ ಆಗಮನ ಸಂತೋಷ ತರಲಿದೆ. ನಿಮ್ಮ ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ. ಸಾಲಬಾಧೆ ಸ್ವಲ್ಪ ಮಟ್ಟಿಗೆ ತೀರಲಿದೆ. ಉದ್ಯೋಗ ಬದಲಾವಣೆ ಬಗ್ಗೆ ತೀರ್ಮಾನಿಸಬೇಡಿ.

ಮಕರ: ನಿಮ್ಮ ಪೂರ್ವನಿಯೋಜಿತ ಕೆಲಸ ಕಾರ್ಯಗಳು ಸರ್ವರ ಸಹಾಯದಿಂದ ಮಂದಗತಿಯಲ್ಲಿ ಪೂರ್ಣಗೊಳ್ಳುವುದು. ಮಾನಸಿಕ ನೆಮ್ಮದಿಗಾಗಿ ಧಾರ್ಮಿಕ ಕಾರ್ಯಗಳನ್ನು ಅಥವಾ ಪುಣ್ಯಕ್ಷೇತ್ರಗಳ ದರ್ಶನ ಮಾಡಿ.


ಕುಂಭ: ಅನಿರೀಕ್ಷಿತವಾಗಿ ಸಂಘ-ಸಂಸ್ಥೆಗಳ ಜವಾಬ್ದಾರಿಯ ಅಧಿಕಾರ ವಹಿಸಬೇಕಾಗುವುದು. ಅತಿಯಾಗಿ ಒತ್ತಡ ತರುವ ಕೆಲಸಗಳಿಂದ ದೂರ ಉಳಿಯುವ ಯೋಚನೆಯು ಸರಿಯಾಗಿರುವುದು.

ಮೀನ: ಹಿರಿಯರ ಮಾರ್ಗದರ್ಶನದಂತೆ ನಡೆದು ಕೆಲಸಗಳನ್ನು ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ. ಚಿಂತೆ ಮತ್ತು ಭಯ ಇವೆರಡನ್ನೂ ದೂರ ಮಾಡಿಕೊಳ್ಳುವ ಬಗ್ಗೆ ಪ್ರಯತ್ನಿಸಿ.

ಪದಬಂಧ 5112 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆ ಟೋಪಿ ಧರಿಸಿದಾತನದು ಬಲು ಗರ್ವದ ಪ್ರದರ್ಶನ (3)
3.ಪಟಾಕಿ ಸಿಡಿಸುತ್ತಾ ಉಪಟಳ ನೀಡುತ್ತಿರುವ ದಂಡು (3)
5.ಲಾವಣಿ ಹೇಳುವವರು ಧರಿಸಿರುವ ಮೇಲುಹೊದಿಕೆ (3)
6.ಅವನ ಸರ ಧರಿಸಲು ಇಷ್ಟೊಂದು ಅರ್ಜೆಂಟು! (4)
8.ತಡವಾಗಿ ಬಂದು ಬಡಿಗೆ ತೋರಿಸಿದಾಗ ತಬ್ಬಿಬ್ಬು! (4)
10.ಅಂತರಿಕ್ಷದಲ್ಲಿ ಕಾಣದಂತೆ ಕಣ್ಮರೆಯಾಗುವುದು (4)
12.ಎರಡು ಮೂಲ ಬಣ್ಣಗಳ ಮಿಶ್ರಣದಿಂದಾದ ವರ್ಣ (4)
13.ಕ್ಷಾತ್ರ ಧರ್ಮಕ್ಕೆ ಸೇರಿರುವವನು (3)
16.ಅತ್ಯಲ್ಪ ಕಾಲದಲ್ಲಿಯೇ ನಾಶವಾಗುವಂಥದ್ದು (3)
17.ಲೀಲಾಜಾಲವಾಗಿ ನಡೆಸಿದ ಏಲಂ (3)

ಮೇಲಿಂದ ಕೆಳಕ್ಕೆ
1.ಹಳೆನಾಣ್ಯ ಹಿಡಿದು ಮಾಡಿರುವ ಪ್ರತಿಜ್ಞೆ (2)
2.ವಿಳಾಸ ಗುರುತಿಸಿದ ಶೋಧಕ (4)
3.ಪರಿಚಿತನಾದವನು ಭಾರೀ ನೈಪುಣ್ಯವುಳ್ಳವ (4)
4.ಮಂಚ ಏರಲು ನೀಡಿರುವ ರುಷುವತ್ತು! (2)
7.ಚೈತ್ರ ವೈಶಾಖ ಮಾಸಗಳಲ್ಲಿ ಬರುವ ಋತು (3)
9.ಬಡಕಲು ಮೈಯುಳ್ಳ ಈತ ನಿರ್ಗತಿಕ! (3)
11.ಅತಿ ಉಪದ್ರವ ಕೊಡುತ್ತಾ ಬೆಂಬಿಡದೆ ಕಾಡುವವ (4)
12.ಗೆಲುವನ್ನು ಗಳಿಸಿದವನು (4)
14.ಪರೋಕ್ಷವಾಗಿ ಒರಟುತನ ತೋರಿಸುತ್ತಿರುವ ಕ್ರೂರಿ (2)
15.ಕಾದಾಡುವುದರಲ್ಲಿ ಏರಿರುವ ಬಿಸಿ (2)



5111ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಾರ್ಥಿವ 3.ಕಲರವ
5.ಜರ್ಜರಿತ 7.ಸಮಿತಿ
8.ನಿರಪರಾಧಿ 10.ಆಕಾಂಕ್ಷೆ
11.ಸಭಾಗೃಹ 15.ಮಹಾಪ್ರಾಣ
16.ಕಸುವು

ಮೇಲಿಂದ ಕೆಳಕ್ಕೆ:
1.ಪಾರಜ 2.ವಲ್ಲರಿ
3.ಕಫ 4.ವದಂತಿ
6.ತವರ 7.ಸಮಾಧಿ
8.ನಿರೀಕ್ಷೆ 9.ರಾಕ್ಷಸ
10.ಆಶ್ರಮ 12.ಭಾವುಕ
13.ಹಗೇವು 14.ಜಾಣ.

ಸುಡೊಕು 5498


					7		1	4
8		7	6		4	2		9
			3					
2	4			1		9		
							7	
7	5			9		3	4	
	8							3
			4		8	5		
9		4			2		6	8

5497 ಸುಡೊಕು

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಷೇರುಪೇಟೆ ವಹಿವಾಟು 491



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,185
ಇಂದಿನ ಅಂತ್ಯ	17,311
▲	126
ದಿನದ ಗರಿಷ್ಠ	17,328

ವಿನಿಮಯ ದರ

$ ಡಾಲರ್	82.36
£ ಪೌಂಡ್	92.93
€ ಯುರೊ	80.32
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1660)
ಸೋಯಾ (ರಿಫೈನ್ಡ್)	₹1272 (1270)
ಸೂರ್ಯಕಾಂತಿ (ರಿಫೈನ್ಡ್)	₹1500 (1500)
ಪಾಮೋಲಿನ್	₹927 (930)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹140
ಗುಡ್ ಲಾಟ್	₹136

ಹಣಕಾಸು ನೀತಿ: 6 ತ್ರೈಮಾಸಿಕಗಳ ನಂತರ ಪರಿಣಾಮ

ನವದೆಹಲಿ (ಪಿಟಿಐ): ಹಣದುಬ್ಬರ ನಿಯಂತ್ರಿಸಲು ಹಣಕಾಸು ನೀತಿ ಬಿಗಿಗೊಳಿಸಲಾಗಿದ್ದು, ಐದರಿಂದ ಆರು ತ್ರೈಮಾಸಿಕಗಳ ಬಳಿಕ ಅದರ ಪರಿಣಾಮ ಕಂಡುಬರಲಿದೆ ಎಂದು ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸದಸ್ಯ ಜಯಂತ್ ಆರ್. ವರ್ಮಾ ಹೇಳಿದ್ದಾರೆ.

ಹಣದುಬ್ಬರ ಕಡಿಮೆ ಆಗಲಿದೆ ಎನ್ನುವುದರಲ್ಲಿ ಯಾವುದೇ ಅನುಮಾನ ಇಲ್ಲ ಎಂದು ಅವರು ತಿಳಿಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು ಐದು ತಿಂಗಳ ಗರಿಷ್ಠ ಮಟ್ಟವಾದ ಶೇ 7.41ಕ್ಕೆ ಏರಿಕೆ ಕಂಡಿದೆ. ಆರ್‌ಬಿಐ, ಚಿಲ್ಲರೆ ಹಣದುಬ್ಬರವನ್ನು ಶೇ 6ರ ಒಳಗೆ ಇರಿಸಬೇಕಿದೆ.

ಮೇ ತಿಂಗಳ ಬಳಿಕ ರೆಪೊ ದರವನ್ನು ಒಟ್ಟಾರೆ ಶೇ 1.90ರಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ರೆಪೊ ದರವು ಶೇ 5.9ಕ್ಕೆ ತಲುಪಿದೆ. ಹಣಕಾಸು ನೀತಿ ಸಮಿತಿಯು ಸದ್ಯ ಹಣದುಬ್ಬರದ ಬಗ್ಗೆ ಗಮನ ಹರಿಸಿದ್ದು, ಅದನ್ನು ನಿಯಂತ್ರಿಸುವ ಪ್ರಯತ್ನದಲ್ಲಿದೆ ಎಂದು ಅವರು ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹150-615
ದ್ವಿತಳಿ (ಬಿ.ವಿ)	₹300-811

ರಸಗೊಬ್ಬರ ಲಭ್ಯತೆಯಲ್ಲಿ ಸುಧಾರಣೆ • 600 ಕಿಸಾನ್ ಸಮೃದ್ಧಿ ಕೇಂದ್ರಗಳಿಗೆ ಪ್ರಧಾನಿ ಚಾಲನೆ

'ಭಾರತ್' ಬ್ರ್ಯಾಂಡ್ ಯೂರಿಯಾ ಬಿಡುಗಡೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು 'ಒಂದು ದೇಶ ಒಂದು ರಸಗೊಬ್ಬರ ಯೋಜನೆ'ಯ ಅಡಿಯಲ್ಲಿ ಸೋಮವಾರ, ಸಬ್ಸಿಡಿ ಸಹಿತ ಯೂರಿಯಾದ 'ಭಾರತ್' ಬ್ರ್ಯಾಂಡ್ ಬಿಡುಗಡೆ ಮಾಡಿದರು.

ಕೇಂದ್ರ ಸರ್ಕಾರದ 'ಪ್ರಧಾನ ಮಂತ್ರಿ ಭಾರತೀಯ ಜನ ಊರ್ವರಕ್ ಪರಿಯೋಜನಾ' (ಒಂದು ದೇಶ, ಒಂದು ರಸಗೊಬ್ಬರ – ಒಎನ್‌ಒಎಫ್) ಅಡಿಯಲ್ಲಿ ವಿವಿಧ ಕಂಪನಿಗಳು ಸಬ್ಸಿಡಿ ಇರುವ ರಸಗೊಬ್ಬರವನ್ನು 'ಭಾರತ್' ಬ್ರ್ಯಾಂಡ್‌ನೊಂದಿಗೆ ಮಾರುಕಟ್ಟೆಗೆ ಬಿಡುಗಡೆ ಮಾಡುವುದು ಕಡ್ಡಾಯ.

ಸಬ್ಸಿಡಿ ಇರುವ ರಸಗೊಬ್ಬರಗಳಿಗೆ ಒಂದು ಬ್ರ್ಯಾಂಡ್ ನಿಗದಿ ಮಾಡಿರುವುದು ಸರ್ಕಾರ ಕೈಗೊಂಡಿರುವ ಪ್ರಮುಖ ಸುಧಾರಣಾ ಕ್ರಮಗಳ ಪೈಕಿ ಒಂದು ಎಂದು ಮೋದಿ ಹೇಳಿದರು. 'ರಸಗೊಬ್ಬರಗಳ ಬ್ರ್ಯಾಂಡ್ ವಿಚಾರವಾಗಿ ರೈತರು ಗೊಂದಲದಲ್ಲಿ, ಭ್ರಮೆಯಲ್ಲಿ ಇದ್ದಾರೆ. ಹೆಚ್ಚಿನ ಕಮಿಷನ್ ಪಡೆಯಲು ಚಿಲ್ಲರೆ ಮಾರಾಟಗಾರರು ಕೆಲವು ಬ್ರ್ಯಾಂಡ್‌ಗಳ ರಸಗೊಬ್ಬರಕ್ಕೆ ಆದ್ಯತೆ ನೀಡುತ್ತಾರೆ. ಇನ್ನೊಂದೆಡೆ ಕಂಪನಿಗಳು ತಮ್ಮ ಉತ್ಪನ್ನಗಳ ಬಗ್ಗೆ ಜಾಹೀರಾತು ಅಭಿಯಾನ ನಡೆಸುತ್ತವೆ. ಇವೆರಡರ ನಡುವೆ ರೈತರಿಗೆ ಗುಣಮಟ್ಟದ ರಸಗೊಬ್ಬರ ಸಿಗುತ್ತಿಲ್ಲ' ಎಂದು ಅವರು ಹೇಳಿದರು.

ಮುಖ್ಯಾಂಶಗಳು

- ಸಬ್ಸಿಡಿ ಇರುವ ಯೂರಿಯಾಗೆ ಇನ್ನು ಒಂದೇ ಬ್ರ್ಯಾಂಡ್
- ಇದು ಸರ್ಕಾರ ಪ್ರಮುಖ ಸುಧಾರಣಾ ಕ್ರಮ: ಪ್ರಧಾನಿ

'ಈಗ ಯೂರಿಯಾವನ್ನು ಒಂದೇ ಬ್ರ್ಯಾಂಡ್‌ನ ಅಡಿಯಲ್ಲಿ ದೇಶದೆಲ್ಲೆಡೆ ಮಾರಾಟ ಮಾಡಲಾಗುತ್ತದೆ. ಇನ್ನು ಮುಂದೆ ಯೂರಿಯಾ, ಭಾರತ್ ಎಂಬ ಬ್ರ್ಯಾಂಡ್ ಅಡಿ ಸಿಗಲಿದೆ' ಎಂದು ತಿಳಿಸಿದರು. ಒಂದೇ ಬ್ರ್ಯಾಂಡ್‌ನ ಪರಿಣಾಮವಾಗಿ ಕಂಪನಿಗಳ ನಡುವೆ ತಮ್ಮ ಬ್ರ್ಯಾಂಡ್‌ಗೆ ಮಾತ್ರ ಆದ್ಯತೆ ನೀಡುವ ಸ್ಪರ್ಧೆಯು ಕಡಿಮೆಯಾಗಲಿದೆ. ಇದು ದೇಶದಾದ್ಯಂತ ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ಲಭ್ಯವಾಗುವಂತೆ ಮಾಡಲಿದೆ ಎಂದು ತಿಳಿಸಿದರು.

ರೈತರಿಗೆ ಒಂದೇ ಜಾಗದಲ್ಲಿ ಹಲವು ಬಗೆಯ ಸೇವೆಗಳನ್ನು ಒದಗಿಸುವ 600 ಪಿಎಂ–ಕಿಸಾನ್ ಸಮೃದ್ಧಿ ಕೇಂದ್ರಗಳನ್ನು ಅವರು ಉದ್ಘಾಟಿಸಿದರು. ಈ ಕೇಂದ್ರಗಳು ಬೀಜ, ರಸಗೊಬ್ಬರ, ಕೃಷಿ ಉಪಕರಣಗಳ ಮಾರಾಟದ ಜೊತೆಯಲ್ಲೇ ರೈತರಿಗೆ ಮಣ್ಣು, ಬೀಜ ಪರೀಕ್ಷೆಯ ಸೇವೆಗಳನ್ನು ಒದಗಿಸಲಿವೆ. ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ಕೂಡ ನೀಡಲಿದೆ ಎಂದರು.

ದೇಶದಲ್ಲಿ ಅಂದಾಜು 3.25 ಲಕ್ಷ ರಸಗೊಬ್ಬರ ಚಿಲ್ಲರೆ ಮಾರಾಟ ಅಂಗಡಿಗಳನ್ನು ಕಿಸಾನ್ ಸಮೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸಲಾಗುತ್ತದೆ ಎಂದು ಪ್ರಧಾನಿ ಹೇಳಿದರು.

ಮುಂಬೈ ಧಾರಣೆ

ಶೇಂಗಾ

17–10–2022

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	10250-10350
ದಪ್ಪ ಗುಜರಾತ್(ಹೊಸ)	10750-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1670)
ಒಂದು ವಾರದ ಡೆಲಿವರಿ	1645 (1665)
ಸೋಯಾ ಕಚ್ಚಾ	1187 (1190)
ಪಾಮ್ ವಾರದ ಡೆಲಿವರಿ	925 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,200 (49,950)
ಬೆಳ್ಳಿ ಕೆ.ಜಿ 55,650 (54,800)

ಆವರಣದಲ್ಲಿ ಶನಿವಾರದ ಧಾರಣೆ

ಕೆನರಾ ಬ್ಯಾಂಕ್‌ನ ಡಿಜಿಟಲ್ ಘಟಕ ಆರಂಭ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ರಾಯಚೂರು ಮತ್ತು ಬೆಂಗಳೂರು ಸಮೀಪದ ದೇವನಹಳ್ಳಿಯಲ್ಲಿ ಡಿಜಿಟಲ್ ಬ್ಯಾಂಕಿಂಗ್ ಘಟಕಗಳನ್ನು ಆರಂಭಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಈ ಘಟಕಗಳನ್ನು ಇತರ ಒಟ್ಟು 75 ಘಟಕಗಳ ಜೊತೆಯಲ್ಲೇ ಭಾನುವಾರ ಉದ್ಘಾಟಿಸಿದ್ದಾರೆ ಎಂದು ಕೆನರಾ ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ. ಕೇರಳದ ಎರ್ನಾಕುಳಂ, ವಿರುಧ್‌ನಗರ ಮತ್ತು ಲಕ್ಷದ್ವೀಪದಲ್ಲಿಯೂ ಇಂತಹ ಘಟಕಗಳನ್ನು ಬ್ಯಾಂಕ್ ಆರಂಭಿಸಿದೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಕಂಪನಿ ಹೇಳಿಕೆ

ಮೂನ್‌ಲೈಟಿಂಗ್ ಪ್ರಕರಣ: ಅನುಕಂಪದಿಂದ ನಿಭಾಯಿಸುವೆವು

ಮುಂಬೈ (ಪಿಟಿಐ): ಮೂನ್‌ಲೈಟಿಂಗ್ ಕಾರಣಕ್ಕಾಗಿ ನೌಕರನ ವಿರುದ್ಧ ಕ್ರಮ ಜರುಗಿಸಿದರೆ ಆತನ ವೃತ್ತಿಬದುಕು ನಾಶವಾಗಬಹುದು. ಹೀಗಾಗಿ ಮೂನ್‌ಲೈಟಿಂಗ್ ಪ್ರಕರಣಗಳನ್ನು ಅನುಕಂಪದಿಂದ ನೋಡಲಾಗುತ್ತದೆ ಎಂದು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಹೇಳಿದೆ.

ಮೂನ್‌ಲೈಟಿಂಗ್‌ನಲ್ಲಿ ತೊಡಗಿದ ನೌಕರರ ವಿರುದ್ಧ ಕ್ರಮ ಜರುಗಿಸಲು ಕಂಪನಿಗೆ ಅಡ್ಡಿಗಳೇನೂ ಇಲ್ಲ. ಆದರೆ, ಅಂತಹ ಕೆಲಸ ಮಾಡಬೇಡಿ ಎಂದು ಕಿರಿಯರಿಗೆ ತಿಳಿಹೇಳಬೇಕಿದೆ ಎಂದು ಕಂಪನಿಯ ಸಿಒಒ ಎನ್. ಗಣಪತಿ ಸುಬ್ರಮಣಿಯಂ ಹೇಳಿದ್ದಾರೆ.

'ಮೂನ್‌ಲೈಟಿಂಗ್‌ನಲ್ಲಿ ತೊಡಗಿದ್ದಕ್ಕಾಗಿ ಕ್ರಮ ಜರುಗಿಸಿದರೆ ವ್ಯಕ್ತಿಯ ವೃತ್ತಿಯೇ ಹಾಳಾಗುತ್ತದೆ. ನಾವು ಒಂದಿಷ್ಟು ಅನುಕಂಪ ತೋರಿಸಬೇಕಾಗುತ್ತದೆ. ನಾವು ನೌಕರರನ್ನು ಕುಟುಂಬದ ಸದಸ್ಯರೆಂದು ಭಾವಿಸುತ್ತೇವೆ. ಹೀಗಾಗಿ, ಕುಟುಂಬದ ಸದಸ್ಯರು ಇಂತಹ ಕೆಲಸ ಮಾಡಬಾರದು ಎಂದು ಮನವೊಲಿಸಲು ಗಮನ ನೀಡುತ್ತೇವೆ' ಎಂದು ಅವರು ಹೇಳಿದ್ದಾರೆ.

ಈಚಿನ ಕೆಲವು ತಿಂಗಳುಗಳಲ್ಲಿ ದೇಶದ ಐ.ಟಿ. ಉದ್ಯಮದಲ್ಲಿ ಮೂನ್‌ಲೈಟಿಂಗ್ ಚರ್ಚೆಯ ವಸ್ತುವಾಗಿದೆ. ವಿಪ್ರೊ ಕಂಪನಿಯು 300 ನೌಕರರನ್ನು ಕೆಲಸದಿಂದ ವಜಾಗೊಳಿಸಿದೆ. ಕೆಲವು ಕಂಪನಿಗಳು ಮೂನ್‌ಲೈಟಿಂಗ್ ಬಗ್ಗೆ ಕಳವಳ ವ್ಯಕ್ತಪಡಿಸಿವೆ.

'ಕಿರಿಯ ವಯಸ್ಸಿನ ನೌಕರರು ದಂಡನೆಗೆ ಗುರಿಯಾಗುವುದನ್ನು, ಮೌಲ್ಯಗಳನ್ನು ಉಲ್ಲಂಘಿಸುವುದನ್ನು ನೋಡಲು ನಾವು ಬಯಸುವುದಿಲ್ಲ' ಎಂದು ಸುಬ್ರಮಣಿಯಂ ಹೇಳಿದ್ದಾರೆ. ಟಿಸಿಎಸ್ ಕಂಪನಿಯು 6 ಲಕ್ಷಕ್ಕೂ ಹೆಚ್ಚು ನೌಕರರನ್ನು ಹೊಂದಿದೆ. ದೇಶದ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಎಂಬ ಹೆಗ್ಗಳಿಕೆ ಹೊತ್ತಿದೆ.

'ಜಾಗತಿಕವಾಗಿ ಅತಿದೊಡ್ಡ ಕಂಪನಿಗಳ ಜೊತೆ ಕೆಲಸ ಮಾಡುವ ನಾವು, ನೌಕರರು ಮೂನ್‌ಲೈಟಿಂಗ್ ಮುಂದುವರಿಸಲು ಅವಕಾಶ ಕೊಡಲಾಗದು. ಏಕೆಂದರೆ ನಮ್ಮ ಗ್ರಾಹಕರ ದತ್ತಾಂಶವನ್ನು ಸುರಕ್ಷಿತವಾಗಿ ಇರಿಸಬೇಕಾಗುತ್ತದೆ' ಎಂದು ಅವರು ತಿಳಿಸಿದ್ದಾರೆ.

ನೌಕರರ ವಿಚಾರದಲ್ಲಿ ಕಂಪನಿಯು ದೀರ್ಘಾವಧಿಯ ಬದ್ಧತೆಯನ್ನು ಹೊಂದಿದೆ. ಇದೇ ಬದ್ಧತೆಯು ನೌಕರರ ಕಡೆಯಿಂದಲೂ ವ್ಯಕ್ತವಾಗಬೇಕು ಎಂದು ಸುಬ್ರಮಣಿಯಂ ಹೇಳಿದ್ದಾರೆ.

ಸುದ್ದಿ 2 ನಿಮಿಷ

ತೈಲ, ಬ್ಯಾಂಕಿಂಗ್ ಷೇರು ಗಳಿಕೆ: ಸೂಚ್ಯಂಕ 491 ಅಂಶ ಏರಿಕೆ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಚೇತರಿಕೆಯಿಂದಾಗಿ ದೇಶದ ಷೇರುಪೇಟೆಗಳಲ್ಲಿಯೂ ಸೋಮವಾರ ಸಕಾರಾತ್ಮಕ ವಹಿವಾಟು ನಡೆಯಿತು.


ರಿಲಯನ್ಸ್ ಇಂಡಸ್ಟ್ರೀಸ್, ಐಸಿಐಸಿಐ ಬ್ಯಾಂಕ್ ಷೇರುಗಳ ಮಾರಾಟ ಹೆಚ್ಚಾಗಿದ್ದುದು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 491 ಅಂಶ ಏರಿಕೆ ಕಂಡು 58,411 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 126 ಅಂಶ ಹೆಚ್ಚಾಗಿ 17,311 ಅಂಶಗಳಿಗೆ ಏರಿಕೆ ಕಂಡಿತು.

ಸೆನ್ಸೆಕ್ಸ್‌ನಲ್ಲಿ ಎಸ್‌ಬಿಐ, ಎನ್‌ಟಿಪಿಸಿ, ಬಜಾಜ್ ಫಿನ್‌ಸರ್ವ್, ಐಸಿಐಸಿಐ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಇಂಡಸ್‌ಇಂಡ್ ಬ್ಯಾಂಕ್ ಷೇರುಗಳ ಮೌಲ್ಯ ಹೆಚ್ಚಾಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಅಸ್ಥಿರ ವಹಿವಟನಿಂದಾಗಿ ದೇಶದ ಷೇರುಪೇಟೆಗಳು ಇಳಿಮುಖವಾಗಿ ವಹಿವಾಟು ಆರಂಭಿಸಿದವು. ಆದರೆ, ಎರಡನೇ ತ್ರೈಮಾಸಿಕದಲ್ಲಿ ಐ.ಟಿ. ಮತ್ತು ಬ್ಯಾಂಕಿಂಗ್ ಫಲಿತಾಂಶವು ನಿರೀಕ್ಷಿತ ಮಟ್ಟದಲ್ಲಿ ಇರುವುದರಿಂದ ವಹಿವಾಟು ಚೇತರಿಕೆ ಹಾದಿಗೆ ಮರಳಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಏಷ್ಯಾದಲ್ಲಿ, ಸೋಲ್, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳು ಗಳಿಕೆ ಕಂಡರೆ, ಟೋಕಿಯೊ ಷೇರುಪೇಟೆ ವಹಿವಾಟು ಇಳಿಕೆಯಾಯಿತು. ಯುರೋಪ್‌ನಲ್ಲಿಯೂ ಸಕಾರಾತ್ಮಕ ವಹಿವಾಟು ನಡೆಯಿತು.



ಬ್ರೆಂಟ್ ಕಚ್ಚಾ ತೈಲ ದರ ಶೇ 0.07ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 91.57 ಡಾಲರ್‌ಗೆ ತಲುಪಿತು.

ನಿರ್ಮಲಾ ಹೇಳಿಕೆಗೆ ವ್ಯಂಗ್ಯ

ಬೆಂಗಳೂರು: 'ರೂಪಾಯಿ ಮೌಲ್ಯ ಕುಸಿಯುತ್ತಿಲ್ಲ; ಡಾಲರ್ ಬಲಗೊಳ್ಳುತ್ತಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೀಡಿರುವ ಹೇಳಿಕೆಯು ತೀವ್ರ ಟೀಕೆಗೆ ಗುರಿಯಾಗಿದೆ.

ಡಿಎಂಕೆ ಪಕ್ಷದ ಐ.ಟಿ. ವಿಭಾಗದ ಪದಾಧಿಕಾರಿಯೊಬ್ಬರು ನಿರ್ಮಲಾ ಹೇಳಿಕೆಯನ್ನು, 'ನಾನು ಪರೀಕ್ಷೆಯಲ್ಲಿ ಅನುತ್ತೀರ್ಣನಾಗಲಿಲ್ಲ. ನನಗೆ ಉತ್ತೀರ್ಣವಾಗಲು ಬೇಕಿದ್ದಕ್ಕಿಂತ ಕಡಿಮೆ ಅಂಕಗಳನ್ನು ಮೌಲ್ಯಮಾಪಕರು ನೀಡಿದರು' ಎಂಬ ಮಾತಿಗೆ ಹೋಲಿಸಿದ್ದಾರೆ.

ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಅವರು ನಿರ್ಮಲಾ ಅವರ ಹೇಳಿಕೆಯನ್ನು, 'ಚುನಾವಣೆಯಲ್ಲಿ ಸೋತ ಪಕ್ಷ ಅಥವಾ ಅಭ್ಯರ್ಥಿ, ನಾವು ಸೋಲಲಿಲ್ಲ; ಎದುರಾಳಿ ಪಕ್ಷ ಚುನಾವಣೆಯಲ್ಲಿ ಗೆಲುವು ಕಂಡಿತು ಎನ್ನುತ್ತಾರೆ' ಎಂಬ ಮಾತಿಗೆ ಹೋಲಿಸಿ ವ್ಯಂಗ್ಯವಾಡಿದ್ದಾರೆ.

ಭಾರತದ ಅರ್ಥ ವ್ಯವಸ್ಥೆಯು ಇಂಥವರ (ನಿರ್ಮಲಾ) ಕೈಗೆ ಸಿಲುಕಿ ನರಳುತ್ತಿರುವುದು 'ದೇವರ ಆಟ'ವಿರಬಹುದು ಎಂದು ಕರ್ನಾಟಕ ಕಾಂಗ್ರೆಸ್ ಲೇವಡಿ ಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹಳತು	48000-56000
ಕುಮಟ	
ಚಿಪ್ಪು	29509-33089
ಕೋಕ	20169-31029
ಹೊಸಚಾಲಿ	37399-452099
ಫ್ಯಾಕ್ಟರಿ	11509-19299
ಪುತ್ತೂರು	
ಹೊಸತು	35500-48500
ಸಾಗರ	
ಬಿಳಿಗೋಟು	14290-33001
ಚಾಲಿ	261109-40099
ಕೋಕ	14989-36299
ಕೆಂಪುಗೋಟು	27869-36599
ರಾಶಿ	34619-50710
ಸಿಪ್ಪೆಗೋಟು	4169-21599
ಕುಂದಾಪುರ	
ಹಳೆಚಾಲಿ	50000-56000
ಹೊಸಚಾಲಿ	40000-47500
ಶಿವಮೊಗ್ಗ	
ಬೆಟ್ಟೆ	50119-53400
ಗೊರಬಲು	17009-37099
ಹೊಸತು	47159-49599
ರಾಶಿ	43099-50399
ಸರಕು	59369-80410
ಸಿದ್ದಾಪುರ	
ಬಿಳಿಗೋಟು	27999-34000
ಚಾಲಿ	37619-41519
ಕೋಕ	26299-33209
ಕೆಂಪುಗೋಟು	27899-34389
ರಾಶಿ	48209-49699
ತಟ್ಟಿಬೆಟ್ಟೆ	38919-48669
ಶಿರಸಿ	
ಬೆಟ್ಟೆ	34712-44418
ಬಿಳಿಗೋಟು	23001-35316
ಚಾಲಿ	37309-42739
ಕೆಂಪುಗೋಟು	19022-33099
ರಾಶಿ	46719-49399
ಯಲ್ಲಾಪುರ	
ಬಿಳಿಗೋಟು	27699-35401
ಚಾಲಿ	36721-42630
ಕೋಕ	18012-31669
ಕೆಂಪುಗೋಟು	28619-35819
ರಾಶಿ	46211-51799
ತಟ್ಟಿಬೆಟ್ಟೆ	36642-45190

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15700	16100	202.15 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4750	2099 ಡಾಲರ್ಸ್

230 ಕಿ.ಮೀ ವೇಗದಲ್ಲಿ ಕಾರು ಚಾಲನೆ: ಅಪಘಾತದಲ್ಲಿ ನಾಲ್ವರ ಸಾವು

ಲಖನೌ (ಪಿಟಿಐ): ಉತ್ತರಪ್ರದೇಶದ ಪೂರ್ವಾಂಚಲ ಎಕ್ಸ್‌ಪ್ರೆಸ್ ವೇನಲ್ಲಿ ಈಚೆಗೆ ಬಿಎಂಡಬ್ಲ್ಯು ಕಾರನ್ನು ಗಂಟೆಗೆ 230 ಕಿ.ಮೀ. ವೇಗದಲ್ಲಿ ಚಲಾಯಿಸುವಾಗ ಅಪಘಾತ ಸಂಭವಿಸಿ ನಾಲ್ವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಹೀಗೆ ಹೋದ್ರೆ ನಾವು ನಾಲ್ವರು ಸತ್ತೇ ಹೋಗುತ್ತೇವೆ' ಎಂದು ಕಾರಿನ ಚಾಲಕ ಹೇಳಿರುವುದು ಫೇಸ್‌ಬುಕ್ ಲೈವ್ ವಿಡಿಯೊದಲ್ಲಿ ದಾಖಲಾಗಿದ್ದು, ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ.

'ಕಾರಿನ ವೇಗ ಗಂಟೆಗೆ 290 ಅಥವಾ 300 ಕಿ.ಮೀ ಆಗಬೇಕು. ಬ್ರೇಕ್ ಯಾಕೆ ಹಾಕುತ್ತಿದ್ದೀಯಾ. ವೇಗ ಕಡಿಮೆ ಮಾಡಬೇಡ' ಎಂದು ಯುವಕನೊಬ್ಬ ಹೇಳಿರುವುದು ಕೂಡ ವಿಡಿಯೊದಲ್ಲಿ ದಾಖಲಾಗಿದೆ. ಚಾಲಕನ ನಿಯಂತ್ರಣ ತಪ್ಪಿದ ಕಾರು ಬಳಿಕ ಕಂಟೇನರ್‌ಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತ್ತು. ಕಾರಿನಲ್ಲಿದ್ದ ಬಿಹಾರದ ಆನಂದ್ ಪ್ರಕಾಶ್, ಅಖಿಲೇಶ್ ಸಿಂಗ್, ದೀಪಕ್ ಕುಮಾರ್ ಹಾಗೂ ಮುಕೇಶ್ ಎಂಬುವವರು ಮೃತಪಟ್ಟಿದ್ದರು.

ಪೂರ್ವಾಂಚಲ್ ಎಕ್ಸ್‌ಪ್ರೆಸ್ ವೇ ಮೂಲಕ ಈ ಯುವಕರ ತಂಡ ಸುಲ್ತಾನಪುರಕ್ಕೆ ತೆರಳುತ್ತಿತ್ತು. ಅಪಘಾತದ ತೀವ್ರತೆಗೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಯುವಕರ ದೇಹಗಳು ಛಿದ್ರವಾಗಿವೆ. ಕಂಟೈನರ್ ಚಾಲಕನ ಮೇಲೆ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಲ್‌ಐಸಿ: ಧನ ವರ್ಷ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) 'ಧನ ವರ್ಷ' ಎನ್ನುವ ಹೊಸ ಜೀವ ವಿಮಾ ಯೋಜನೆಯನ್ನು ಪರಿಚಯಿಸಿದೆ.

ವಿಮೆ ಮಾಡಿಸಿರುವವರು ಅಕಾಲಿಕ ಮರಣ ಹೊಂದಿದಲ್ಲಿ ಕುಟುಂಬದವರಿಗೆ ಹಣಕಾಸಿನ ಬೆಂಬಲವನ್ನು ಇದು ನೀಡಲಿದೆ. ಅಲ್ಲದೆ, ವಿಮೆ ಅವಧಿ ಮುಕ್ತಾಯವಾದ ಬಳಿಕ ಪಾಲಿಸಿದಾರರಿಗೆ ಖಾತರಿ ಮೊತ್ತವೂ ಸಿಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

2023ರ ಮಾರ್ಚ್ 31ರವರೆಗೆ ಈ ಯೋಜನೆ ಖರೀದಿಸಲು ಅವಕಾಶ ಇರಲಿದೆ. 10 ಅಥವಾ 15 ವರ್ಷಗಳ ಅವಧಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಎಲ್‌ಐಸಿ ಆ್ಯಕ್ಸಿಡೆಂಟಲ್ ಡೆತ್ ಆ್ಯಂಡ್ ಡಿಸೆಬಿಲಿಟಿ ಬೆನಿಫಿಟ್ ರೈಡರ್ ಹಾಗೂ ನ್ಯೂ ಟರ್ಮ್ ಅಶ್ಯುರನ್ಸ್ ರೈಡರ್ ಎನ್ನುವ ಎರಡು ಆಯ್ಕೆಗಳು ಇದರಲ್ಲಿವೆ. ಕೆಲವು ನಿರ್ದಿಷ್ಟ ಷರತ್ತುಗಳಿಗೆ ಒಳಪಟ್ಟು ಸಾಲ ಸೌಲಭ್ಯವನ್ನೂ ಪಡೆಯಬಹುದು ಎಂದು ತಿಳಿಸಿದೆ.

ಎಸ್‌ಬಿಐ: ಠೇವಣಿ ಬಡ್ಡಿ ಅಲ್ಪ ಇಳಿಕೆ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಉಳಿತಾಯ ಖಾತೆಗಳಿಗೆ ನೀಡುವ ಬಡ್ಡಿ ದರವನ್ನು ಶೇ 0.05ರಷ್ಟು ಕಡಿಮೆ ಮಾಡಿದೆ. ಇದು ಶನಿವಾರದಿಂದಲೇ ಜಾರಿಗೆ ಬಂದಿದೆ.

ಈ ಇಳಿಕೆಯು ₹ 10 ಕೋಟಿಗಿಂತ ಕಡಿಮೆ ಮೊತ್ತಕ್ಕೆ ಮಾತ್ರ ಅನ್ವಯವಾಗುತ್ತದೆ. ಈ ಮೊದಲು ಬ್ಯಾಂಕ್ ಉಳಿತಾಯ ಖಾತೆಗಳಲ್ಲಿ ಇರುವ ₹ 10 ಕೋಟಿಗಿಂತ ಕಡಿಮೆ ಮೊತ್ತಕ್ಕೆ ಶೇ 2.75ರಷ್ಟು ಬಡ್ಡಿ ನೀಡುತ್ತಿತ್ತು. ಇನ್ನು ಮುಂದೆ ಶೇ2.70ರಷ್ಟು ಬಡ್ಡಿ ನೀಡಲಿದೆ.

ಹಲವು ಬ್ಯಾಂಕ್‌ಗಳು ಠೇವಣಿಗಳಿಗೆ ನೀಡುವ ಬಡ್ಡಿಯನ್ನು ಹೆಚ್ಚಿಸುತ್ತಿರುವ ಸಂದರ್ಭದಲ್ಲಿ ಎಸ್‌ಬಿಐ ಈ ಕ್ರಮ ಕೈಗೊಂಡಿದೆ.

₹ 10 ಕೋಟಿಗಿಂತ ಹೆಚ್ಚಿನ ಮೊತ್ತಕ್ಕೆ ಎಸ್‌ಬಿಐ ಇನ್ನು ಮುಂದೆ ಶೇ3ರಷ್ಟು ಬಡ್ಡಿ ನೀಡಲಿದೆ. ಇದುವರೆಗೆ ಶೇ2.75ರಷ್ಟು ಬಡ್ಡಿ ನೀಡಲಾಗುತ್ತಿತ್ತು.

ಸೇನಾ ನೆಲೆ, ಮೂಲಸೌಕರ್ಯ ಧ್ವಂಸ; ಆರು ನಾಗರಿಕರ ಸಾವು

ಕೀವ್ ಮೇಲೆ ಡ್ರೋನ್ ದಾಳಿ

ಕೀವ್/ಮಾಸ್ಕೊ/ಬ್ರಸೆಲ್ಸ್ (ಎಪಿ/ಎಎಫ್‌ಪಿ): ಉಕ್ರೇನ್‌ನ ಭದ್ರಕೋಟೆ ಕೀವ್, ಸುಮಿ ಹಾಗೂ ನಿಪ್ರೊಪೆಟ್ರೊವ್‌ಸ್ಕ್ ಪ್ರಾಂತ್ಯಗಳ ಮೇಲೆ ಸೋಮವಾರ ರಷ್ಯಾ ಪಡೆಗಳು ಇರಾನಿ ನಿರ್ಮಿತ ಆತ್ಮಾಹುತಿ ಡ್ರೋನ್‌ಗಳ ದಾಳಿ ನಡೆಸಿದ್ದು, ಪ್ರಮುಖ ಮೂಲಸೌಕರ್ಯಗಳು ಧ್ವಂಸಗೊಂಡಿವೆ. ಕೀವ್ ಮತ್ತು ಸುಮಿಯಲ್ಲಿ ಆರು ನಾಗರಿಕರು ಮೃತಪಟ್ಟಿದ್ದಾರೆ.

ಹತ್ತಾರು ಡ್ರೋನ್‌ಗಳನ್ನು ಉಕ್ರೇನ್ ತನ್ನ ವಾಯು ರಕ್ಷಣಾ ವ್ಯವಸ್ಥೆಯಿಂದ ಮಾರ್ಗಮಧ್ಯೆ ಹೊಡೆದುರುಳಿಸಿದ ದೃಶ್ಯಾವಳಿಗಳ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಯಾಗಿವೆ. ಉಕ್ರೇನ್ ಸೈನಿಕರು ಮತ್ತು ಪೊಲೀಸರು ರಷ್ಯಾದ ಡ್ರೋನ್‌ಗಳನ್ನು ಶಸ್ತ್ರಾಸ್ತ್ರಗಳಿಂದ ಹೊಡೆದುರುಳಿಸಿದರು.

ಆದರೆ, ಭಾರಿ ಸ್ಫೋಟಕಗಳನ್ನು ಇರಿಸಿದ್ದ ಹಲವು ಡ್ರೋನ್‌ಗಳು ಉಕ್ರೇನ್‌ನ ಪ್ರಮುಖ ಸೇನಾ ಕಮಾಂಡ್, ಸೇನಾ ನಿಯಂತ್ರಣ ಸೌಲಭ್ಯಗಳು, ಇಂಧನ ವ್ಯವಸ್ಥೆ ಹಾಗೂ ಅಪಾರ ಮದ್ದುಗುಂಡುಗಳ ಸಂಗ್ರಹಾಗಾರಗಳನ್ನು ನಾಶ ಮಾಡಿವೆ. ಜನವಸತಿ ಕಟ್ಟಡಗಳು ಛಿದ್ರಗೊಂಡಿವೆ.

'ಸಶಸ್ತ್ರ ಪಡೆಗಳು ಡ್ರೋನ್‌ಗಳು, ಹೆಚ್ಚು ನಿಖರ ಮತ್ತು ಧೀರ್ಘ ವ್ಯಾಪ್ತಿಯ ಶಸ್ತ್ರಾಸ್ತ್ರಗಳೊಂದಿಗೆ ಉಕ್ರೇನ್ ನೆಲದಲ್ಲಿ ಗುರುತಿಸಿದ್ದ ಎಲ್ಲ ಗುರಿಗಳನ್ನು ಯಶಸ್ವಿಯಾಗಿ ಧ್ವಂಸಗೊಳಿಸಿವೆ' ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿದೆ.

ಇದೇ ವೇಳೆ ರಷ್ಯಾ ವಾಯುಪಡೆಯ ಯುದ್ಧ ವಿಮಾನವೊಂದು ಅಪಘಾತಕ್ಕೀಡಾಗಿ ವಸತಿ ಕಟ್ಟಡಕ್ಕೆ ಅಪ್ಪಳಿಸಿರುವುದಾಗಿ ರಷ್ಯಾದ ಸುದ್ದಿಸಂಸ್ಥೆಗಳು ವರದಿ ಮಾಡಿವೆ.



ಉಕ್ರೇನ್ ರಾಜಧಾನಿ ಕೀವ್ ನಗರದ ಮೇಲೆ ಸೋಮವಾರ ರಷ್ಯಾ ಪಡೆಗಳು ಆತ್ಮಾಹುತಿ ಡ್ರೋನ್ ದಾಳಿ ನಡೆಸಿದವು – ಎಎಫ್‌ಪಿ ಚಿತ್ರ

ಕೀವ್‌ನ ಐದು ಕಡೆಗಳಲ್ಲಿ ಡ್ರೋನ್ ದಾಳಿಯಾಗಿದೆ. ನೂರಾರು ಪಟ್ಟಣಗಳು ಮತ್ತು ಹಳ್ಳಿಗಳು ವಿದ್ಯುತ್ ಸಂಪರ್ಕ ಕಳೆದುಕೊಂಡಿವೆ ಎಂದು ಉಕ್ರೇನ್ ಪ್ರಧಾನಿ ಡೆನಿಸ್ ಷ್ಮಿಗಲ್ ಹೇಳಿದ್ದಾರೆ.

ಇದೇ ತಿಂಗಳು ನಡೆಯಲಿರುವ ಜಿ20 ಶೃಂಗಸಭೆಯಿಂದ ರಷ್ಯಾವನ್ನು ಹೊರಹಾಕಬೇಕು ಎಂದು ಉಕ್ರೇನ್ ಅಧ್ಯಕ್ಷೀಯ ಹಿರಿಯ ಸಹಾಯಕ ಮಿಖಾಯಿಲೊ ಪೊಡೊಲಿಯಾಕ್ ಒತ್ತಾಯಿಸಿದ್ದಾರೆ.

ನ್ಯಾಟೊ ಅಣ್ವಸ್ತ್ರ ತಾಲೀಮು: ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಅಣ್ವಸ್ತ್ರ ಸಂಘರ್ಷದ ಬೆದರಿಕೆ ಹಾಕುತ್ತಿರುವ ಬೆನ್ನಲ್ಲೇ, ನ್ಯಾಟೊ ತನ್ನ ಪೂರ್ವ ಯೋಜಿತ ವಾಡಿಕೆಯ ಅಣ್ವಸ್ತ್ರ ತಾಲೀಮನ್ನು ಸೋಮವಾರ ಪಶ್ಚಿಮ ಯುರೋಪ್‌ನಲ್ಲಿ ಆರಂಭಿಸಿತು.

ನ್ಯಾಟೊ 30 ರಾಷ್ಟ್ರಗಳ ಸೇನೆಗಳು ಈ ತಾಲೀಮಿನಲ್ಲಿ ಭಾಗವಹಿಸಿದ್ದು, ಇದೇ ತಿಂಗಳ 30ರವರೆಗೆ ಅಣ್ವಸ್ತ್ರ ತಾಲೀಮು ನಡೆಯಲಿದೆ.

ವಿಕಾಸ ಗ್ರಾಮೀಣ ಬ್ಯಾಂಕ್: ಠೇವಣಿ ಬಡ್ಡಿದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕು ಠೇವಣಿಗಳ ಮೇಲಿನ ಬಡ್ಡಿ ದರ ಹೆಚ್ಚಿಸಿದೆ. ಹಿರಿಯ ನಾಗರಿಕರಿಗೆ ಗರಿಷ್ಠ ಶೇ 7.55 ಹಾಗೂ ಇತರರಿಗೆ ಗರಿಷ್ಠ ಶೇ 7.05ರಷ್ಟು ಬಡ್ಡಿ ದೊರೆಯಲಿದೆ.

ಪ್ರಸ್ತುತ, ಈ ಬಡ್ಡಿ ದರವು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲೇ ಅತ್ಯಧಿಕವಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಪಿ.ಗೋಪಿ ಕೃಷ್ಣ ತಿಳಿಸಿದ್ದಾರೆ.

ಬ್ಯಾಂಕು 'ವಿಕಾಸ್ ಸಿರಿ ಸಮೃದ್ಧಿ' ಹೆಸರಿನಲ್ಲಿ 1111 ದಿನಗಳ ಅವಧಿಯ ಹೊಸ ಠೇವಣಿ (ಸೀಮಿತ ಅವಧಿಗೆ ಮಾತ್ರ) ಯೋಜನೆ ಪರಿಚಯಿಸಿದ್ದು ಈ ಯೋಜನೆಗೆ ಈ ಹೊಸ ಬಡ್ಡಿದರ ಅನ್ವಯಿಸಲಿದೆ.

ಉಳಿದಂತೆ ಇತರೆ ಸ್ಲಾಬ್ ಗಳ ಮೇಲೂ ಬ್ಯಾಂಕು ಬಡ್ಡಿದರವನ್ನು ಅಕ್ಟೋಬರ್ 20ರಿಂದ ಅನ್ವಯಿಸಿ ಏರಿಸಿದೆ.



ಪಿ.ಗೋಪಿ ಕೃಷ್ಣ

ಠೇವಣಿ ಮೇಲಿನ ಪರಿಷ್ಕೃತ ಬಡ್ಡಿ ದರ: 7ರಿಂದ 14 ದಿನಗಳಿಗೆ ಶೇ 3.25, 15ರಿಂದ 29 ದಿನಗಳಿಗೆ ಶೇ 3.25, 30ರಿಂದ 45 ದಿನಗಳಿಗೆ ಶೇ 3.30, 46ರಿಂದ 60 ದಿನಗಳಿಗೆ ಶೇ 4.50, 61ರಿಂದ 90 ದಿನಗಳಿಗೆ ಶೇ 4.50.

91ರಿಂದ 180 ದಿನಗಳಿಗೆ ಶೇ 4.60, 181ರಿಂದ ಒಂದು ವರ್ಷಕ್ಕೆ ಶೇ 6, ಒಂದು ವರ್ಷ ಮೇಲ್ಪಟ್ಟು ಶೇ 6.50 ಹಾಗೂ 1111 ದಿನಗಳ ವಿಶೇಷ ಠೇವಣಿ ಯೋಜನೆಗೆ ಶೇ 7.05.

ಹಿರಿಯ ನಾಗರಿಕರಿಗೆ ಶೇ 0.50ರಷ್ಟು ಹೆಚ್ಚುವರಿ ಬಡ್ಡಿ ನೀಡಲಾಗುವುದು.

'ಅರ್ಹರ ಮನೆಬಾಗಿಲಿಗೆ ಸರ್ಕಾರದ ಯೋಜನೆ'

ಗಾಂಧಿನಗರ (ಗುಜರಾತ್): ಸರ್ಕಾರದ ಯೋಜನೆಗಳ ಪ್ರಯೋಜನವನ್ನು ಈ ಹಿಂದೆ ಕೆಲ ಜಾಗೃತ ನಾಗರಿಕರು ಮತ್ತು ಮಧ್ಯವರ್ತಿಗಳು ಮಾತ್ರ ಪಡೆಯುತ್ತಿದ್ದರು. ಆದರೆ, ಈಗಿನ ಸರ್ಕಾರವು ಅರ್ಹರ ಮನೆಬಾಗಿಲಿಗೇ ಸರ್ಕಾರದ ಯೋಜನೆಗಳನ್ನು ತಲುಪಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.

ಗಾಂಧಿನಗರದಲ್ಲಿ ಪಿಎಂವೈಎಜೆ-ಎಂಎ (ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನಾ– ಮಾ ಅಮೃತಂ) ಯೋಜನೆಯ ಕಾರ್ಡ್ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು ಅಪೌಷ್ಟಿಕತೆಯೊಂದಿಗೆ ಹೋರಾಡುವ ಅಗತ್ಯತೆಯನ್ನೂ ಪ್ರತಿಪಾದಿಸಿದರು.

'ಮಗುವು ಆರೋಗ್ಯವಂತವಾಗಿದ್ದರೆ, ದೇಶವೂ ಆರೋಗ್ಯವಾಗಿರಬಲ್ಲದು' ಎಂದು ಹೇಳಿದ್ದಾರೆ.

'ಈ ಹಿಂದಿನ ಸರ್ಕಾರಗಳಲ್ಲಿ ಹೊಸ ಯೋಜನೆಯನ್ನು ಘೋಷಿಸಲು ದೊಡ್ಡ ಸಮಾರಂಭಗಳನ್ನು ಆಯೋಜಿಸುತ್ತಿದ್ದರು, ಈ ಬಗ್ಗೆ ಅರಿವಿದ್ದ ಕೆಲ ನಾಗರಿಕರು ಮತ್ತು ಮಧ್ಯವರ್ತಿಗಳು ಮಾತ್ರ ಪ್ರಯೋಜನ ಪಡೆಯುತ್ತಿದ್ದರು' ಎಂದೂ ಮೋದಿ ತಿಳಿಸಿದ್ದಾರೆ.

ಸಾಲ, ಇಂಧನ ತೆರಿಗೆ ಕಡಿತ ಪ್ರಕಟಿಸಿದ ಬ್ರಿಟನ್

ಲಂಡನ್ (ಎಎಫ್‌ಪಿ): ಹಣಕಾಸು ಮಾರುಕಟ್ಟೆಯಲ್ಲಿ ತಲೆದೋರಿರುವ ಕೋಲಾಹಲವನ್ನು ತಹಬದಿಗೆ ತರಲು ಸಾಲ ಮತ್ತು ಇಂಧನ ತೆರಿಗೆ ಕಡಿತವನ್ನು ಬ್ರಿಟನ್ ನೂತನ ಹಣಕಾಸು ಮುಖ್ಯಸ್ಥ ಜೆರೆಮಿ ಹಂಟ್ ಅವರು ಸೋಮವಾರ ಪ್ರಕಟಿಸಿದ್ದಾರೆ.

ಲಿಜ್ ಟ್ರಸ್ ಅವರು ಪ್ರಧಾನಿಯಾದ ಮೇಲೆ, ಸರ್ಕಾರ ತೆಗೆದುಕೊಂಡ ಮತ್ತೊಂದು ಪ್ರಮುಖ ನಿರ್ಧಾರ ಇದಾಗಿದೆ.

ಸಾರ್ವಜನಿಕ ಹಣಕಾಸುಗಳಲ್ಲಿ ಸರ್ಕಾರವು 60 ಬಿಲಿಯನ್ ಪೌಂಡ್ ಕಳೆದುಕೊಂಡಿದೆ ಎಂದು ಆರ್ಥಿಕತಜ್ಞರು ಅಂದಾಜಿಸಿದ ನಂತರ, ತೆರಿಗೆ ಬದಲಾವಣೆಯಿಂದ ವರ್ಷಕ್ಕೆ ಸುಮಾರು 32 ಬಿಲಿಯನ್ ಪೌಂಡ್ ಸಂಗ್ರಹ ಏರಿಕೆಯಾಗಲಿದೆ ಎಂದು ಹಂಟ್ ಅಂದಾಜು ಮಾಡಿದ್ದಾರೆ.

ವೆಚ್ಚವನ್ನು ಕಡಿತ ಮಾಡುವ ಬಗ್ಗೆಯೂ ಎಚ್ಚರಿಸಿದ ಅವರು, ಯಾವುದೇ ಸರ್ಕಾರವು ಸಾರ್ವಜನಿಕ ಹಣಕಾಸು ಮಾರುಕಟ್ಟೆಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಆದರೆ, ನಾವು ತೆಗೆದುಕೊಂಡಿರುವ ಸುಧಾರಣಾ ಕ್ರಮವು ಸಾರ್ವಜನಿಕ ಹಣಕಾಸಿನ ಸುಸ್ಥಿತಿಯ ಬಗ್ಗೆ ಖಾತರಿ ನೀಡುತ್ತದೆ ಎಂದು ಒತ್ತಿ ಹೇಳಿದರು.

ಗುಜರಾತ್‌ನಲ್ಲಿ 2 ಸಿಲಿಂಡರ್ ಉಚಿತ

ಗಾಂಧಿನಗರ (ಪಿಟಿಐ): ವಿಧಾನಸಭೆ ಚುನಾವಣೆ ಹತ್ತಿರದಲ್ಲೇ ಇರುವಾಗ ಗುಜರಾತ್ ಸರ್ಕಾರ ಇಂಧನ ವ್ಯಾಟ್ ಕಡಿತ ಮತ್ತು ಅಡುಗೆ ಸಿಲಿಂಡರ್ ಉಚಿತ ಕೊಡುಗೆಗಳನ್ನು ಸೋಮವಾರ ಘೋಷಿಸಿದೆ.

ಸಿಎನ್‌ಜಿ ಮತ್ತು ಪಿಎನ್‌ಜಿ ಮೇಲಿನ ವ್ಯಾಟ್ (ಮೌಲ್ಯವರ್ಧಿತ ತೆರಿಗೆ) ತೆರಿಗೆಯಲ್ಲಿ ಶೇ 10 ಕಡಿತ ಹಾಗೂ ಕೇಂದ್ರದ ಉಜ್ವಲ ಯೋಜನೆಯ ಫಲಾನುಭವಿಗಳಾದ ರಾಜ್ಯದ 38 ಲಕ್ಷ ಜನರಿಗೆ ಪ್ರತಿ ವರ್ಷ ಎರಡು ಅಡುಗೆ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡುವುದಾಗಿ ಪ್ರಕಟಿಸಿದೆ.

ವ್ಯಾಟ್ ಕಡಿತಗೊಳಿಸಿರುವುದರಿಂದ ಸಿಎನ್‌ಜಿ, ಪಿಎನ್‌ಜಿ ಬಳಸುತ್ತಿರುವ ಆಟೊ ಚಾಲಕರು, ಗೃಹ ಕೈಗಾರಿಕೆ ನಡೆಸುವ ಗೃಹಿಣಿಯರಿಗೆ ಅನುಕೂಲವಾಗಲಿದೆ ಎಂದು ರಾಜ್ಯ ಸಚಿವ ಜಿತು ವಾಘಾನಿ ಹೇಳಿದ್ದಾರೆ.

ಫಿಫಾ ವಿಶ್ವಕಪ್: 28 ಲಕ್ಷ ಟಿಕೆಟ್ ಮಾರಾಟ

ದೋಹಾ (ರಾಯಿಟರ್ಸ್): ಕತಾರ್‌ನಲ್ಲಿ ನಡೆಯಲಿರುವ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಟಿಕೆಟ್‌ಗಳ ಮಾರಾಟ 30 ಲಕ್ಷ ತಲುಪುವ ನಿರೀಕ್ಷೆಯಿದೆ ಎಂದು ಫಿಫಾ ಅಧ್ಯಕ್ಷ ಗಿಯಾನಿ ಇನ್ಫೆಂಟಿನೊ ಹಾಗೂ ಸಂಘಟಕರು ಹೇಳಿದ್ದಾರೆ.

'ಇದುವರೆಗೆ ಒಟ್ಟು 28.9 ಲಕ್ಷ ಟಿಕೆಟ್‌ಗಳು ಮಾರಾಟವಾಗಿವೆ. ಕತಾರ್, ಅಮೆರಿಕ ಮತ್ತು ಸೌದಿ ಅರೇಬಿಯಾದ ಫುಟ್‌ಬಾಲ್ ಅಭಿಮಾನಿಗಳು ಅತಿಹೆಚ್ಚು ಟಿಕೆಟ್‌ಗಳನ್ನು ಖರೀದಿಸಿದ್ದಾರೆ' ಎಂದು ಟೂರ್ನಿಯ ಸಿಒಒ ಕಾಲಿನ್ ಸ್ಮಿತ್ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕುಸ್ತಿಪಟುಗಳಿಗೆ ಲಭಿಸದ ವೀಸಾ


ನವದೆಹಲಿ (ಪಿಟಿಐ): 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಬೇಕಿದ್ದ ಭಾರತದ 21 ಕುಸ್ತಿಪಟುಗಳಿಗೆ ವೀಸಾ ನೀಡಲು ಸ್ಪೇನ್ ರಾಯಭಾರ ಕಚೇರಿ ತಾಂತ್ರಿಕ ಕಾರಣ ಮುಂದೊಡ್ಡಿ ನಿರಾಕರಿಸಿದೆ.

ಸ್ಪೇನ್‌ನಲ್ಲಿ ನಡೆಯಬೇಕಿದ್ದ ಈ ಸ್ಪರ್ಧೆಗೆ 30 ಮಂದಿಯ ಭಾರತ ತಂಡ ತೆರಳಬೇಕಿತ್ತು. ಆದರೆ 9 ಮಂದಿಗೆ ಮಾತ್ರ ವೀಸಾ ನೀಡಿದೆ. ಸ್ಪೇನ್ ರಾಯಭಾರ ಕಚೇರಿ ತೀರ್ಮಾನಕ್ಕೆ ಭಾರತ ಕುಸ್ತಿ ಫೆಡರೇಷನ್ ಅಸಮಾಧಾನ ವ್ಯಕ್ತಪಡಿಸಿದೆ.

ಬಿನ್ನಿ ಆಯ್ಕೆಗೆ ವೇದಿಕೆ ಸಜ್ಜು

ಬಿಸಿಸಿಐ ಎಜಿಎಂ ಇಂದು: ಎಲ್ಲ ಪದಾಧಿಕಾರಿಗಳೂ ಅವಿರೋಧ ಆಯ್ಕೆ

ಮುಂಬೈ (ಪಿಟಿಐ): ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿರುವ ರೋಜರ್ ಬಿನ್ನಿ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) 36ನೇ ಅಧ್ಯಕ್ಷರಾಗಿ ಮಂಗಳವಾರ ಅಧಿಕಾರ ವಹಿಸಿಕೊಳ್ಳುವರು.


ರೋಜರ್ ಬಿನ್ನಿ

ನೂತನ ಪದಾಧಿಕಾರಿಗಳ ಆಯ್ಕೆಗೆ ಬಿಸಿಸಿಐ ಸರ್ವ ಸದಸ್ಯರ ಸಭೆ ಮಂಗಳವಾರ ಇಲ್ಲಿ ನಡೆಯಲಿದೆ. ಎಲ್ಲ ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆಯಲಿರುವುದರಿಂದ ಸಭೆಯುವ ಔಪಚಾರಿಕ ಎನಿಸಿದೆ. ಅಧಿಕೃತ ಘೋಷಣೆಯಷ್ಟೇ ನಡೆಯಲಿದೆ.

ಬಿನ್ನಿ ಅಲ್ಲದೆ ಜಯ್ ಶಾ (ಕಾರ್ಯದರ್ಶಿ), ರಾಜೀವ್ ಶುಕ್ಲಾ (ಉಪಾಧ್ಯಕ್ಷ), ಆಶೀಶ್ ಶೆಲಾರ್ (ಖಜಾಂಚಿ), ದೇವಜಿತ್ ಸೈಕಿಯಾ (ಜಂಟಿ ಕಾರ್ಯದರ್ಶಿ) ಅವರೂ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ. ಐಪಿಎಲ್ ಮುಖ್ಯಸ್ಥ ಸ್ಥಾನಕ್ಕೆ ಅರುಣ್ ಧುಮಾಲ್ ಅವರ ಆಯ್ಕೆಯೂ ಅವಿರೋಧವಾಗಿ ನಡೆಯಲಿದೆ.

ಐಸಿಸಿ ಅಧ್ಯಕ್ಷ ಸ್ಥಾನದ ಚರ್ಚೆ: ಅಂತರ ರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ಅಧ್ಯಕ್ಷ ಸ್ಥಾನದ ಚುನಾವಣೆಯು ಈ ಸಭೆಯ ಮುಖ್ಯ ಚರ್ಚಾ ವಿಷಯವಾಗುವ ಸಾಧ್ಯತೆಯಿದೆ.

ಐಸಿಸಿ ಚುನಾವಣೆಗೆ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕೇ ಅಥವಾ ಎರಡನೇ ಅವಧಿಗೆ ಮುಂದುವರಿಯಲು ಬಯಸಿರುವ ಹಾಲಿ ಅಧ್ಯಕ್ಷ ಗ್ರೆಗ್ ಬಾರ್ಕ್ಲೆ ಅವರನ್ನು ಬೆಂಬಲಿಸಬೇಕೇ ಎಂಬ ಬಗ್ಗೆ ಬಿಸಿಸಿಐ ಸದಸ್ಯರು ಚರ್ಚಿಸಲಿದ್ದಾರೆ.

ಐಸಿಸಿ ಅಧ್ಯಕ್ಷ ಸ್ಥಾನದ ಚುನಾವಣೆಗೆ ನಾಮಪತ್ರ ಸಲ್ಲಿಸಲು ಅ.20 ಕೊನೆಯ ದಿನ. ಐಸಿಸಿ ಮಂಡಳಿಯ ಸಭೆ ನ.11 ರಿಂದ 13ರ ವರೆಗೆ ಮೆಲ್ಬರ್ನ್‌ನಲ್ಲಿ ನಡೆಯಲಿದೆ.

ಸೌರವ್ ಗಂಗೂಲಿ ಅವರು ಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಉತ್ಸುಕತೆ ತೋರಿದ್ದಾರೆ. ಅವರ ಸ್ಪರ್ಧೆಗೆ ಬಿಸಿಸಿಐ ಅನುಮತಿ ನೀಡುವುದೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಗಂಗೂಲಿ ಅಲ್ಲದೆ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ಬಿಸಿಸಿಐ ಮಾಜಿ ಅಧ್ಯಕ್ಷ ಎನ್.ಶ್ರೀನಿವಾಸನ್ ಅವರ ಹೆಸರೂ ಕೇಳಿಬಂದಿದೆ.

'ಐಸಿಸಿ ಮಂಡಳಿ ಸಭೆಯಲ್ಲಿ ಜಯ್ ಶಾ ಅವರು ಭಾರತದ ಪ್ರತಿನಿಧಿಯಾಗಲಿರುವರು ಎಂಬುದು ಬಹುತೇಕ ಖಚಿತವಾಗಿದೆ. ಆದರೆ ಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಭಾರತದಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕೇ ಎಂಬುದನ್ನು ಸದಸ್ಯರು ನಿರ್ಧರಿಸಲಿದ್ದಾರೆ' ಎಂದು ಬಿಸಿಸಿಐ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗಂಗೂಲಿಗೆ ಅವಕಾಶ ನೀಡಿ: ಮಮತಾ

ಕೋಲ್ಕತ್ತ (ಪಿಟಿಐ): ಸೌರವ್ ಗಂಗೂಲಿ ಅವರಿಗೆ ಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅವಕಾಶ ನೀಡಬೇಕು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಗ್ರಹಿಸಿದ್ದಾರೆ.

'ತಾನೊಬ್ಬ ಉತ್ತಮ ಆಡಳಿತಗಾರ ಎಂಬುದನ್ನು ಗಂಗೂಲಿ ತೋರಿಸಿಕೊಟ್ಟಿದ್ದಾರೆ. ಆದರೂ ಎರಡನೇ ಅವಧಿಗೆ ಬಿಸಿಸಿಐ ಅಧ್ಯಕ್ಷರಾಗುವ ಅವಕಾಶ ಅವರಿಗೆ ನೀಡದೇ ಇರುವುದು ನನಗೆ ಆಘಾತ ಉಂಟುಮಾಡಿದೆ. ಇದು ಅವರಿಗೆ ಮಾಡಿರುವ ಅನ್ಯಾಯ. ಐಸಿಸಿ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಸ್ಪರ್ಧಿಸಲು ಅವರಿಗೆ ಅವಕಾಶ ನೀಡಬೇಕು. ಈ ವಿಷಯದಲ್ಲಿ ಮಧ್ಯಪ್ರವೇಶಿಸುವಂತೆ ಪ್ರಧಾನಿ ಮೋದಿ ಅವರಿಗೆ ಮನವಿ ಮಾಡುತ್ತೇನೆ' ಎಂದಿದ್ದಾರೆ.

ಪಾಕ್ ವೇಗಿ ಶಹೀನ್ ಶಾ ಅಫ್ರಿದಿಗೆ ಶಮಿ 'ಟಿಪ್ಸ್'

ಬ್ರಿಸ್ಬೇನ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಪಾಕಿಸ್ತಾನದ ವೇಗಿ ಶಹೀನ್ ಶಾ ಅಫ್ರಿದಿಗೆ ಬೌಲಿಂಗ್ 'ಟಿಪ್ಸ್' ಹಾಗೂ ಸುನಿಲ್ ಗಾವಸ್ಕರ್ ಅವರು ಪಾಕ್ ತಂಡದ ನಾಯಕ ಬಾಬರ್ ಅಜಂ ಅವರಿಗೆ ಬ್ಯಾಟಿಂಗ್ ಸಲಹೆ ನೀಡಿದ್ದಾರೆ.

ಸೋಮವಾರ ಅಭ್ಯಾಸದ ಅವಧಿಯಲ್ಲಿ ಶಮಿ ಮತ್ತು ಶಹೀನ್ ಅವರು ಭೇಟಿಯಾಗಿದ್ದಾರೆ. ಈ ವಿಡಿಯೊವನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ತನ್ನ ಟ್ವಿಟರ್ ಖಾತೆಯಲ್ಲಿ ಅಪ್‌ಲೋಡ್ ಮಾಡಿದೆ.

'ನಾನು ಬೌಲಿಂಗ್ ಆರಂಭಿಸಿದ ದಿನದಿಂದಲೂ ನಿಮ್ಮ ಬೌಲಿಂಗ್ ಶೈಲಿಯನ್ನು ಗಮನಿಸುತ್ತಾ ಬಂದಿದ್ದೇನೆ. ಬೌಲಿಂಗ್ ವೇಳೆ ನಿಮ್ಮ ಮಣಿಕಟ್ಟು ಚಲನೆ ಮತ್ತು ಸೀಮ್ ಪೊಸಿಷನ್ ನನಗೆ ಇಷ್ಟವಾಗಿದೆ' ಎಂದು ಶಹೀನ್ ಹೇಳಿದ್ದಾರೆ.

ಅದಕ್ಕೆ ಶಮಿ, 'ಬೌಲ್ ಮಾಡುವಾಗ ಮಣಿಕಟ್ಟಿನ ಚಲನೆ ಸರಿಯಾದ ರೀತಿಯಲ್ಲಿದ್ದರೆ, ಸೀಮ್ ಪೊಸಿಷನ್ ಕೂಡಾ ಉತ್ತಮವಾಗಿರುತ್ತದೆ' ಎಂದು ಸಲಹೆ ನೀಡಿದ್ದಾರೆ.

ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್: ದಾಖಲೆ ಬರೆದ ಜ್ಯೋತಿ

ರಿಲೇ: ಕರ್ನಾಟಕಕ್ಕೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಮಿಶ್ರ ರಿಲೇ ತಂಡ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಸೋಮವಾರ 4X400 ಮೀ. ರಿಲೇನಲ್ಲಿ ಎಂ.ಸಿದ್ದಪ್ಪ ಹೆಳವಿ, ಎಂ.ಲಿಖಿತಾ, ಎನ್.ಎಸ್. ಇಂಚರಾ ಮತ್ತು ನಿಹಾಲ್ ಜೊಯೆಲ್ ಅವರಿದ್ದ ತಂಡ 3 ನಿ. 21.53 ಸೆ.ಗಳಲ್ಲಿ ಗುರಿ ತಲುಪಿತು.

ಮಹಿಳೆಯರ 4X100 ಮೀಟರ್ಸ್ ರಿಲೇಯಲ್ಲಿ ಕರ್ನಾಟಕ ತಂಡವು ಬೆಳ್ಳಿ ಪದಕ ಗೆದ್ದಿತು. ನವಮಿ ಎಚ್. ಆರ್, ಸಿಮಿ ಎನ್. ಎಸ್, ಸ್ನೇಹಾ ಪಿ.ಜೆ. ಮತ್ತು ಸ್ನೇಹಾ ಎಸ್.ಎಸ್. ಅವರಿದ್ದ ತಂಡ 46.09 ಸೆಕೆಂಡುಗಳಲ್ಲಿ ಗುರಿ ತಲುಪಿತು.

ಜ್ಯೋತಿ ಯರಾಜಿ ದಾಖಲೆ: ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ರೈಲ್ವೇಸ್‌ನ ಜ್ಯೋತಿ ಯರಾಜಿ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆ ಉತ್ತಮಪಡಿಸಿಕೊಂಡು ಚಿನ್ನ ಗೆದ್ದರು. ಅಲ್ಲದೆ 13 ಸೆಕೆಂಡುಗಳೊಳಗೆ (12.82 ಸೆ.) ಸ್ಪರ್ಧೆ ಮುಗಿಸಿದ ಭಾರತದ ಮೊದಲ ಮಹಿಳಾ ಅಥ್ಲೀಟ್ ಎನಿಸಿಕೊಂಡರು. 13.04 ಸೆ.ಗಳಲ್ಲಿ ಗುರಿ ತಲುಪಿದ್ದು ಈ ಹಿಂದಿನ ದಾಖಲೆ ಆಗಿತ್ತು.

ಜಾವೆಲಿನ್ ಥ್ರೊನಲ್ಲಿ ರಾಜ್ಯದ ಕರೀಷ್ಮಾ ಸನಿಲ್ ಕಂಚು (51.39 ಮೀ.) ಕಂಚು ಜಯಿಸಿದರು.

ಫಲಿತಾಂಶಗಳು: ಪುರುಷರು: 110 ಮೀ. ಹರ್ಡಲ್ಸ್: ಮಾಯ್ಮೋನ್ ಪೌಲೋಸ್ (ಸರ್ವಿಸಸ್, ಕಾಲ: 13.97 ಸೆ.)–1, ತೇಜಸ್ ಶಿರ್ಸೆ (ಮಹಾರಾಷ್ಟ್ರ)–2, ಸಚಿನ್ ಬಿನು (ಸರ್ವಿಸಸ್)–3

5,000 ಮೀ.: ಸುನಿಲ್ ದಾವರ್ (ಮಧ್ಯಪ್ರದೇಶ, ಕಾಲ: 14 ನಿಮಿಷ 10.45 ಸೆ.)–1, ಗುಲ್‌ವೀರ್ ಸಿಂಗ್– 2, ಕರಣ್ ಮಾತ್ರೆ –3 (ಇಬ್ಬರೂ ಸರ್ವಿಸಸ್)

ಹೈಜಂಪ್: ಸರ್ವೇಶ್ ಕುಶಾರೆ (ಸರ್ವಿಸಸ್, ಎತ್ತರ: 2.18 ಮೀ.)–1, ಜೆಸ್ಸೆ ಸಂದೇಶ್ (ರೈಲ್ವೇಸ್)–2, ಚೇತನ್ ಬಾಲಸುಬ್ರಮಣ್ಯಂ (ಸರ್ವಿಸಸ್)–3

ಮಹಿಳೆಯರು: 5,000 ಮೀ. ಓಟ: ಪಾರುಲ್ ಚೌಧರಿ (ರೈಲ್ವೇಸ್, ಕಾಲ: 16 ನಿ.24.90 ಸೆ.)–1, ಸೀಮಾ (ಹಿಮಾಚಲ ಪ್ರದೇಶ)–2, ಕೋಮಲ್ ಚಂದ್ರಕಾಂತ್ ಜಾಗ್ (ರೈಲ್ವೇಸ್)–3.

ಜಾವೆಲಿನ್ ಥ್ರೊ: ಶಿಲ್ಪಾ ರಾಣಿ (ಹರಿಯಾಣ, ದೂರ: 55.18 ಮೀ.)–1, ರಶ್ಮಿ ಕೆ. (ರೈಲ್ವೇಸ್)–2, ಕರೀಷ್ಮಾ ಸನಿಲ್ (ಕರ್ನಾಟಕ)–3

ಶಾಟ್‌ಪಟ್: ಮನ್‌ಪ್ರೀತ್ ಕೌರ್ (ಪಂಜಾಬ್, ದೂರ: 16.84 ಮೀ.)–1, ಅಭಾ ಕತುವಾ (ಮಹಾರಾಷ್ಟ್ರ)–2, ಪರಮ್‌ಜೋತ್ ಕೌರ್ (ರೈಲ್ವೇಸ್)–3

100 ಮೀಟರ್ಸ್ ಹರ್ಡಲ್ಸ್: ಜ್ಯೋತಿ ಯರಾಜಿ (ರೈಲ್ವೇಸ್, ಕಾಲ: 12.82 ಸೆ.), ಸಪ್ನಾ ಕುಮಾರಿ (ಜಾರ್ಖಂಡ್)–2, ಆಗಸರ ನಂದಿನಿ (ತೆಲಂಗಾಣ)–3

4X100 ಮೀ. ರಿಲೇ: ರೈಲ್ವೇಸ್–1 (ಕಾಲ: 44.98 ಸೆ.), ಕರ್ನಾಟಕ–2, ತಮಿಳುನಾಡು–3

4X400 ಮೀ. ಮಿಶ್ರ ರಿಲೇ: ಕರ್ನಾಟಕ–1 (ಕಾಲ: 3 ನಿ. 21.53 ಸೆ.), ರೈಲ್ವೇಸ್–2, ತಮಿಳುನಾಡು–3


4X100 ಮೀಟರ್ಸ್ ಮಹಿಳಾ ರಿಲೇಯಲ್ಲಿ ಬೆಳ್ಳಿ ಗೆದ್ದ ಕರ್ನಾಟಕ ತಂಡ: ನವಮಿ ಎಚ್.ಆರ್, ಸ್ನೇಹಾ ಪಿ.ಜೆ, ಸಿಮಿ ಎನ್.ಎಸ್ ಮತ್ತು ಸ್ನೇಹಾ ಎಸ್.ಎಸ್.

ನ.5ರಿಂದ ಮೌಂಟೇನ್ ಬೈಕ್ ಸೈಕ್ಲಿಂಗ್

ಬೆಂಗಳೂರು: ನವೆಂಬರ್ 5 ಮತ್ತು 6ರಂದು ರಾಜ್ಯಮಟ್ಟದ ಮೌಂಟೇನ್ ಬೈಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಬೀದರ್‌ನಲ್ಲಿ ನಡೆಯಲಿದೆ. 14, 16, ಮತ್ತು 18 ವಯೋಮಾನದ ಬಾಲಕ-ಬಾಲಕಿಯರಿಗೆ, 23 ವರ್ಷದೊಳಗಿನ ಪುರುಷರು ಮತ್ತು ಮುಕ್ತ ಪುರುಷ- ಮಹಿಳೆಯರಿಗಾಗಿ ಪ್ರತ್ಯೇಕ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಮಹಾರಾಷ್ಟ್ರದಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಾಗಿ ರಾಜ್ಯ ತಂಡದ ಆಯ್ಕೆಯನ್ನೂ ಈ ವೇಳೆ ನಡೆಸಲಾಗುತ್ತದೆ. ಮಾಹಿತಿಗಾಗಿ ರಾಜ್ಯ ಸೈಕ್ಲಿಂಗ್ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀಶೈಲ ಎಂ. ಕುರಣಿ (ಮೊ. ಸಂ. 9008377875) ಅವರನ್ನು ಸಂಪರ್ಕಿಸಿ

ಮೊಹಮ್ಮದ್ ಶಮಿ ಮಿಂಚಿನ ಬೌಲಿಂಗ್

ಟಿ20 ವಿಶ್ವಕಪ್ ಕ್ರಿಕೆಟ್: ಅಭ್ಯಾಸ ಪಂದ್ಯದಲ್ಲಿ ಆಸ್ಟ್ರೇಲಿಯಾ ಮಣಿಸಿದ ಭಾರತ

ಬ್ರಿಸ್ಬೇನ್ (ಪಿಟಿಐ): ತಮ್ಮ ಫಿಟ್‌ನೆಸ್ ಬಗ್ಗೆ ಇರುವ ಅನುಮಾನಗಳನ್ನು ದೂರ ಮಾಡಿದ ವೇಗದ ಬೌಲರ್ ಮೊಹಮ್ಮದ್ ಶಮಿ (4ಕ್ಕೆ 3), ಆಸ್ಟ್ರೇಲಿಯಾ ಎದುರಿನ ಟಿ20 ಕ್ರಿಕೆಟ್ ಅಭ್ಯಾಸ ಪಂದ್ಯದಲ್ಲಿ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಟಿ20 ವಿಶ್ವಕಪ್‌ಗೆ ಪೂರ್ವಭಾವಿಯಾಗಿ ಸೋಮವಾರ ನಡೆದ ಪಂದ್ಯದಲ್ಲಿ ಭಾರತ, ಆರು ರನ್‌ಗಳಿಂದ ಗೆದ್ದಿತು.

ಮೊದಲು ಬ್ಯಾಟ್ ಮಾಡಿದ ರೋಹಿತ್ ಶರ್ಮ ಬಳಗ, ಕೆ.ಎಲ್. ರಾಹುಲ್ (57 ರನ್, 33 ಎ., 4X6, 6X3) ಮತ್ತು ಸೂರ್ಯಕುಮಾರ್ ಯಾದವ್ (50 ರನ್, 33 ಎ., 4X6, 6X1) ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 186 ರನ್ ಪೇರಿಸಿತು. ಆತಿಥೇಯ ತಂಡ 20 ಓವರ್‌ಗಳಲ್ಲಿ 180 ರನ್‌ಗಳಿಗೆ ಆಲೌಟಾಯಿತು.

ಸವಾಲಿನ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡಕ್ಕೆ ಆ್ಯರನ್ ಫಿಂಚ್ (76 ರನ್, 54 ಎ., 4X7, 6X3) ಮತ್ತು ಮಿಚೆಲ್ ಮಾರ್ಷ್ (35 ರನ್, 18 ಎ., 4X4, 6X2) ಮೊದಲ ವಿಕೆಟ್‌ಗೆ 64 ರನ್ ಸೇರಿಸಿದರು. ಗ್ಲೆನ್ ಮ್ಯಾಕ್ಸ್‌ವೆಲ್ (23 ರನ್, 16 ಎ.) ಕೂಡಾ ಉತ್ತಮ ಆಟವಾಡಿದ್ದರಿಂದ ಆಸ್ಟ್ರೇಲಿಯಾ ತಂಡ ಗೆಲುವಿನತ್ತ ದಿಟ್ಟ ಹೆಜ್ಜೆಯಿಟ್ಟಿತ್ತು.


ಮೊಹಮ್ಮದ್ ಶಮಿ (ಬಲ) ಅವರನ್ನು ರೋಹಿತ್ ಅಭಿನಂದಿಸಿದರು –ಎಪಿ ಚಿತ್ರ

ತಂಡದ ಜಯಕ್ಕೆ ಕೊನೆಯ ಎರಡು ಓವರ್‌ಗಳಲ್ಲಿ 16 ರನ್‌ಗಳು ಬೇಕಿದ್ದವು. ಕೈಯಲ್ಲಿ ಆರು ವಿಕೆಟ್‌ಗಳು ಇದ್ದವು. 19ನೇ ಓವರ್ ಬೌಲ್ ಮಾಡಿದ ಹರ್ಷಲ್ ಪಟೇಲ್ ಕೇವಲ ಐದು ರನ್ ಬಿಟ್ಟುಕೊಟ್ಟು ಒಂದು ವಿಕೆಟ್ ಪಡೆದರು. ವಿರಾಟ್ ಕೊಹ್ಲಿ ಅವರ ಮಿಂಚಿನ ಫೀಲ್ಡಿಂಗ್‌ಗೆ ಟಿಮ್ ಡೇವಿಡ್ (5) ರನೌಟ್ ಆದರು.

ಕೊನೆಯ ಓವರ್‌ನಲ್ಲಿ ಗೆಲುವಿಗೆ 11 ರನ್‌ಗಳ ಅವಶ್ಯಕತೆಯಿತ್ತು. ಕೋವಿಡ್‌ನಿಂದ ಚೇತರಿಸಿಕೊಂಡು ಕಣಕ್ಕಿಳಿದಿರುವ ಮೊಹಮ್ಮದ್ ಶಮಿ ಅವರಿಗೆ 20ನೇ ಓವರ್ ಬೌಲ್ ಮಾಡುವ ಸವಾಲನ್ನು ನಾಯಕ ರೋಹಿತ್ ನೀಡಿದರು.

ಒಂದರ ಮೇಲೊಂದರಂತೆ ಯಾರ್ಕರ್ ಎಸೆತಗಳನ್ನು ಹಾಕಿದ ಶಮಿ ಅವರು ಜೋಶ್ ಇಂಗ್ಲಿಸ್, ಪ್ಯಾಟ್ ಕಮಿನ್ಸ್ ಮತ್ತು ಕೇನ್ ರಿಚರ್ಡ್ಸನ್ ಅವರ ವಿಕೆಟ್ ಪಡೆದರು. ಆಸ್ಟನ್ ಅಗರ್ ರನೌಟ್ ಆದರು. 9 ರನ್ ಗಳಿಸುವಷ್ಟರಲ್ಲಿ ಕೊನೆಯ ಆರು ವಿಕೆಟ್‌ಗಳನ್ನು ಕಳೆದುಕೊಂಡ ಆಸ್ಟ್ರೇಲಿಯಾ, ಆಲೌಟ್ ಆಯಿತು.

'ಶಮಿ ಅವರು ಹಲವು ಸಮಯದ ಬಿಡುವಿನ ಬಳಿಕ ತಂಡಕ್ಕೆ ಮರಳಿದ್ದಾರೆ. ಆದ್ದರಿಂದ ಅವರಿಗೆ ಒಂದು ಓವರ್ ನೀಡಲು ನಿರ್ಧರಿಸಿದೆ. ಕೊನೆಯ ಓವರ್ ಬೌಲ್ ಮಾಡುವ ಸವಾಲು ಅವರಿಗೆ ನೀಡಿದೆ. ಅವರ ಸಾಮರ್ಥ್ಯ ಏನೆಂಬುದು ನೀವು ನೋಡಿದ್ದೀರಿ' ಎಂದು ರೋಹಿತ್ ಅವರು ಶಮಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ರಾಹುಲ್, ಸೂರ್ಯಕುಮಾರ್ ಅರ್ಧಶತಕ
- ಭಾರತಕ್ಕೆ 6 ರನ್ ಗೆಲುವು
- ಫಾರ್ಮ್ ಕಂಡುಕೊಂಡ ಫಿಂಚ್

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 186 (ಕೆ. ಎಲ್.ರಾಹುಲ್ 57, ಸೂರ್ಯಕುಮಾರ್ ಯಾದವ್ 50, ದಿನೇಶ್ ಕಾರ್ತಿಕ್ 20, ಕೇನ್ ರಿಚರ್ಡ್ಸನ್ 30ಕ್ಕೆ 4, ಗ್ಲೆನ್ ಮ್ಯಾಕ್ಸ್‌ವೆಲ್ 28ಕ್ಕೆ 1, ಆಸ್ಟನ್ ಅಗರ್ 34ಕ್ಕೆ 1). ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 180 (ಮಿಚೆಲ್ ಮಾರ್ಷ್ 35, ಆ್ಯರನ್ ಫಿಂಚ್ 76, ಗ್ಲೆನ್ ಮ್ಯಾಕ್ಸ್‌ವೆಲ್ 23, ಮೊಹಮ್ಮದ್ ಶಮಿ 4ಕ್ಕೆ 3, ಭುವನೇಶ್ವರ್ ಕುಮಾರ್ 20ಕ್ಕೆ 2, ಅರ್ಷದೀಪ್ ಸಿಂಗ್ 34ಕ್ಕೆ 1, ಹರ್ಷಲ್ ಪಟೇಲ್ 30ಕ್ಕೆ 1, ಯಜುವೇಂದ್ರ ಚಾಹಲ್ 28ಕ್ಕೆ 1) ಫಲಿತಾಂಶ: ಭಾರತಕ್ಕೆ 6 ರನ್ ಗೆಲುವು

ವಿಂಡೀಸ್‌ಗೆ ಸ್ಕಾಟ್ಲೆಂಡ್ ಆಘಾತ

ಹೋಬರ್ಟ್ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಅಚ್ಚರಿಯ ಫಲಿತಾಂಶ ಮುಂದುವರಿದಿದ್ದು, ಸ್ಕಾಟ್ಲೆಂಡ್ ತಂಡ ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್‌ಗೆ ಆಘಾತ ನೀಡಿತು.

ಹೋಬರ್ಟ್‌ನಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸ್ಕಾಟ್ಲೆಂಡ್ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 160 ರನ್ ಪೇರಿಸಿತು. ವಿಂಡೀಸ್ 18.3 ಓವರ್‌ಗಳಲ್ಲಿ 118ಕ್ಕೆ ಆಲೌಟಾಗಿ 42 ರನ್‌ಗಳ ಸೋಲೊಪ್ಪಿಕೊಂಡಿತು.

ಅಜೇಯ ಅರ್ಧಶತಕ ಗಳಿಸಿದ ಆರಂಭಿಕ ಬ್ಯಾಟರ್ ಜಾರ್ಜ್ ಮನ್ಸಿ (66 ರನ್, 53 ಎ., 4X9) ಮತ್ತು ಪ್ರಭಾವಿ ಬೌಲಿಂಗ್ ಪ್ರದರ್ಶನ ನೀಡಿದ ಮಾರ್ಕ್ ವಾಟ್ (12ಕ್ಕೆ 3) ಹಾಗೂ ಬ್ರಾಡ್ ವೀಲ್ (32ಕ್ಕೆ 2) ಅವರು ಸ್ಕಾಟ್ಲೆಂಡ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಭಾನುವಾರ 'ಎ' ಗುಂಪಿನ ಪಂದ್ಯದಲ್ಲಿ ನಮಿಬಿಯಾ, ಏಷ್ಯಾ ಕಪ್ ಚಾಂಪಿಯನ್ ಶ್ರೀಲಂಕಾಕ್ಕೆ ಆಘಾತ ನೀಡಿತ್ತು.

ಜಿಂಬಾಬ್ವೆಗೆ ಗೆಲುವು: ಅರ್ಹತಾ ಹಂತದ ಇನ್ನೊಂದು ಪಂದ್ಯದಲ್ಲಿ ಜಿಂಬಾಬ್ವೆ 31 ರನ್‌ಗಳಿಂದ ಐರ್ಲೆಂಡ್ ತಂಡವನ್ನು ಮಣಿಸಿತು.


ಜಾರ್ಜ್ ಮನ್ಸಿ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರ್: ಸ್ಕಾಟ್ಲೆಂಡ್ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 160 (ಜಾರ್ಜ್ ಮನ್ಸಿ ಔಟಾಗದೆ 66, ಮೈಕಲ್ ಜೋನ್ಸ್ 20, ರಿಚೀ ಬೆರಿಂಗ್ಟನ್ 16, ಕಾಲಂ ಮೆಕ್‌ಲಿಯೊಡ್ 23, ಅಲ್ಜರಿ ಜೋಸೆಫ್ 22ಕ್ಕೆ 2, ಜೇಸನ್ ಹೋಲ್ಡರ್ 14ಕ್ಕೆ 2, ಒಡೆನ್ ಸ್ಮಿತ್ 31ಕ್ಕೆ 1) ವೆಸ್ಟ್ ಇಂಡೀಸ್: 18.3 ಓವರ್‌ಗಳಲ್ಲಿ 118 (ಕೈಲ್ ಮೇಯರ್ಸ್ 20, ಎವಿನ್ ಲೆವಿಸ್ 14, ಬ್ರೆಂಡನ್ ಕಿಂಗ್ 17, ಜೇಸನ್ ಹೋಲ್ಡರ್ 38, ಮಾರ್ಕ್ ವಾಟ್ 12ಕ್ಕೆ 3, ಬ್ರಾಡ್ ವೀಲ್ 32ಕ್ಕೆ 2, ಮೈಕಲ್ ಲೆಸ್ಕ್ 15ಕ್ಕೆ 2) ಫಲಿತಾಂಶ: ಸ್ಕಾಟ್ಲೆಂಡ್‌ಗೆ 42 ರನ್ ಗೆಲುವು

ಎರಡನೇ ಪಂದ್ಯ: ಜಿಂಬಾಬ್ವೆ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 174 (ಸಿಕಂದರ್ ರಜಾ 82, ವೆಸ್ಲಿ ಮೆಡೆವರೆ 22, ಮಿಲ್ಟನ್ ಶುಂಬಾ 16, ಲೂಕ್ ಜಾಂಗ್ವೆ ಔಟಾಗದೆ 20, ಜೋಶ್ ಲಿಟ್ಲ್ 24ಕ್ಕೆ 3, ಮಾರ್ಕ್ ಅಡೇರ್ 39ಕ್ಕೆ 2, ಸಿಮಿ ಸಿಂಗ್ 31ಕ್ಕೆ 2) ಐರ್ಲೆಂಡ್ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 143 (ಕರ್ಟಿಸ್ ಕ್ಯಾಂಫರ್ 27, ಜಾರ್ಜ್ ಡಾಕ್ರೆಲ್ 24, ಗರೆತ್ ಡೆಲಾನಿ 24, ರಿಚರ್ಡ್ ಎಂಗರ್ವಾ 22ಕ್ಕೆ 2, ಟೆಂಡೈ ಚಟಾರ 22ಕ್ಕೆ 2, ಬ್ಲೆಸ್ಸಿಂಗ್ ಮುಜರಬನಿ 23ಕ್ಕೆ 3) ಫಲಿತಾಂಶ: ಜಿಂಬಾಬ್ವೆಗೆ 31 ರನ್ ಗೆಲುವು

ಸಂಕ್ಷಿಪ್ತ ಸುದ್ದಿ

ವಿಶ್ವ ಶೂಟಿಂಗ್: ಸಮೀರ್‌ಗೆ ಬೆಳ್ಳಿ

ಕೈರೊ (ಪಿಟಿಐ): ಭಾರತದ ಸಮೀರ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಜೂನಿಯರ್ ಪುರುಷರ 25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದರು.

ಪದಕ ಸುತ್ತಿನ ಹಣಾಹಣಿಯಲ್ಲಿ ಸಮೀರ್ 23 ಪಾಯಿಂಟ್ಸ್ ಕಲೆಹಾಕಿದರು. 25 ಪಾಯಿಂಟ್ಸ್ ಸಂಗ್ರಹಿಸಿದ ಚೀನಾದ ಲಿಯು ಯಾಂಗ್‌ಪನ್ ಚಿನ್ನ ಪಡೆದರು. ಸಮೀರ್ ಅವರು ಅರ್ಹತಾ ಸುತ್ತಿನಲ್ಲಿ 573 ಸ್ಕೋರ್‌ಗಳೊಂದಿಗೆ ನಾಲ್ಕನೇ ಸ್ಥಾನ ಪಡೆದು ಫೈನಲ್ ತಲುಪಿದ್ದರು.

ಕಣದಲ್ಲಿದ್ದ ಭಾರತದ ಇತರ ಶೂಟರ್‌ಗಳಾದ ಉದಯ್‌ವೀರ್ ಸಿಂಗ್, ಜತಿನ್, ಆದರ್ಶ್ ಸಿಂಗ್ ಮತ್ತು ಹರ್ಷವರ್ಧನ ಯಾದವ್ ಅವರು ಅರ್ಹತಾ ಹಂತದಲ್ಲೇ ಹೊರಬಿದ್ದರು.

ಕ್ರಿಕೆಟ್: ಕರ್ನಾಟಕ ಮಹಿಳೆಯರಿಗೆ ಜಯ

ಬೆಂಗಳೂರು: ಮೋನಿಕಾ ಸಿ. ಪಟೇಲ್ (9ಕ್ಕೆ 3) ಮತ್ತು ಸಹನಾ ಎಸ್. ಪವಾರ್ (18ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ಬಲದಿಂದ ಕರ್ನಾಟಕ ಮಹಿಳಾ ತಂಡದವರು ಬಿಸಿಸಿಐ ಟ್ವೆಂಟಿ–20 ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸಿದರು.

ಸೂರತ್‌ನ ಪಿಥ್ವಾಲಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕರ್ನಾಟಕ 9 ವಿಕೆಟ್‌ಗಳಿಂದ ಅಸ್ಸಾಂ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ಅಸ್ಸಾಂ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 81 (ರಶ್ಮಿ ಡೇ 34; ಮೋನಿಕಾ ಸಿ. ಪಟೇಲ್ 9ಕ್ಕೆ 3, ಸಹನಾ ಎಸ್. ಪವಾರ್ 18ಕ್ಕೆ 3). ಕರ್ನಾಟಕ: 12.1 ಓವರ್‌ಗಳಲ್ಲಿ 1 ವಿಕೆಟ್‌ಗೆ 82 (ಶುಭಾ ಸತೀಶ್ ಔಟಾಗದೆ 38, ದಿವ್ಯಾ ಜಿ. ಔಟಾಗದೆ 36). ಫಲಿತಾಂಶ: ಕರ್ನಾಟಕ ತಂಡಕ್ಕೆ 9 ವಿಕೆಟ್‌ಗಳ ಜಯ.

ಪ್ರೊ ಕಬಡ್ಡಿ ಲೀಗ್: ಡೆಲ್ಲಿಗೆ ತಂಡದ ಗೆಲುವಿನ ಓಟ

ತಲೈವಾಸ್‌ಗೆ ರೋಚಕ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಮಾಂಶು ಸಿಂಗ್ ಅವರ ಮಿಂಚಿನ ಆಟದ ಬಲದಿಂದ ತಮಿಳ್ ತಲೈವಾಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ರೋಚಕ ಜಯ ಸಾಧಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ತಲೈವಾಸ್ 33–32 ರಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿತು. ಹಿಮಾಂಶು 11 ಪಾಯಿಂಟ್ಸ್ ಕಲೆಹಾಕಿದರೆ, ನರೇಂದರ್ ಅವರು 9 ಪಾಯಿಂಟ್ಸ್ ತಂದಿತ್ತರು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	5	5	0	0	25
ಜೈಪುರ	4	3	1	0	16
ಬೆಂಗಾಲ್	4	3	1	0	15
ಯುಪಿ	4	2	2	0	12
ಹರಿಯಾಣ	4	2	2	0	11
ಮುಂಬಾ	4	2	2	0	11


ತಮಿಳ್ ತಲೈವಾಸ್ ತಂಡದ ಆಟಗಾರರು ಪಟ್ನಾ ಪೈರೇಟ್ಸ್ ತಂಡದ ರೋಹಿತ್ ಗುಲಿಯಾ ಅವರನ್ನು ಹಿಡಿತಕ್ಕೆ ಪಡೆದರು –ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್

ಮೊದಲರ್ಧ ಕೊನೆಗೊಂಡಾಗ ಪೈರೇಟ್ಸ್ 17–15 ರಲ್ಲಿ ಮುನ್ನಡೆಯಲ್ಲಿತ್ತು. ಪಟ್ನಾ ತಂಡದ ರೋಹಿತ್ ಗುಲಿಯಾ ಆರಂಭದಲ್ಲಿ ಚುರುಕಿನ ಪ್ರದರ್ಶನ ನೀಡಿದರು.

ಕೊನೆಯ ಕೆಲವು ನಿಮಿಷಗಳು ಇದ್ದಾಗ ತಲೈವಾಸ್ ತಿರುಗೇಟು ನೀಡಿತು. 37ನೇ ನಿಮಿಷದಲ್ಲಿ ಹಿಮಾಂಶು ಅವರ ಮಿಂಚಿನ ರೇಡಿಂಗ್‌ನ ಬಲದಿಂದ ತಲೈವಾಸ್ 29–29 ರಲ್ಲಿ ಸಮಬಲ ಸಾಧಿಸಿತು. ಆ ಬಳಿಕ ಮುನ್ನಡೆ ಕಾಪಾಡಿಕೊಂಡು ಪಂದ್ಯ ತನ್ನದಾಗಿಸಿಕೊಂಡಿತು.

ಡೆಲ್ಲಿಗೆ ಜಯ: ದಿನದ ಇನ್ನೊಂದು ಪಂದ್ಯದಲ್ಲಿ ದಬಂಗ್ ಡೆಲ್ಲಿ ತಂಡ 38–36 ರಲ್ಲಿ ಹರಿಯಾಣ ಸ್ಟೀಲರ್ಸ್ ವಿರುದ್ಧ ಜಯಿಸಿತು.

ಚೆಸ್: ವಿಶ್ವ ಚಾಂಪಿಯನ್ ಮಣಿಸಿದ ಅತಿ ಕಿರಿಯ ಆಟಗಾರ

ಕಾರ್ಲ್‌ಸನ್‌ಗೆ ಸೋಲುಣಿಸಿದ ಗುಕೇಶ್

ಚೆನ್ನೈ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ. ಗುಕೇಶ್ ಅವರು ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಸೋಲುಣಿಸಿದ ಅತಿ ಕಿರಿಯ ಚೆಸ್ ಆಟಗಾರ ಎನಿಸಿಕೊಂಡಿದ್ದಾರೆ.

ಆನ್‌ಲೈನ್ ಮೂಲಕ ನಡೆಯುತ್ತಿರುವ ಏಮ್‌ಚೆಸ್ ರ‍್ಯಾಪಿಡ್ ಚೆಸ್ ಟೂರ್ನಿಯ ಪ್ರಿಲಿಮನರಿ ಹಂತದ ಒಂಬತ್ತನೇ ಸುತ್ತಿನಲ್ಲಿ, ಗುಕೇಶ್ ಅವರಿಗೆ ನಾರ್ವೆ ಆಟಗಾರನ ಎದುರು ಜಯ ಒಲಿಯಿತು. ಪಂದ್ಯದಲ್ಲಿ 16 ವರ್ಷದ ಗುಕೇಶ್, ಬಿಳಿಕಾಯಿಗಳೊಂದಿಗೆ ಆಡಿ 19 ನಡೆಗಳಲ್ಲಿ ಜಯ ಸಾಧಿಸಿದರು.

ಟೂರ್ನಿಯ 12 ಸುತ್ತುಗಳ ಅಂತ್ಯಕ್ಕೆ ಗುಕೇಶ್, ಪಾಯಿಂಟ್ಸ್ ಪಟ್ಟಿಯಲ್ಲಿ ಸೋಮವಾರ ಮೂರನೇ ಸ್ಥಾನಕ್ಕೇರಿದರು. ಅವರ ಬಳಿ ಸದ್ಯ 21 ಪಾಯಿಂಟ್‌ಗಳಿವೆ.


ಡಿ. ಗುಕೇಶ್

ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ದುಡಾ (25 ಪಾಯಿಂಟ್ಸ್) ಮತ್ತು ಅಜರ್‌ಬೈಜಾನ್‌ನ ಶಕರಿಯಾರ್ ಮಮೆದ್ಯೆರೊವ್ (23) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿದ್ದರು. ಭಾರತದ ಅರ್ಜುನ್ ಎರಿಗೈಸಿ, ಭಾನುವಾರ ಕಾರ್ಲ್‌ಸನ್ ಅವರನ್ನು ಸೋಲಿಸಿದ್ದರು.

'ಕಾರ್ಲ್‌ಸನ್ ವಿಶ್ವಚಾಂಪಿಯನ್ ಆದ ಬಳಿಕ ಅವರನ್ನು ಮಣಿಸಿದ ಅತಿ ಕಿರಿಯ ಆಟಗಾರ ಗುಕೇಶ. 16 ವರ್ಷದ ಸೂಪರ್‌ಸ್ಟಾರ್‌ಗೆ ಅಭಿನಂದನೆಗಳು' ಎಂದು ಮೆಲ್ಟ್‌ವೇರ್ ಚಾಂಪಿಯನ್ ಚೆಸ್ ಟೂರ್ ಟ್ವಿಟರ್ ಖಾತೆಯಲ್ಲಿ ಬರೆಯಲಾಗಿದೆ.

ಗುಕೇಶ್ ಅವರ ವಯಸ್ಸು ಈಗ 16 ವರ್ಷ 4 ತಿಂಗಳು 20 ದಿನ. ಮ್ಯಾಗ್ನಸ್ ಅವರನ್ನು ಮಣಿಸಿದ ಅತಿ ಕಿರಿಯ ಎಂಬ ಈ ಹಿಂದಿನ ದಾಖಲೆ ಭಾರತದ ಪ್ರಗ್ನಾನಂದ (16 ವರ್ಷ, 6 ತಿಂಗಳು, 10 ದಿನ) ಅವರ ಹೆಸರಿನಲ್ಲಿತ್ತು.

'ಕಾರ್ಲ್‌ಸನ್ ಅವರನ್ನು ಸೋಲಿಸುವುದು ಯಾವಾಗಲೂ ವಿಶೇಷ ಕ್ಷಣ. ಆದರೆ ಈ ಗೆಲುವಿನ ಕುರಿತು ಹೆಚ್ಚೇನೂ ಹೆಮ್ಮೆ ಇಲ್ಲ' ಎಂದರು ಗುಕೇಶ್.

ಟೂರ್ನಿಯಲ್ಲಿ ಅರ್ಜುನ್ 4ನೇ ಸ್ಥಾನದಲ್ಲಿದ್ದಾರೆ. ಕಾರ್ಲ್‌ಸನ್ 5ನೇ ಸ್ಥಾನದಲ್ಲಿದ್ದಾರೆ.


ಫುಟ್‌ಬಾಲ್: ಭಾರತಕ್ಕೆ ಸೋಲು

ಭುವನೇಶ್ವರ: ಭಾರತ ತಂಡದವರು ಫಿಫಾ 17 ವರ್ಷದೊಳಗಿನವರ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ ಯಲ್ಲಿ ಸತತ ಮೂರನೇ ಸೋಲು ಅನುಭವಿಸಿದರು. ಕಳಿಂಗ ಕ್ರೀಡಾಂಗಣದಲ್ಲಿ ಸೋಮ ವಾರ ನಡೆದ 'ಎ' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಬ್ರೆಜಿಲ್ 5–0ರಿಂದ ಭಾರತವನ್ನು ಮಣಿಸಿತು.

ಇದೇ ಮೊದಲ ಬಾರಿ ವಿಶ್ವಕಪ್‌ನಲ್ಲಿ ಆಡಿದ ಭಾರತ ಲೀಗ್ ಹಂತದ ಎಲ್ಲ ಮೂರು ಪಂದ್ಯಗಳಲ್ಲಿ ಸೋತು ಹೊರಬಿದ್ದಿತು. ಆತಿಥೇಯರು ಈ ಹಿಂದಿನ ಪಂದ್ಯಗಳಲ್ಲಿ ಅಮೆರಿಕ ಹಾಗೂ ಮೊರೊಕ್ಕೊ ಎದುರು ಮುಗ್ಗರಿಸಿದ್ದರು.

ಮ್ಯಾರಥಾನ್: ಬೆಳ್ಳಿಯಪ್ಪಗೆ ಅಗ್ರಸ್ಥಾನ

ಬೆಂಗಳೂರು: ಎ.ಬಿ. ಬೆಳ್ಳಿಯಪ್ಪ ಅವರು ಶ್ರೀರಾಮ್ ಪ್ರಾಪರ್ಟೀಸ್ ಇಲ್ಲಿ ಪ್ರಾಯೋಜಿಸಿದ್ದ ಬೆಂಗಳೂರು ಮ್ಯಾರಥಾನ್‌ನಲ್ಲಿ ಅಗ್ರಸ್ಥಾನ ಗಳಿಸಿದರು.


ಎ.ಬಿ. ಬೆಳ್ಳಿಯಪ್ಪ

ಭಾನುವಾರ ಪುರುಷರ ವಿಭಾಗದ ಮ್ಯಾರಥಾನ್‌ನಲ್ಲಿ ಬೆಳ್ಳಿಯಪ್ಪ ಅವರು 2 ತಾಸು 22 ನಿಮಿಷ 3 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಅನಿಲ್ ಕುಮಾರ್ ಸಿಂಗ್ ಮತ್ತು ಯೋಗೇಶ್ ಕುಮಾರ್ ಶರ್ಮಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ದಿವ್ಯಾಂಕಾ ಚೌಧರಿ (3 ತಾಸು 32 ನಿ. 12 ಸೆ.) ಮೊದಲ ಸ್ಥಾನ ತಮ್ಮದಾಗಿಸಿಕೊಂಡರು.

ಫಲಿತಾಂಶಗಳು: ಪುರುಷರು: ಮ್ಯಾರಥಾನ್: ಎ.ಬಿ. ಬೆಳ್ಳಿಯಪ್ಪ (ಕಾಲ 2 ತಾಸು 22 ನಿ. 3 ಸೆ.)–1, ಅನಿಲ್ ಕುಮಾರ್ ಸಿಂಗ್–2, ಯೋಗೇಶ್ ಕುಮಾರ್ ಶರ್ಮಾ–3. ಹಾಫ್ ಮ್ಯಾರಥಾನ್: ಅಶ್ವಿನ್ ಜಿ.ಎ. (ಕಾಲ: 1 ತಾ. 13 ನಿ. 44 ಸೆ.)–1, ವೈಭವ್ ಪಾಟೀಲ್–2, ಸಂತೋಷ್ ಕುಮಾರ್–3.

ಮಹಿಳೆಯರು: ಮ್ಯಾರಥಾನ್: ದಿವ್ಯಾಂಕಾ ಚೌಧರಿ (ಕಾಲ: 3 ತಾ. 32 ನಿ. 12 ಸೆ.)–1. ಹಾಫ್ ಮ್ಯಾರಥಾನ್: ಫರಹೀನ್ ಫಿರ್ದೋಸ್ (1 ತಾ. 32 ನಿ. 13 ಸೆ.)–1, ತೇಜಸ್ವಿ ಎನ್.ಎಲ್–2, ದೀಪಾ ನಾಯಕ್–3.